ಗುರುವಾರ, ಡಿಸೆಂಬರ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 345 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಕೇಂದ್ರ ಸರ್ಕಾರದ 9.95 ಲಕ್ಷ ಹುದ್ದೆಗಳು ಖಾಲಿ

ಸಹ ಪ್ರಾಧ್ಯಾಪಕರಿಗೆ ದಕ್ಕದ 'ಪ್ರೊಫೆಸರ್' ಗಿರಿ 7
60 ವರ್ಷ ಮೀರಿದವರಿಗೆ ಉಚಿತ ತಪಾಸಣೆ 5
ಇಂದು ಸ್ಪರ್ಧಾವಾಣಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,678 ▲	18,660 ▲	₹ 56,200 (ಬೆಂಗಳೂರು) ▲	₹69,700 (ಬೆಂಗಳೂರು) ▲	82.49 ▲

'ರೈಲ್ವೆಯಲ್ಲಿ ಹಿರಿಯರಿಗೆ ಸದ್ಯಕ್ಕಿಲ್ಲ ರಿಯಾಯಿತಿ ಪ್ರಯಾಣ'

ನವದೆಹಲಿ (ಪಿಟಿಐ): ರೈಲ್ವೆಯಲ್ಲಿ ರಿಯಾಯಿತಿ ಮತ್ತು ಇತರ ವೆಚ್ಚಗಳು ತುಂಬಾ ಹೆಚ್ಚಾಗಿದ್ದು, ಹಿರಿಯ ನಾಗರಿಕರಿಗೆ ಪ್ರಯಾಣದಲ್ಲಿ ಸದ್ಯಕ್ಕೆ ಯಾವುದೇ ರಿಯಾಯಿತಿ ಸೌಲಭ್ಯವಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ನೀಡಿದ್ದಾರೆ.

ಲೋಕಸಭೆಯಲ್ಲಿ ಮಹಾರಾಷ್ಟ್ರದ ಪಕ್ಷೇತರ ಸಂಸದ ನವನೀತ್ ರಾಣಾ ಅವರು ರೈಲು ಪ್ರಯಾಣದಲ್ಲಿ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರಿಯಾಯಿತಿ ದರದ ಪ್ರಯಾಣ ಸೌಲಭ್ಯವನ್ನು ಪುನಃ ಕಲ್ಪಿಸಲಾಗುವುದೇ ಎಂದು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು ಈ ಸ್ಪಷ್ಟನೆ ನೀಡಿದ್ದಾರೆ.

ಕೋವಿಡ್ 19 ಸಾಂಕ್ರಾಮಿಕದ ಅವಧಿಯಿಂದ ಈ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿತ್ತು.

ಸದ್ಯ ವೇತನ ಮತ್ತು ಪಿಂಚಣಿ ಹಾಗೂ ಸಾರ್ವಜನಿಕ ಸಾರಿಗೆ ವೆಚ್ಚಗಳು ತುಂಬಾ ಏರಿಕೆಯಾಗಿವೆ. ಕಳೆದ ಬಾರಿ ಪ್ರಯಾಣಿಕರ ಸೌಲಭ್ಯಗಳಿಗೆ ₹59 ಸಾವಿರ ಕೋಟಿ ಸಬ್ಸಿಡಿ ನೀಡಲಾಗಿತ್ತು. ರೈಲ್ವೆಯ ಈಗಿನ ಪರಿಸ್ಥಿತಿ ನೋಡಿಕೊಂಡು ಮುಂದೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಗೃಹ ಸಚಿವ ಅಮಿತ್ ಶಾ ನೇತೃತ್ವದ ಸಭೆಯಲ್ಲಿ ತೀರ್ಮಾನ

ಗಡಿ ಸಾಮರಸ್ಯಕ್ಕೆ ಸಚಿವರ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ನಡುವಿನ ಗಡಿ ವಿವಾದದ ಕುರಿತು ಚರ್ಚಿಸಲು ಹಾಗೂ ಸಮನ್ವಯದಿಂದ ವರ್ತಿಸಿ ಸೌಹಾರ್ದ ಕಾಪಾಡಲು ಉಭಯ ರಾಜ್ಯಗಳ ಆರು ಸಚಿವರ ಸಮಿತಿಯನ್ನು ರಚಿಸಲು ಕೇಂದ್ರ ಸರ್ಕಾರ ಸೂಚಿಸಿದೆ.

ಗಡಿ ವಿವಾದದ ಕುರಿತು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಉಭಯ ರಾಜ್ಯಗಳ ಹಿರಿಯ ಸಚಿವರು ಹಾಗೂ ಅಧಿಕಾರಿಗಳ ಜತೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ರಾತ್ರಿ ಇಲ್ಲಿ ಸಭೆ ನಡೆಸಿದರು. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಶಾ ಈ ವಿಷಯ ಪ್ರಕಟಿಸಿದರು.

'ಗಡಿ ವಿವಾದ ಇತ್ಯರ್ಥ ಹಾಗೂ ಸಾಂವಿಧಾನಿಕ ಚೌಕಟ್ಟಿನಲ್ಲಿ ಪರಿಹಾರಕ್ಕಾಗಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ಸಭೆ ನಡೆಸಲಾಯಿತು.

ಕೇಂದ್ರ ಗೃಹಸಚಿವ ಅಮಿತ್ ಶಾ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಮುಖ್ಯಮಂತ್ರಿ ಏಕನಾಥ ಶಿಂದೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಆರಗ ಜ್ಞಾನೇಂದ್ರ, ಗೋವಿಂದ ಕಾರಜೋಳ ಇದ್ದರು —ಪಿಟಿಐ ಚಿತ್ರ

ಇಬ್ಬರು ಮುಖ್ಯಮಂತ್ರಿಗಳು ಸಕಾರಾತ್ಮಕ ಧೋರಣೆ ಹೊಂದಿದ್ದಾರೆ. ಈ ವಿವಾದ ವನ್ನು ಬೀದಿಗಿಳಿದು ಪರಿಹರಿಸಲು ಸಾಧ್ಯವಿಲ್ಲ. ಸಂವಿಧಾನದ ಚೌಕಟ್ಟಿನಲ್ಲೇ ಬಗೆಹರಿಸಬೇಕಿದೆ. ಹೀಗಾಗಿ, ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ತಿಳಿಸಿದರು.

'ಗಡಿ ವಿವಾದ ಈಗ ಸುಪ್ರೀಂ ಕೋರ್ಟ್‌ನಲ್ಲಿದೆ. ಅಲ್ಲಿ ತೀರ್ಪು ಬರುವವರೆಗೆ ಯಾವುದೇ ರಾಜ್ಯದವರು ಒಬ್ಬರ ಮೇಲೆ ಇನ್ನೊಬ್ಬರು ಬೇಡಿಕೆ ಇಡಲು ಸಾಧ್ಯವಿಲ್ಲ. ಜತೆಗೆ, ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ. ಕರ್ನಾಟಕದ ಮೂವರು ಹಾಗೂ ಮಹಾರಾಷ್ಟ್ರದ ಮೂವರು ಸಚಿವರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಈ ಸಮಿತಿಯ ಸದಸ್ಯರು ವಿಸ್ತೃತ ಚಿಂತನೆ, ಚರ್ಚೆ ನಡೆಸಲಿದ್ದಾರೆ.

7ನೇ ಪುಟ ನೋಡಿ

ಕಾನೂನು ಸುವ್ಯವಸ್ಥೆ ಕಾಪಾಡಲು ಸೂಚನೆ

'2004ರಿಂದ ಏನೆಲ್ಲ ವಿದ್ಯಮಾನಗಳು ನಡೆದವು. ಈ ಹಿಂದೆ ಏನೆಲ್ಲ ಆಗಿತ್ತು ಎಂಬುದನ್ನು ಅಮಿತ್ ಶಾ ಅವರಿಗೆ ತಿಳಿಸಿದೆ. ಮಹಾರಾಷ್ಟ್ರದವರು ತಮ್ಮ ಸಮಸ್ಯೆ ಹೇಳಿಕೊಂಡರು. ಇನ್ನು ಮುಂದೆ ಎರಡು ರಾಜ್ಯಗಳ ನಡುವೆ ಯಾವುದೇ ಸಮಸ್ಯೆ ಆಗಬಾರದು ಎಂದು ನಿರ್ದೇಶನ ನೀಡಿದರು. ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಆಗಬಾರದು. ಇದರಿಂದ ಜನ ಸಾಮಾನ್ಯರಿಗೆ ತೊಂದರೆ ಆಗುತ್ತದೆ ಎಂದರು. ಎರಡು ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ನಿರ್ದೇಶನ ನೀಡಿದ್ದಾರೆ' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಿಂದೆ ದೂರು 4

ಜಿ.ಪಂ, ತಾ. ಪಂ. ಚುನಾವಣೆ ವಿಳಂಬ: ಹೈಕೋರ್ಟ್ ಅತೃಪ್ತಿ

ರಾಜ್ಯ ಸರ್ಕಾರಕ್ಕೆ ₹ 5 ಲಕ್ಷ ದಂಡ

ಬೆಂಗಳೂರು: ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಬಿಸಿ ಮುಟ್ಟಿಸಿರುವ ಹೈಕೋರ್ಟ್ ₹ 5 ಲಕ್ಷ ದಂಡ ವಿಧಿಸಿದೆ.

'ತಾಲ್ಲೂಕು, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮರು ವಿಂಗಡಣೆ ಹಾಗೂ ಮೀಸಲಾತಿ ನಿಗದಿಪಡಿಸುವ ಸಲು ವಾಗಿ ಪ್ರತ್ಯೇಕ ಸೀಮಾ ನಿರ್ಣಯ ಆಯೋಗ ರಚಿಸಿರುವುದನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಅರ್ಜಿ ಸಲ್ಲಿಸಿತ್ತು.

ಮೂಲ ಅರ್ಜಿಯಲ್ಲಿ ತನ್ನನ್ನೂ ಪ್ರತಿವಾದಿಯಾಗಿ ಸೇರಿಸಬೇಕು, ಕ್ಷೇತ್ರ ಪುನರ್‌ವಿಂಗಡಣೆ ಹಾಗೂ ಮೀಸಲಾತಿ ನಿಗದಿಪ್ರಕ್ರಿಯೆ ಪೂರ್ಣಗೊಳಿಸಲು 3 ತಿಂಗಳು ಸಮಯ ನೀಡಬೇಕು' ಎಂದು ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಅರ್ಜಿ ಸಲ್ಲಿಸಿದ್ದವು.

> **ಚುನಾವಣೆ ನಡೆಸಲು ಪದೇ ಪದೇ ಕಾಲಾವಕಾಶ ಕೇಳುತ್ತಿರುವ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ, ರಾಜ್ಯ ಸರ್ಕಾರದ ನಡೆ ಬಸವನಹುಳು ರೀತಿಯ ನಿಧಾನ ಗತಿಯಲ್ಲಿದೆ**
> **ಪಿ.ಬಿ.ವರಾಳೆ,** ಮುಖ್ಯ ನ್ಯಾಯಮೂರ್ತಿ

7ನೇ ಪುಟ ನೋಡಿ

'ಸಬೂಬು ಹೇಳುತ್ತಿರುವ ಸರ್ಕಾರ'

'ಕ್ಷೇತ್ರ ಹಾಗೂ ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಮೂರು ತಿಂಗಳಲ್ಲಿ ಮುಗಿಸುತ್ತೇವೆ ಎಂದು 2022ರ ಸೆಪ್ಟೆಂಬರ್ 19ರ ಪತ್ರದಲ್ಲಿ ತಿಳಿಸಿದ್ದ ಸೀಮಾ ನಿರ್ಣಯ ಆಯೋಗ ಈಗ ಪುನಃ ಮೂರು ತಿಂಗಳ ಸಮಯ ಕೇಳುತ್ತಿದೆ. ಈ ನಡೆಯನ್ನು ನ್ಯಾಯಾಲಯ ಸಮರ್ಥಿಸುವುದಿಲ್ಲ' ಎಂದು ನ್ಯಾಯಪೀಠ ಹೇಳಿತು.

'ಸರ್ಕಾರ ಈ ವಿಷಯದಲ್ಲಿ ಮತ್ತೆ, ಮತ್ತೆ ನೆಪ ಹೇಳಿಕೊಂಡೇ ಬರುತ್ತಿದೆ. ಹಾಗಾಗಿ, ಇದು ನ್ಯಾಯಾಲಯದ ಆದೇಶಗಳನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನ ಎಂದು ಹೇಳಲು ನಮಗೆ ಯಾವುದೇ ಹಿಂಜರಿಕೆ ಇಲ್ಲ.ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನಿರ್ದೇಶನಗಳಂತೆ ಚುನಾವಣೆಗಳು ಕಾಲಬದ್ಧವಾಗಿ ನಡೆಯಬೇಕು. ಆದರೆ, ಸರ್ಕಾರಕ್ಕೆ ಈ ಸಾಂವಿಧಾನಿಕ ಹೊಣೆಗಾರಿಕೆ ನಿಭಾಯಿಸುವ ಬದ್ಧತೆ ಇದ್ದಂತಿಲ್ಲ' ಎಂದು ಪೀಠ ಅಚ್ಚರಿ ವ್ಯಕ್ತಪಡಿಸಿತು.

ಸ್ಟೋರ್ ಅಥವಾ ಆನ್‌ಲೈನ್ ನಲ್ಲಿ ಶಾಪಿಂಗ್ ಮಾಡಿ.

Come home to IKEA.

ಅದ್ಭುತ ಬೆಲೆಯಲ್ಲಿ ಉತ್ತಮ ಗೃಹೋಪಯೋಗಿ ಉತ್ಪನ್ನಗಳನ್ನು ಮಿಸ್ ಮಾಡಿಕೊಳ್ಳಬೇಡಿ.

IKEA
Home furnishings

Scan to join the IKEA Family club for free

Visit IKEA Nagasandra.
IKEA.in | IKEA app
1800 419 4532 (toll free)

ಅನಂತಮೂರ್ತಿ ಸ್ಮಾರಕ ಉಪನ್ಯಾಸ 18ಕ್ಕೆ

ಬೆಂಗಳೂರು: ಋಜುವಾತು ಮತ್ತು ಬಹುವಚನದ ವತಿಯಿಂದ ಯು.ಆರ್.ಅನಂತಮೂರ್ತಿ ಸ್ಮಾರಕ ಉಪನ್ಯಾಸವನ್ನು ಡಿ. 18ರಂದು ಹಮ್ಮಿಕೊಳ್ಳಲಾಗಿದೆ.

ಜಯನಗರದ 2 ಬ್ಲಾಕ್‌ನಲ್ಲಿರುವ ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. 'ವಿಜೃಂಭಿಸುತ್ತಿರುವ ರಾಜಕೀಯ ಕಾಲದಲ್ಲಿ ಸಂಸ್ಕೃತಿ ಮತ್ತು ಅಸ್ಮಿತೆ' ಎಂಬ ವಿಷಯದ ಕುರಿತು ಪ್ರತಾಪ್ ಭಾನು ಮೆಹ್ತಾ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

farnaz

ನಟರಾಜ್ ಹುಳಿಯಾರ್ ಅವರ 'ಎಲ್ಲರ ಗಾಂಧೀಜಿ' ಕೃತಿ ಬಿಡುಗಡೆ

'ಸರ್ಕಾರಕ್ಕೆ ಗಾಂಧಿ ಬಗ್ಗೆ ಆಸಕ್ತಿಯಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊನೆಯ ಕ್ಷಣದವರೆಗೂ ಮೌಲ್ಯಗಳನ್ನೇ ಜೀವಿಸಿದ್ದ ಮಹಾತ್ಮ ಗಾಂಧೀಜಿಯವರ ಬಗ್ಗೆ ಕೇಂದ್ರದ ಈಗಿನ ಸರ್ಕಾರಕ್ಕೆ ಆಸಕ್ತಿಯಿಲ್ಲ. ಗಾಂಧಿಯವರ ಕುರಿತು ಈ ಸರ್ಕಾರದಿಂದ ಏನನ್ನೂ ನಿರೀಕ್ಷಿಸಲಾಗದು' ಎಂದು ಲೇಖಕ ರಾಮಚಂದ್ರ ಗುಹಾ ಹೇಳಿದರು.

ನಗರದ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಲೇಖಕ ನಟರಾಜ್ ಹುಳಿಯಾರ್ ಸಂಪಾದಿಸಿರುವ 'ಎಲ್ಲರ ಗಾಂಧೀಜಿ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಗಾಂಧೀಜಿಯವರ ಸಾವಿನ ನಂತರ ಅವರ ಹೆಸರಿನಲ್ಲಿ ಸ್ಮಾರಕ ನಿರ್ಮಿಸುವ, ಅವರ ಬರಹಗಳನ್ನು ಸಂಗ್ರಹಿಸುವ ಕೆಲಸ ಆರಂಭವಾಯಿತು. ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಗಾಂಧಿಯವರ ಮಗ ದೇವದಾಸ್ ಗಾಂಧಿ ನೇತೃತ್ವದಲ್ಲಿ ಆರಂಭವಾದ ಈ ಕೆಲಸ ದಶಕಗಳವರೆಗೂ ನಡೆಯಿತು. ಇದು ಗಾಂಧೀಜಿಯ ವ್ಯಕ್ತಿತ್ವದ ಅಗಾಧತೆಯನ್ನು ಸೂಚಿಸುತ್ತದೆ' ಎಂದರು.

'ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಗಳ ವಿರುದ್ಧದ ಹೋರಾಟ, ಅಹಿಂಸಾ ಚಳವಳಿ, ಕೋಮು ದ್ವೇಷ ತಗ್ಗಿಸುವುದನ್ನು ಗಾಂಧಿಯವರು ವೃತ್ತಿಯಂತೆ ಪಾಲಿಸಿದರು. ಕೆಲವೇ ಮಾತುಗಳ ಮೂಲಕ ಅಗಾಧವಾದ ಜನಸಮೂಹವನ್ನು ಮಣಿಸಬಲ್ಲ ಶಕ್ತಿ ಅವರಿಗೆ ಇತ್ತು. ತಂತ್ರಗಾರಿಕೆ ಇಲ್ಲದೆ ಮಾತನಾಡುತ್ತಿದ್ದ ಗಾಂಧಿ, ವಿಶೇಷವಾದ ವ್ಯಕ್ತಿತ್ವ ಹೊಂದಿದ್ದರು' ಎಂದು ಹೇಳಿದರು.

'ಗಾಂಧೀಜಿಯವರು ರಾಜ್‌ಕೋಟ್‌ನಲ್ಲಿ ಮೆಟ್ರಿಕ್ಯುಲೇಷನ್ ಶಿಕ್ಷಣ ಪಡೆದಿದ್ದರು. ಆಗ ಅವರು ಗುಜರಾತಿ ಮತ್ತು ಇಂಗ್ಲಿಷ್ ಭಾಷಾ ವಿಷಯಗಳಲ್ಲಿ ಶೇಕಡ 45ರಷ್ಟು ಅಂಕಗಳನ್ನು ಗಳಿಸಿದ್ದರು. ಆದರೆ, ನಂತರದಲ್ಲಿ ಈ ಎರಡೂ ಭಾಷೆಗಳಲ್ಲಿ ಅದ್ಭುತವಾದ ಬರಹಗಾರರಾದರು' ಎಂದರು.

ನಟರಾಜ್ ಹುಳಿಯಾರ್, ಉಪನ್ಯಾಸಕ ರವಿಕುಮಾರ್ ಬಾಗಿ, ಪ್ರಕಾಶಕ ಪಲ್ಲವ ವೆಂಕಟೇಶ್ ಉಪಸ್ಥಿತರಿದ್ದರು. ಗಾಯಕಿ ಗೌತಮಿ ಮಧುರಾಜ್ ಅವರು ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಗೀತೆಗಳನ್ನು ಹಾಡಿದರು.



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ನಟರಾಜ್ ಹುಳಿಯಾರ್ (ಬಲಬದಿ) ಅವರ 'ಎಲ್ಲರ ಗಾಂಧೀಜಿ' ಕೃತಿಯನ್ನು ಲೇಖಕ ರಾಮಚಂದ್ರ ಗುಹಾ ಬಿಡುಗಡೆ ಮಾಡಿದರು. ಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಇದ್ದರು. – ಪ್ರಜಾವಾಣಿ ಚಿತ್ರ

ಖಾದಿ ಧರಿಸುವುದೇ ಗಾಂಧಿವಾದವಲ್ಲ: ಎಂ.ಎಸ್.ಸತ್ಯು

'ಅಹಿಂಸಾತ್ಮ ಹೋರಾಟದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿ ಎಲ್ಲ ಕಾಲಕ್ಕೂ ನಮಗೆ ಬೇಕು. ಗಾಂಧೀಜಿ ವಿಫಲವಾಗಿಲ್ಲ, ಆದರೆ, ಗಾಂಧಿವಾದದ ಹೆಸರಿನಲ್ಲಿ ಅವರನ್ನು ಅನುಕರಿಸಿದವರಷ್ಟೇ ವಿಫಲವಾಗಿದ್ದಾರೆ. ಹಾಗೆಯೇ ಕೇವಲ ಖಾದಿ ವಸ್ತ್ರ ಧರಿಸುವುದನ್ನೇ ಗಾಂಧಿವಾದ ಎಂದು ಭಾವಿಸಿದವರೂ ಇದ್ದಾರೆ' ಎಂದು ಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಹೇಳಿದರು.

'ಗಾಂಧಿ ಮತ್ತು ಕಾರ್ಲ್ ಮಾರ್ಕ್ಸ್ ನಡುವೆ ಒಂದು ಸಾಮ್ಯತೆಯನ್ನು ನಾವು ಕಾಣಬಹುದು. ಇಬ್ಬರೂ ನುಡಿದಂತೆ ಬದುಕಿದರು. ಆದರೆ, ಅವರಿಬ್ಬರ ಅನುಯಾಯಿಗಳಿಗೂ ಅದು ಸಾಧ್ಯವಾಗಲಿಲ್ಲ. ಮಾರ್ಕ್ಸ್‌ನ ಅನುಯಾಯಿಯಾದ ಸ್ಟಾಲಿನ್ ಜಗತ್ತಿನ ಅತಿದೊಡ್ಡ ಸರ್ವಾಧಿಕಾರಿಯಾದುದು ಇದಕ್ಕೆ ಸಾಕ್ಷಿ' ಎಂದರು.

31ಕ್ಕೆ 'ಪುಸ್ತಕ ರಾತ್ರಿ'

ಬೆಂಗಳೂರು: ವೀರಲೋಕ ಪುಸ್ತಕ ಪ್ರಕಾಶನ ಸಂಸ್ಥೆ ವತಿಯಿಂದ ಡಿ. 31ರಂದು ಆಯೋಜಿಸಿರುವ 'ಪುಸ್ತಕ ರಾತ್ರಿ' ಕಾರ್ಯಕ್ರಮದಲ್ಲಿ 10 ಪುಸ್ತಕಗಳನ್ನು ಮಧ್ಯರಾತ್ರಿ 11.59ಕ್ಕೆ ಬಿಡುಗಡೆ ಮಾಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಹೊಸ ವರ್ಷದ ಆಚರಣೆಗೆ ಮಸ್ತಕಕ್ಕೆ ಪುಸ್ತಕ, ಕಿವಿಗಳಿಗೆ ಇಂಪಾಗಿ ಸಂಗೀತ, ಸುಗ್ರಾಸ ಭೋಜನ ಮಾಡುವುದರ ಜೊತೆಗೆ ಕನ್ನಡದ ಪುಸ್ತಕಗಳನ್ನು ಹಿಡಿದು, ಕೇಕೆ ಹಾಕುವುದರ ಮೂಲಕ ಪುಸ್ತಕಗಳ ಬಿಡುಗಡೆ ಮಾಡುವ ವಿನೂತನ ಕಾರ್ಯಕ್ರಮ ಮಾಡಲು ಸಜ್ಜಾಗಿದೆ. ಊಟ, ಪ್ರವೇಶ, ಸಂಗೀತ ಎಲ್ಲವೂ ಉಚಿತವಾಗಿದೆ. ಆದರೆ, ಅಂದು ಬಿಡುಗಡೆಯಾಗುವ 10 ಪುಸ್ತಕಗಳನ್ನು ಮುಂಗಡ ಖರೀದಿಸಬೇಕು ಎನ್ನುವ ಷರತ್ತು ವಿಧಿಸಲಾಗಿದೆ. ಕೇವಲ 200 ಜನರಿಗೆ ಮಾತ್ರ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ 7022122121ಗೆ ಸಂಪರ್ಕಿಸಿ.

ಮಾಲ್, ಹೋಟೆಲ್‌ಗಳ ಬ್ಯಾಂಕ್ ಖಾತೆ ಮುಟ್ಟುಗೋಲು: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ತಿ ತೆರಿಗೆ ಪಾವತಿಸದ ಬೃಹತ್ ಮಾಲ್ ಹಾಗೂ ಹೋಟೆಲ್‌ಗಳ ಬ್ಯಾಂಕ್ ಖಾತೆಯನ್ನು ಪ್ರಥಮವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

'ಬೃಹತ್ ಪ್ರಮಾಣದಲ್ಲಿ ಬಾಕಿ ಉಳಿಸಿಕೊಂಡವರಿಗೆ ಆಸ್ತಿ ತೆರಿಗೆ ಪಾವತಿಸುವಂತೆ ಸಾಕಷ್ಟು ಬಾರಿ ನೋಟಿಸ್ ಜಾರಿಗೊಳಿಸಲಾಗಿತ್ತು. ಆದರೂ, ಪಾವತಿಸಿಲ್ಲ. ಹೀಗಾಗಿ, ಕಾನೂನಿನಲ್ಲಿ ಅವಕಾಶ ಇರುವಂತೆ ಬಿಬಿಎಂಪಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ' ಎಂದು ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

'ಮೊದಲು ಬ್ಯಾಂಕ್ ಖಾತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಅವರು ತೆರಿಗೆ ಪಾವತಿಸಿದ ಮೇಲಷ್ಟು ಅದನ್ನು ಬಿಡಲಾಗುತ್ತದೆ. ಇದಕ್ಕೂ ಮಣಿಯದಿದ್ದರೆ ಚರಾಸ್ತಿ, ಸ್ಥಿರಾಸ್ತಿಗಳನ್ನು ವಶಪಡಿಸಿಕೊಳ್ಳುವ ಬಗ್ಗೆಯೂ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ಪಾರ್ಕಿಂಗ್ ನಿಷೇಧ

'ಬಿಬಿಎಂಪಿ ವತಿಯಿಂದ ಬಹು ಅಂತಸ್ತಿನ ಕಾರು ಪಾರ್ಕಿಂಗ್‌ಗೆ ಚಾಲನೆ ದೊರೆತ ಮೇಲೆ ಸುತ್ತಮುತ್ತಲಿನ ರಸ್ತೆಗಳಲ್ಲಿ ನಿಲುಗಡೆ ನಿಷೇಧ ಮಾಡಲಾಗುತ್ತದೆ. ಸಂಚಾರ ಪೊಲೀಸರೊಂದಿಗೆ ದಂಡ ವಿಧಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

'ಬಹು ಅಂತಸ್ತಿನ ಕಾರು ಪಾರ್ಕಿಂಗ್ ವ್ಯವಸ್ಥೆ ಅಲ್ಲದೆ, ಪ್ರಮುಖ ರಸ್ತೆಗಳಲ್ಲೂ ಪಾವತಿ–ಪಾರ್ಕಿಂಗ್ ವ್ಯವಸ್ಥೆ ಜಾರಿಯಾಗುತ್ತಿದ್ದು, ಉಳಿದ ಕಡೆ ವಾಹನ ನಿಷೇಧಿಸಲಾಗುತ್ತದೆ. ಅಲ್ಲಿ ದಂಡ ವಿಧಿಸಲಾಗುವುದು. ವಾಹನಗಳ ಟೋಯಿಂಗ್ ಅನ್ನು ನಾವು ಮಾಡಲು ಸಾಧ್ಯವಿಲ್ಲ. ಪೊಲೀಸರು ಯಾವ ಕ್ರಮ ಅನುಸರಿಸುತ್ತಿದ್ದಾರೋ ಅದನ್ನೇ ಮುಂದುವರಿಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ಬಿಬಿಎಂಪಿ ಬಜೆಟ್: ಸಾರ್ವಜನಿಕರಿಂದ ಸಲಹೆ ಆಹ್ವಾನ

ಬೆಂಗಳೂರು: ಬಿಬಿಎಂಪಿಯ 2023-24ನೇ ಸಾಲಿನ ಬಜೆಟ್‌ಗೆ ಸಾರ್ವಜನಿಕರಿಂದ ಸಲಹೆ ಪಡೆಯಲು ಡಿ.19ರಂದು ಸಭೆ ಆಯೋಜಿಸಲಾಗಿದೆ.

2023-24ನೇ ಸಾಲಿನ ಆಯವ್ಯಯ ಅಂದಾಜು ಹಾಗೂ 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯನ್ನು ವಾರ್ಡ್ ಸಮಿತಿ ಹಾಗೂ ವಲಯ ಸಮಿತಿಯ ಶಿಫಾರಸ್ಸಿನ ಮೇರೆಗೆ ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಬೇಕಾಗಿದೆ. 2023-24ನೇ ಸಾಲಿನ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಸಂಘ ಸಂಸ್ಥೆಗಳು, ಸಾರ್ವಜನಿಕರಿಂದ ಸಲಹೆ, ಸೂಚನೆಗಳನ್ನು ಪಡೆಯಲು ಡಿ.19ರಂದು ಮಧ್ಯಾಹ್ನ 2.30ಕ್ಕೆ ಬಿಬಿಎಂಪಿ ಕೇಂದ್ರ ಕಚೇರಿಯ ಸಭಾಂಗಣ–1ರಲ್ಲಿ ಸಭೆ ಏರ್ಪಡಿಸಲಾಗಿದೆ ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪೂರ ತಿಳಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆ: ಮನೆಮನೆಗೆ ಮುಖ್ಯ ಆಯುಕ್ತ

ಬೆಂಗಳೂರು: ಮತದಾರ ಪಟ್ಟಿ ಪರಿಷ್ಕರಣೆಗಾಗಿ ಚುನಾವಣೆ ಆಯೋಗದ ನಿರ್ದೇಶನದಂತೆ ಅಧಿಕಾರಿಗಳೊಂದಿಗೆ ಜಿಲ್ಲಾ ಚುನಾವಣೆ ಅಧಿಕಾರಿಯಾಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮನೆ ಮನೆಗಳಿಗೆ ತೆರಳಿ ಪರಿಶೀಲನೆ ನಡೆಸಿದರು.

ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯಗಳು ನಡೆಯುತ್ತಿದ್ದು, ಕರಡು ಪಟ್ಟಿ ಪ್ರಕಟ, ಆಕ್ಷೇಪಣೆಗಳನ್ನು ಸಲ್ಲಿಸಿದ ನಂತರ ಬಿಎಲ್‌ಒ ಮತ್ತು ಬಿಎಲ್‌ಒ ಮೇಲ್ವಿಚಾರಕರು ಮನೆ-ಮನೆಗೆ ಭೇಟಿ ನೀಡಿ ಮತದಾರರ ಪಟ್ಟಿ ಶುದ್ಧೀಕರಿಸುವ ಕಾರ್ಯ ಮಾಡಿದ್ದಾರೆ. ಪರಿಷ್ಕರಣೆ ಮಾಡಿರುವುದನ್ನು ಜಿಲ್ಲಾ ಚುನಾವಣಾ ಅಧಿಕಾರಿ, ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳು ಕೆಲ ಮನೆಗಳಿಗೆ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿರುವ ಬಗ್ಗೆ 'ಸೂಪರ್ ಚೆಕ್ಕಿಂಗ್' ಮಾಡಲಾಗುತ್ತದೆ. ಅದರಂತೆ ಮುಖ್ಯ ಆಯುಕ್ತರು ಗೋವಿಂದರಾಜ ನಗರದ ಗಂಗಮ್ಮ ತಿಮ್ಮಯ್ಯ ಕಲ್ಯಾಣ ಮಂಟಪದ ಸುತ್ತ-ಮುತ್ತಲಿನ ಮನೆಗಳು ಹಾಗೂ ವಿಜಯನಗರ ವ್ಯಾಪ್ತಿಯಲ್ಲಿ ಕೆಲ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

12 ನಮೂನೆಗಳ ಪರಿಶೀಲನೆ: ಗೋವಿಂದರಾಜನಗರ ಹಾಗೂ ವಿಜಯನಗರ ವ್ಯಾಪ್ತಿಯಲ್ಲಿ ಮನೆ-ಮನೆಗೆ ಭೇಟಿ 12 ನಮೂನೆಗಳನ್ನು 'ಸೂಪರ್ ಚೆಕ್ಕಿಂಗ್' ಮಾಡಲಾಯಿತು. ನಮೂನೆಗಳಿಗೆ ಮನೆಯವರ ಹೆಸರು, ವಿಳಾಸ, ಸಹಿ ಪರಿಶೀಲನೆಯ ಜತೆಗೆ ಎರಡು ಕಡೆ ಹೆಸರಿದ್ದಲ್ಲಿ ಅದನ್ನು ಸಂಬಂಧಪಟ್ಟ ಅಧಿಕಾರಿ ಜೊತೆ ಮಾತನಾಡಿ ಒಂದು ಕಡೆ ಹೆಸರನ್ನು ತೆಗೆಸಲಾಗುವುದು ಎಂದರು.

ದಕ್ಷಿಣ ವಲಯ ಜಂಟಿ ಆಯುಕ್ತ ಜಗದೀಶ್ ನಾಯ್ಕ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಉಮೇಶ್ ಉಪಸ್ಥಿತರಿದ್ದರು.



ಮಾರ್ಚ್‌ನಲ್ಲಿ ವೈಟ್‌ಫೀಲ್ಡ್, ಜೂನ್‌ನಲ್ಲಿ ಆರ್‌.ವಿ.ರಸ್ತೆ–ಬೊಮ್ಮಸಂದ್ರ ಮಾರ್ಗ ಪೂರ್ಣ • ಒಟ್ಟು 38.09 ಕಿ.ಮೀ ಸೇರ್ಪಡೆ

ಹೊಸ ವರ್ಷಕ್ಕೆ ಮೂರು ಹೊಸ ಮೆಟ್ರೊ ಮಾರ್ಗ

• ವಿಜಯಕುಮಾರ್ ಎಸ್‌.ಕೆ.

ಬೆಂಗಳೂರು: ನಗರದಲ್ಲಿ ಸಂಚಾರ ದಟ್ಟಣೆಗೆ ಪರಿಹಾರವಾಗಿರುವ ಮೆಟ್ರೊ ರೈಲು, 2023ರಲ್ಲಿ ಮೂರು ಹೊಸ ಮಾರ್ಗಗಳನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಲು ಸಜ್ಜಾಗಿದೆ.

ಸದ್ಯ 56 ಕಿಲೋ ಮೀಟರ್ ಇರುವ ಮೆಟ್ರೊ ರೈಲು ಮಾರ್ಗಕ್ಕೆ ಮುಂದಿನ ವರ್ಷ ಇನ್ನೂ 38.09 ಕಿ.ಮೀ ಸೇರ್ಪಡೆಯಾಗಲಿದ್ದು, 94.09 ಕಿಲೋ ಮೀಟರ್‌ಗೆ ಏರಿಕೆಯಾಗಲಿದೆ. ವೈಟ್‌ಫೀಲ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಸೇರಿ ಎರಡು ಟೆಕ್ ಹಬ್‌ಗಳನ್ನು ಮೆಟ್ರೊ ಮಾರ್ಗ 2023ರಲ್ಲಿ ಸಂಪರ್ಕಿಸುತ್ತಿದೆ.

2023ರ ಆರಂಭದಲ್ಲೇ ವೈಟ್‌ಫೀಲ್ಡ್ ತನಕ ಮೆಟ್ರೊ ರೈಲು ಮಾರ್ಗ ಆರಂಭಿಸಲು ಸಿದ್ಧತೆ ಮಾಡಿಕೊಂಡಿದೆ. ಆದರೆ, ಬೆನ್ನಿಗಾನಹಳ್ಳಿ ಮೆಟ್ರೊ ರೈಲು ನಿಲ್ದಾಣದ ಬಳಿ ಕಾಮಗಾರಿ ಕೊಂಚ ವಿಳಂಬವಾಗುವ ಸಾಧ್ಯತೆ ಇದೆ. ಮಳೆ ಕೂಡ ಇದಕ್ಕೆ ಕಾರಣವಾಗಿದ್ದು, ಈ ಮಾರ್ಗವನ್ನು ಮಾರ್ಚ್ ಎರಡನೇ ವಾರದಲ್ಲಿ ಪ್ರಯಾಣಿಕರ ಸೇವೆಗೆ ನೀಡಲು ಬಿಎಂಆರ್‌ಸಿಎಲ್ ಯೋಚಿಸಿದೆ.

ಈ ಮಾರ್ಗವನ್ನು ಎರಡು ಹಂತದಲ್ಲಿ ಕಾರ್ಯಾರಂಭ ಮಾಡಲೂ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ. ಮೊದಲ ಹಂತದಲ್ಲಿ ವೈಟ್‌ಫೀಲ್ಡ್‌ನಿಂದ ಕೆ.ಆರ್.ಪುರ ತನಕ ರೈಲು ಸಂಚಾರ ಆರಂಭಿಸಿ, ಎರಡನೇ ಹಂತದಲ್ಲಿ ಕೆ.ಆರ್.ಪುರದಿಂದ ಬೈಯಪ್ಪನಹಳ್ಳಿ ಸಂಪರ್ಕಿಸಲು ಸಿದ್ಧತೆ ನಡೆಸಿದ್ದಾರೆ. ಅಲ್ಲಿಯ ತನಕ ಕೆ.ಆರ್.ಪುರದಿಂದ ಬೈಯಪ್ಪನಹಳ್ಳಿಗೆ ಬಿಎಂಟಿಸಿ ಬಸ್‌ಗಳನ್ನು ಫೀಡರ್ ಸೇವೆಗೆ ಬಳಸಿಕೊಳ್ಳಲು ಉದ್ದೇಶಿಸಿದ್ದಾರೆ.

ಬೆನ್ನಿಗಾನಹಳ್ಳಿ ಬಳಿ 65 ಮೀಟರ್ ಉದ್ದದ ಮಾರ್ಗದಲ್ಲಿ ಕಾಮಗಾರಿ ನಿರ್ವಹಣೆ ಸವಾಲಿನ ಕೆಲಸವಾಗಿದೆ. ಅಲ್ಲಿ ಸ್ಟೀಲ್ ಗರ್ಡರ್‌ಗಳನ್ನು ಅಳವಡಿಸಬೇಕಿದೆ. ರೈಲ್ವೆ ಹಳಿ ಕೂಡ ಹಾದು ಹೋಗಿದ್ದು, ನೈರುತ್ಯ ರೈಲ್ವೆ ಜತೆಯೂ ಸಮಾಲೋಚನೆ ನಡೆಸಿ ಕಾಮಗಾರಿ ನಿರ್ವಹಿಸುತ್ತಿದೆ. ಅದಕ್ಕೂ ಮುನ್ನ ಅಗತ್ಯ ಇರುವ ಪ್ರಾಥಮಿಕ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಜೂನ್‌ನಲ್ಲಿ ಹಳದಿ ಮಾರ್ಗ ಪೂರ್ಣ

ಇನ್ನೊಂದೆಡೆ ಆರ್‌.ವಿ. ರಸ್ತೆಯಿಂದ ಬೊಮ್ಮಸಂದ್ರಕ್ಕೆ ಮೆಟ್ರೊ ರೈಲು ಸಂಪರ್ಕಿಸುವ ಹಳದಿ ಮಾರ್ಗದ ಕಾಮಗಾರಿಯೂ ಅಂತಿಮ ಹಂತದಲ್ಲಿದ್ದು, ಹೊಸ ವರ್ಷದಲ್ಲಿ ಕಾರ್ಯಾರಂಭವಾಗುವ ಎರಡನೇ ಹೊಸ ರೈಲು ಮಾರ್ಗ ಇದಾಗಿದೆ.

ಮೂರು ಪ್ಯಾಕೇಜ್‌ಗಳಲ್ಲಿ ನಡೆಯುತ್ತಿರುವ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಎಲ್ಲವೂ ಅಂದುಕೊಂಡಂತೆಯೇ ಆದರೆ 2023ರ ಜೂನ್‌ನಲ್ಲಿ ಈ ಮಾರ್ಗದಲ್ಲಿ ಮೆಟ್ರೊ ರೈಲುಗಳು ಸಂಚರಿಸಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಈ ಮಾರ್ಗದಲ್ಲಿ ಒಟ್ಟು 16 ನಿಲ್ದಾಣಗಳು ನಿರ್ಮಾಣವಾಗುತ್ತಿದ್ದು, ಎಲ್ಲವೂ ಹಳದಿ ಮೇಲ್ಹಾವಣಿಗಳನ್ನು ಹೊಂದಿವೆ. ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ ಮಾತ್ರ ವಿಶೇಷ ವಿನ್ಯಾಸದಿಂದ ಕೂಡಿದೆ. ಈ ನಿಲ್ದಾಣವನ್ನು ಇನ್ಫೊಸಿಸ್ ಸಂಸ್ಥೆ ಅಭಿವೃದ್ಧಿಪಡಿಸುತ್ತಿದ್ದು, ಕಾರ್ಪೊರೇಟ್ ಕಂಪನಿಗಳ ಮಾದರಿಯಲ್ಲೇ ಅಭಿವೃದ್ಧಿಗೊಳ್ಳುತ್ತಿದೆ.

ಮೆಟ್ರೊ ರೈಲಿನ ಜತೆಗೆ ಬಸ್‌ಗಳ ಸಂಚಾರಕ್ಕೂ ಅನುಕೂಲವಾಗುವ ಡಬಲ್ ಡೆಕ್ಕರ್ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗುತ್ತಿರುವ ಬೆಂಗಳೂರಿನ ಮೊದಲ ಮೆಟ್ರೊ ರೈಲು ಮಾರ್ಗ ಇದಾಗಿದೆ. ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್ ತನಕ ಡಬಲ್ ಡೆಕ್ಕರ್ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗುತ್ತಿದೆ. ಜಯದೇವ ವೃತ್ತದಲ್ಲಿ ಮಾರ್ಗ ಬದಲಿಸುವ ನಿಲ್ದಾಣ ನಿರ್ಮಾಣವಾಗುತ್ತಿದೆ. ಐದು ಹಂತದ ಸಾರಿಗೆ ವ್ಯವಸ್ಥೆಯನ್ನು ಇದು ಒಳಗೊಂಡಿದೆ. ಐದನೇ ಹಂತವು ನೆಲದಿಂದ 29 ಮೀಟರ್ ಎತ್ತರಕ್ಕೆ ನಿರ್ಮಾಣವಾಗುತ್ತಿದೆ.

ಈ ಮಾರ್ಗದಲ್ಲಿ ಹಳಿ ಜೋಡಣೆ ಕಾರ್ಯ ಪೂರ್ಣಗೊಂಡಿದ್ದು, ವಿದ್ಯುದ್ದೀಕರಣ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿ ಪೂರ್ಣಗೊಂಡರೆ ಪರೀಕ್ಷಾರ್ಥ ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ನಮ್ಮ ಮೆಟ್ರೊ

ನೇರಳೆ ಮಾರ್ಗ
ಬೆನ್ನಿಗಾನಹಳ್ಳಿ
ಕೆ.ಆರ್‌.ಪುರಂ
ಮಹದೇವಪುರ
ಗರುಡಾಚಾರ್‌ಪಾಳ್ಯ
ಹೂಡಿ ಜಂಕ್ಷನ್
ಸೀತಾರಾಮಪಾಳ್ಯ
ಕುಂದಲಹಳ್ಳಿ
ನಲ್ಲೂರುಹಳ್ಳಿ
ಶ್ರೀಸತ್ಯಸಾಯಿ ಆಸ್ಪತ್ರೆ
ಪಟ್ಟಂದೂರು ಅಗ್ರಹಾರ
ಕಾಡುಗೋಡಿ
ಚನ್ನಸಂದ್ರ
ವೈಟ್‌ಫೀಲ್ಡ್

ಹಳದಿ ಮಾರ್ಗ
ಆರ್‌.ವಿ.ರಸ್ತೆ
ಬಿಟಿಎಂ ಬಡಾವಣೆ
ಸಿಲ್ಕ್ ಬೋರ್ಡ್
ಎಚ್‌ಎಸ್‌ಆರ್ ಬಡಾವಣೆ
ಆಕ್ಸ್‌ಫರ್ಡ್ ಕಾಲೇಜು
ಮುನೇಶ್ವರ ನಗರ
ಚಿಕ್ಕಬೇಗೂರು
ಬಸಾಪುರ ರಸ್ತೆ
ಹೊಸ ರೋಡ್
ಎಲೆಕ್ಟ್ರಾನಿಕ್ ಸಿಟಿ–1
ಎಲೆಕ್ಟ್ರಾನಿಕ್ ಸಿಟಿ–2
ಹುಸ್ಕೂರು ರಸ್ತೆ
ಹೆಬ್ಬಗೋಡಿ
ಬೊಮ್ಮಸಂದ್ರ

3.77 ಕಿ.ಮೀ
ನಾಗಸಂದ್ರ–ಬಿಐಇಸಿ ಮಾರ್ಗದ ಉದ್ದ

18.82 ಕಿ.ಮೀ
ಆರ್‌.ವಿ. ರಸ್ತೆ– ಬೊಮ್ಮಸಂದ್ರ ಕಾರಿಡಾರ್ ಉದ್ದ

15.50 ಕಿ.ಮೀ
ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ಮಾರ್ಗದ ಉದ್ದ

ಹಸಿರು ಮಾರ್ಗ

ಮಂಜುನಾಥನಗರ
ಜಿಂದಾಲ್
ಬಿಐಇಸಿ

ನಾಗಸಂದ್ರ–ಬಿಐಇಸಿ ಅಂತಿಮ ಹಂತಕ್ಕೆ

ಬಹುಬೇಡಿಕೆಯ ನಾಗಸಂದ್ರ– ಬಿಐಇಸಿ (ರೀಚ್–3 ವಿಸ್ತರಣೆ) ತನಕದ 3.14 ಕಿ.ಮೀ. ಮಾರ್ಗದ ಕಾಮಗಾರಿಯೂ ಭರದಿಂದ ಸಾಗಿದ್ದು, ಈ ಮಾರ್ಗದಲ್ಲೂ ಜೂನ್‌ನಲ್ಲಿ ರೈಲುಗಳು ಸಂಚರಿಸುವ ಸಾಧ್ಯತೆ ಇದೆ. ಜಿಂದಾಲ್–ಪ್ರೆಸ್ಟೀಜ್ ಲೇಔಟ್ ಮೂಲಕ ಅಂಚೆಪಾಳ್ಯ ಹಾಗೂ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ಹೆಚ್ಚುವರಿ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಸವಾಲಾಗಿತ್ತು. ಪ್ರೆಸ್ಟೀಜ್ ಸಂಸ್ಥೆಯು ತನ್ನ ಪ್ರದೇಶದಲ್ಲಿ 12.5 ಅಡಿ ಅಗಲದ ರಸ್ತೆ ನಿರ್ಮಿಸಿ ಸಾರ್ವಜನಿಕರ ಬಳಕೆಗೆ ನೀಡಲು ಒಪ್ಪಿದ ಬಳಿಕ ಸಮಸ್ಯೆ ಇತ್ಯರ್ಥವಾಗಿದೆ. ಎಲ್ಲ ಸಮಸ್ಯೆಗಳೂ ಪರಿಹಾರವಾಗಿ ಜೂನ್ ವೇಳೆಗೆ ಈ ಮಾರ್ಗದಲ್ಲೂ ರೈಲುಗಳು ಸಂಚರಿಸಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕರ್ನಾಟಕ ಕಾಡುಗೊಲ್ಲರ ಸಂಘ ಒತ್ತಾಯ

‘ಕಾಡುಗೊಲ್ಲ ನಿಗಮಕ್ಕೆ ₹17 ಕೋಟಿ ವಾಪಸ್ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ಮಂಜೂರಾಗಿದ್ದ ₹17 ಕೋಟಿ ಅನುದಾನವನ್ನು ಕೂಡಲೇ ವಾಪಸ್ ನೀಡಬೇಕು ಎಂದು ಕರ್ನಾಟಕ ಕಾಡುಗೊಲ್ಲರ ಸಂಘ ಆಗ್ರಹಿಸಿದೆ.

‘ಗೊಲ್ಲರ ಹಟ್ಟಿಗಳ ಮೂಲ ಸೌಲಭ್ಯ ಒದಗಿಸಲು ಮತ್ತು ಸಮುದಾಯದ ಅಭಿವೃದ್ಧಿಗಾಗಿ ನಿಗಮಕ್ಕೆ ₹17 ಕೋಟಿ ಅನುದಾನವನ್ನು ಸರ್ಕಾರ ಮಂಜೂರು ಮಾಡಿತ್ತು. ಆದರೆ, ಈ ಅನುದಾನವನ್ನು ವಾಪಸ್ ಪಡೆಯಲಾಗಿದೆ. ಹೀಗಾಗಿ, ಈ ಅನುದಾನವನ್ನು ನಿಗಮಕ್ಕೆ ವಾಪಸ್ ನೀಡುವಂತೆ ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿಗೆ ನಿರ್ದೇಶನ ನೀಡಬೇಕು. ಎರಡು ವರ್ಷಗಳ ಹಿಂದೆಯೇ ನಿಗಮವನ್ನು ಸ್ಥಾಪಿಸಿದ್ದರೂ ಇದುವರೆಗೂ ಅಧ್ಯಕ್ಷ ಮತ್ತು ನಿರ್ದೇಶಕರನ್ನು ನೇಮಿಸಿಲ್ಲ’ ಎಂದು ಸಂಘದ ಅಧ್ಯಕ್ಷ ರಾಜಣ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಬುಧವಾರ ಕರ್ನಾಟಕ ಕಾಡುಗೊಲ್ಲರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

‘2022ರ ಜುಲೈ 25ರಂದು ನಿಗಮಕ್ಕೆ ಚೆಂಗಾವರ ಮಾರಣ್ಣ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿತ್ತು. ಆದರೆ, ಎರಡೇ ದಿನಗಳಲ್ಲಿ ನೇಮಕಾತಿ ಅಧಿಸೂಚನೆಯನ್ನು ತಡೆಹಿಡಿಯಲಾಯಿತು. ಅಲೆಮಾರಿ, ಅರೆ–ಅಲೆಮಾರಿ ಪಟ್ಟಿಯಲ್ಲಿ ಕಾಡುಗೊಲ್ಲ ಸಮುದಾಯ ಇಲ್ಲವೆಂದು ವಸತಿ ಸೌಕರ್ಯದಿಂದ ವಂಚಿಸಲಾಗಿದೆ. ರಾಜ್ಯದ ಕೆಲ ಭಾಗಗಳಲ್ಲಿ ಕಾಡುಗೊಲ್ಲ ಸಮುದಾಯಕ್ಕೆ ಜಾತಿ ಪ್ರಮಾಣ ನೀಡುತ್ತಿಲ್ಲ’ ಎಂದು ಆರೋಪಿಸಿದರು.

ಸಂಘದ ಗೌರವಾಧ್ಯಕ್ಷ ಮೀಸೆ ಮಹಾಲಿಂಗಪ್ಪ ಮಾತನಾಡಿ, ‘ಎಲ್ಲ ರಾಜಕೀಯ ಪಕ್ಷಗಳು ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲಾಗುವುದು ಎನ್ನುವ ಭರವಸೆ ನೀಡಿವೆ. ಆದರೆ, ಇದುವರೆಗೂ ಯಾವುದೇ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸಿಲ್ಲ. ಕಾಡುಗೊಲ್ಲರು ಅಲೆಮಾರಿ ಮತ್ತು ಪರಿಶಿಷ್ಟ ಪಂಗಡದ ಪಟ್ಟಿಗಳಲ್ಲಿ ಸ್ಥಾನವಿಲ್ಲದೇ ತೊಂದರೆಗೆ ಸಿಲುಕಿದ್ದಾರೆ. ಕೂಡಲೇ ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕು. ಇಲ್ಲದಿದ್ದರೆ ಮುಂಬರುವ ವಿಧಾನಸಭೆ ಚುನಾವಣೆಯನ್ನು ಬಹಿಷ್ಕರಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ರಾಜ್ಯದಲ್ಲಿ ಕಾಡುಗೊಲ್ಲರ ಜನಸಂಖ್ಯೆ 6 ರಿಂದ 7 ಲಕ್ಷ ಇದೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ತುಮಕೂರು, ರಾಮನಗರದಲ್ಲಿ ಹೆಚ್ಚಿನ ಜನಸಂಖ್ಯೆ ಇದೆ. ಬುಡಕಟ್ಟು ಹಿನ್ನೆಲೆ ಹೊಂದಿರುವ ಕಾಡುಗೊಲ್ಲ ಜನಾಂಗವನ್ನು ರಾಜ್ಯ ಸರ್ಕಾರ ಕಡೆಗಣಿಸುತ್ತಿದೆ. ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು. ಒಂದು ತಿಂಗಳ ಒಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೇಡಿಕೆಗಳನ್ನು ಈಡೇರಿಸದಿದ್ದರೆ, ದನ–ಕರು, ಕುರಿಗಳೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಹೋಟೆಲ್ ಸಿಬ್ಬಂದಿ ಕೊಠಡಿಗೆ ಬೆಂಕಿ: ಇಬ್ಬರ ಬಂಧನ

ಬೆಂಗಳೂರು: ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಿಕನ್ ರೋಲ್ ವಿಚಾರಕ್ಕೆ ಗಲಾಟೆ ನಡೆಸಿ ಹೋಟೆಲ್ ಸಿಬ್ಬಂದಿಯ ಕೊಠಡಿಗೆ ಪೆಟ್ರೋಲ್ ಸುರಿದು ಬೆಂಕಿ ಇರಿಸಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಗಣೇಶ್ ಹಾಗೂ ದೇವರಾಜ್ ಬಂಧಿತರು. ಮತ್ತೊಬ್ಬ ಆರೋಪಿಗೆ ಶೋಧ ನಡೆಸಲಾಗುತ್ತಿದೆ.

‘ಕುಮಾರ್ ಹೋಟೆಲ್‌ಗೆ ಮೂವರು ಆರೋಪಿಗಳು ಸೋಮವಾರ ರಾತ್ರಿ ಬಂದಿದ್ದರು. ಚಿಕನ್ ರೋಲ್ ಆರ್ಡರ್ ಮಾಡಿದ್ದರು. ಚಿಕನ್ ರೋಲ್ ಇಲ್ಲ ಎಂದು ಹೇಳಿದ್ದ ಹೋಟೆಲ್ ಸಿಬ್ಬಂದಿ, ಬಾಗಿಲು ಹಾಕಲು ಮುಂದಾಗಿದ್ದರು. ಇದರಿಂದ ಕೋಪಗೊಂಡ ಆರೋಪಿಗಳು ಸಿಬ್ಬಂದಿಯೊಂದಿಗೆ ಗಲಾಟೆ ನಡೆಸಿದ್ದರು. ‘ಅಲ್ಲಿಂದ ಪೆಟ್ರೋಲ್ ಬಂಕ್‌ಗೆ ತೆರಳಿ 3 ಲೀಟರ್ ಪೆಟ್ರೋಲ್ ಖರೀದಿಸಿ ಹೋಟೆಲ್ ಕಾರ್ಮಿಕರು ವಾಸವಿದ್ದ ರೂಂಗೆ ಬೆಂಕಿಹಾಕಿ ಪರಾರಿಯಾಗಿದ್ದರು. ಕೊಠಡಿಯ ಬಾಗಿಲು, ಕಿಟಕಿ ಸುಟ್ಟಿದೆ. ಕಾರ್ಮಿಕರು ಅಪಾಯದಿಂದ ಪಾರಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮರಗಳ ಬುಡಕ್ಕೆ ಹಾಕಿದ್ದ ಕಾಂಕ್ರೀಟ್ ತೆರವು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ವಿಜಯ ನಗರದ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಮುಖ್ಯ ಬಸ್ ನಿಲ್ದಾಣದ ನೂತನ ಪಾದಚಾರಿ ಮಾರ್ಗದಲ್ಲಿರುವ ಮರಗಳ ಬುಡಕ್ಕೆ ಹಾಕಲಾಗಿದ್ದ ಕಾಂಕ್ರೀಟ್, ಪೇವರ್ಸ್ ಅನ್ನು ಬಿಬಿಎಂಪಿಯ ರಸ್ತೆ ಮೂಲ ಸೌಕರ್ಯದ ಕಾರ್ಯಪಾಲಕ ಎಂಜಿನಿಯರ್ ಸಾವಿತ್ರಿ ಅವರ ಸೂಚನೆಯ ಮೇರೆಗೆ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು.

ಇಲ್ಲಿರುವ ಸುಮಾರು 8–10 ಮರಗಳ ಬುಡಕ್ಕೆ ಕಾಂಕ್ರೀಟ್ ಹಾಕಿ ಮುಚ್ಚಲಾಗಿತ್ತು. ಅದರ ಮೇಲೆ ಪೇವರ್ಸ್ ಅಳವಡಿಸುವ ಕಾಮಗಾರಿ ನಡೆಯುತ್ತಿತ್ತು.

ಈ ಕುರಿತು ‘ಪ್ರಜಾವಾಣಿ’ ಬುಧವಾರ ‘ಬೀದಿ ಬದಿ ಮರಗಳ ಬುಡಕ್ಕೆ ಕಾಂಕ್ರೀಟ್ ಕುತ್ತು’ ಎಂಬ ವಿಶೇಷ ವರದಿ ಪ್ರಕಟಿಸಿತ್ತು.

ವಿಜಯನಗರದ ಪಾದಚಾರಿ ಮಾರ್ಗದಲ್ಲಿರುವ ಮರಗಳ ಬುಡಕ್ಕೆ ಹಾಕಿದ್ದ ಕಾಂಕ್ರೀಟ್ ಅನ್ನು ಬುಧವಾರ ತೆರವುಗೊಳಿಸಲಾಯಿತು.

ಜಲಮಂಡಳಿ ಜಾಗದಲ್ಲಿ ಮಿಲ್ಕ್ ಪಾರ್ಲರ್: ಸ್ಥಳೀಯರ ದೂರು

ಬೆಂಗಳೂರು: ನಗರದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಲ್ಲಸಂದ್ರದ ಪೈಪ್‌ಲೈನ್ ರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಬಿಡಬ್ಲ್ಯುಎಸ್‌ಎಸ್‌ಬಿ) ಸೇರಿದ ಜಾಗದಲ್ಲಿ ಅನಧಿಕೃತವಾಗಿ ನಂದಿನಿ ಮಿಲ್ಕ್ ಪಾರ್ಲರ್ ಸ್ಥಾಪಿಸಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಈ ಜಾಗವು ಮೊದಲು ಅಂಗವಿಕಲರಾಗಿರುವ ಟಿ.ಆರ್. ಜೈಕೃಷ್ಣ ಅವರಿಗೆ ಮೊದಲು ಮಂಜೂರಾಗಿತ್ತು. ನಂತರ, ಈ ಜಾಗದಲ್ಲಿ ಸಂಜೀವಿನಿ ನಗರದ ಶ್ರುತಿ ಅವರು ಇಲ್ಲಿ ಮಿಲ್ಕ್ ಪಾರ್ಲರ್ ನಡೆಸುತ್ತಿದ್ದರು. ಆದರೆ, ಜಲಮಂಡಳಿ ಸ್ಥಳ ಮಂಜೂರಾತಿಯನ್ನು ರದ್ದುಗೊಳಿಸಿ, ತಕ್ಷಣವೇ ಈ ಜಾಗದಲ್ಲಿ ನಿರ್ಮಿಸಿದ್ದ ನಂದಿನಿ ಮಿಲ್ಕ್ ಪಾರ್ಲರ್ ಅನ್ನು ತೆರವುಗೊಳಿಸುವಂತೆ ಸೂಚಿಸಿತ್ತು ಎಂದು ಸ್ಥಳೀಯರಾದ ಪವನ್ ಹಾಗೂ ಮತ್ತಿತರರು ದೂರಿದ್ದಾರೆ.

ನಂದಿನಿ ಪಾರ್ಲರ್‌ಗೆ ಸ್ಥಳಾವಕಾಶ ಒದಗಿಸಲು ಸಾಧ್ಯವಿಲ್ಲ ಎಂದು ಜಲ ಮಂಡಳಿ ಕೆಎಂಎಫ್‌ಗೆ ಪತ್ರ ಸಹ ಬರೆದಿತ್ತು. ಈ ಸ್ಥಳದಲ್ಲಿ ನಂದಿನಿ ಪಾರ್ಲರ್ ತೆರೆಯಲು ಅವಕಾಶ ನೀಡಿದರೆ 110 ಹಳ್ಳಿಯ ವ್ಯಾಪ್ತಿಗೆ ಒಳಗೊಂಡಂತೆ ಕಾಮಗಾರಿಗಳು ಹಾಗೂ ನಿರ್ವಹಣೆಗೆ ಕಷ್ಟಕರವಾಗಬಹುದು ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದರು.

ಈ ಬಗ್ಗೆ ಶಾಸಕ ಆರ್. ಮಂಜುನಾಥ್ ಅವರು ಸಹ, ತಮ್ಮ ಕ್ಷೇತ್ರದ ವಾರ್ಡ್ ನಂ.15ರಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ ಪೈಪ್‌ಲೈನ್ ಸ್ವತ್ತಿನಲ್ಲಿ ತಾತ್ಕಾಲಿಕ ನಂದಿನಿ ಪಾರ್ಲರ್ ನಿರ್ಮಿಸಲು ನೀಡಿರುವ ಸ್ಥಳ ಮಂಜೂರಾತಿಯನ್ನು ಹಿಂಪಡೆಯುವಂತೆ ಪತ್ರ ಬರೆದಿದ್ದರು.

ಶ್ರುತಿ ಅವರು ತಮ್ಮ ವೈಯಕ್ತಿಕ ಲಾಭಗೋಸ್ಕರ ನಂದಿನಿ ಪಾರ್ಲರ್ ಮಾಲೀಕತ್ವವನ್ನು ಬೇರೆಯವರಿಗೆ ಹಸ್ತಾಂತರಿಸಿರುವುದಾಗಿ ಸ್ಥಳೀಯರು ದೂರು ನೀಡಿರುವುದರಿಂದ ಸ್ಥಳ ಮಂಜೂರಾತಿಯನ್ನು ಹಿಂಪಡೆಯಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ವೈ.ಎ.ನಾರಾಯಣಸ್ವಾಮಿಗೆ ಸಂಪುಟ ದರ್ಜೆ

ಬೆಂಗಳೂರು: ವಿಧಾನಪರಿಷತ್‌ನ ಮುಖ್ಯ ಸಚೇತಕ ವೈ.ಎ.ನಾರಾಯಣಸ್ವಾಮಿ ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿದೆ.

ಇದರ ಜೊತೆಗೆ ಸಂಪುಟ ದರ್ಜೆ ಸಚಿವರಿಗೆ ಅನ್ವಯವಾಗುವ ಎಲ್ಲ ಸೌಲಭ್ಯಗಳನ್ನೂ ನೀಡಿ ಆದೇಶ ಹೊರಡಿಸಲಾಗಿದೆ.

MAHARASHTRA NATURAL GAS LTD.
(A Joint Venture of GAIL & BPCL)

Notice for Inviting offers for NA Land for DCS installation in Ramanagara District.

“Maharashtra Natural Gas Ltd (MNGL)” intends to procure land in various areas in Ramanagara district.

Approx. 250 Sq.M – 360 Sq.M (Approximately 2690-3875sq.ft.) with plot size as [10m frontage X 25m depth) to (12m frontage X 30m depth)] Non Agricultural land required on long term lease basis for installation of DCS in Ramanagara City & Kanakpura City in **Ramanagara District**.

For complete details including minimum frontage & depth, location, type of land, due date of offer, address for submission of offers etc., interested applicants may please visit our website: **www.mngl.in**

Clarification/ corrigendum/ addendum, if any, shall be published only on the above website. **Brokers / Property dealers need not apply.**

For more information please contact
Sagar Dongare : 08087441267 | Surendran : 09591032409

Address for submission of proposals-
MNGL, URS Complex, Opp.to HP Petrol Pump, Ijoor, Ramanagara Pin- 562159

Note- Proposals shall be submitted within 10 days from date of publishing of this advertisement

3 ವರ್ಷದ ಪದವಿ ಕೋರ್ಸ್ ತಕ್ಷಣಕ್ಕೆ ಸ್ಥಗಿತವಿಲ್ಲ

ನವದೆಹಲಿ (ಪಿಟಿಐ): ನಾಲ್ಕು ವರ್ಷಗಳ ಪದವಿ ಕೋರ್ಸ್‌ಗಳನ್ನು ಪೂರ್ಣವಾಗಿ ಜಾರಿಗೊಳಿಸುವವರೆಗೆ ಮೂರು ವರ್ಷದ ಪದವಿ ಕೋರ್ಸ್‌ಗಳನ್ನು ಸ್ಥಗಿತಗೊಳಿಸು ವುದಿಲ್ಲ ಎಂದು ವಿಶ್ವವಿದ್ಯಾಲಯ ಅನು ದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ.ಜಗದೀಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಮೂರು ಅಥವಾ ನಾಲ್ಕು ವರ್ಷದ ಕೋರ್ಸ್ ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಇರುತ್ತದೆ. ನಾಲ್ಕು ವರ್ಷದ ಕೋರ್ಸ್‌ಗೆ ಸಂಬಂಧಿಸಿದಂತೆ ಹೊಸ ಪಠ್ಯಕ್ರಮದ ಚೌಕಟ್ಟನ್ನು ಸೋಮವಾರ ಘೋಷಿಸಲಾಗಿದೆ ಎಂದು ತಿಳಿಸಿದ್ದಾರೆ.



ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕೋಲಾರ–563101 ದೂರವಾಣಿ: 08152–222570, ಇ–ಮೇಲ್: eepredkolar1@gmail.com

ಅಲ್ಪಾವಧಿ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 26/ 2022–23 ದಿನಾಂಕ: 09.12.2022
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-IVರ ನಿಬಂಧನೆಗೊಳಪಟ್ಟಂತೆ ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಎಸ್.ಬಿ.ಡಿ ಕೆ.ಡಬ್ಲ್ಯೂ–4ರ ನಿಯಮಾವಳಿಗಳನ್ವಯ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಇಂಡೆಂಟ್ ಸಂಖ್ಯೆ: 97794ರಲ್ಲಿ 12 ಸಂಖ್ಯೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಮತ್ತು 97795ರಲ್ಲಿ 12 ಸಂಖ್ಯೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಇವುಗಳ **ಟೆಂಡರ್‌ಗಿಟ್ಟ ಮೊತ್ತವು ಅನುಕ್ರಮವಾಗಿ ರೂ. 445.10 ಲಕ್ಷಗಳು ಮತ್ತು 563.00 ಲಕ್ಷಗಳಾಗಿರುತ್ತದೆ.** ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: **https://eproc.karnataka.gov.in** ಮುಖಾಂತರ ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **16.12.2022 ರಿಂದ 05.01.2023 ರ ಸಂಜೆ 4.00 ಗಂಟೆವರೆಗೆ.** ಗುತ್ತಿಗೆದಾರರು ಟೆಂಡರುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. (2) ಟೆಂಡರ್‌ನ ಪೂರ್ವಭಾವಿ ಸಭೆಯನ್ನು ದಿನಾಂಕ: **19.12.2022ರಂದು ಬೆಳಗ್ಗೆ 11.00 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಳೇ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಕೋಲಾರದಲ್ಲಿ ನಿಗದಿಪಡಿಸಲಾಗಿರುತ್ತದೆ. (3) ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **07.01.2023 ರಂದು ಬೆಳಗ್ಗೆ 11.30 ಗಂಟೆಗೆಂದು** ನಿಗದಿಪಡಿಸಲಾಗಿದೆ. (4) ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ದೂರವಾಣಿ ಮುಖಾಂತರ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪ್ರೋಟಾಲ್ **(Viz.,https://eproc.karnataka.gov.in)** ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: **+ 91 8046010000 & +91 8022631200, 080–22230960 & 22234115** ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 417/ಎಂ.ಸಿ.ಎ/2022–23.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘24 ಗಂಟೆಯೂ ಹೋಟೆಲ್ ತೆರೆಯಲು ಅವಕಾಶ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಅಂಗವಾಗಿ ಹೋಟೆಲ್‌ಗಳನ್ನು 24 ಗಂಟೆಯೂ ತೆರೆಯಲು ಅವಕಾಶ ನೀಡಬೇಕು ಎಂದು ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಮನವಿ ಸಲ್ಲಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಕಾರಣದಿಂದ ಹೊಸ ವರ್ಷದ ಸಂಭ್ರಮಾಚರಣೆ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಈ ವರ್ಷ ಎಲ್ಲ ಹೋಟೆಲ್, ರೆಸ್ಟೋರೆಂಟ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಬೇಕರಿ, ಐಸ್‌ಕ್ರೀಂ ಪಾರ್ಲರ್‌ಗಳಿಗೆ ಬೆಳಗಿನ 3 ಗಂಟೆಯವರೆಗೂ ವ್ಯಾಪಾರ ವಹಿವಾಟು ಮಾಡಲು ಅವಕಾಶ ನೀಡಬೇಕು. ಈಗಾಗಲೇ ಬೇರೆ ರಾಜ್ಯಗಳಲ್ಲಿ ದಿನದ 24 ತಾಸು ತೆರೆಯಲು ಅವಕಾಶ ಕಲ್ಪಿಸಿದಂತೆ ನಮಗೂ ಅವಕಾಶ ನೀಡಬೇಕು ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಒತ್ತಾಯಿಸಿದ್ದಾರೆ.

ಗಾಯಕಿ ಅಂಬುಜಾಕ್ಷಿಗೆ ಎಚ್‌.ಎಲ್‌.ನಾಗೇಗೌಡ ಪ್ರಶಸ್ತಿ ಪ್ರದಾನ

ಜಾನಪದ ಕಲೆಗಳಿಗೆ ಪ್ರೋತ್ಸಾಹ ನೀಡದ ಸರ್ಕಾರ: ಮರಿತಿಬ್ಬೇಗೌಡ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಎಚ್‌.ಎಲ್‌.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ಕೇರಳದ ಹಾಡುಗಾರ್ತಿ ಆರ್‌. ಅಂಬುಜಾಕ್ಷಿ ಅವರಿಗೆ ಪ್ರದಾನ ಮಾಡಲಾಯಿತು. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಸೌಮ್ಯನಾಥ ಸ್ವಾಮೀಜಿ, ಮರಿತಿಬ್ಬೇಗೌಡ, ಆದಿತ್ಯ ನಂಜರಾಜ್, ಜಾನಪದ ಪರಿಷತ್ತು ಅಧ್ಯಕ್ಷ ಹಿ.ಶಿ. ರಾಮಚಂದ್ರೇಗೌಡ ಮತ್ತಿತರರು ಇದ್ದರು.

ಮುಖ್ಯಾಂಶಗಳು
- ₹1 ಲಕ್ಷ ನಗದು ಮತ್ತು ಫಲಕ ಪ್ರದಾನ
- ಕೇರಳದ ‘ಸಾಂಪ್ರದಾಯಿಕ ಪುಳ್ಳುವನ್ ಪಾಟ್ಟು’ ಖ್ಯಾತಿಯ ಗಾಯಕಿ
- ಕಲಾವಿದರಲ್ಲಿ ಭೇದಭಾವ ಬೇಡ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ ಬುಧವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇರಳದ ‘ಸಾಂಪ್ರದಾಯಿಕ ಪುಳ್ಳುವನ್ ಪಾಟ್ಟು’ ಗಾಯಕಿ ಆರ್. ಅಂಬುಜಾಕ್ಷಿ ಅವರಿಗೆ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಮಾಡಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ‘ಸರ್ಕಾರ ಜಾನಪದ ಕಲೆಗೆ ಪ್ರೋತ್ಸಾಹ ನೀಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಪ್ರತಿ ಜಿಲ್ಲೆಯಲ್ಲೂ ಎಲೆಮರೆಕಾಯಿಯಂತಿರುವ ಜಾನಪದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ನಾಡಿನ ಜಾನಪದ ಕಲೆ, ಸಂಸ್ಕೃತಿ ಉಳಿಸಿ-ಬೆಳೆಸಿಕೊಂಡು ಬರುತ್ತಿರುವ ಜಾನಪದ ಕಲಾವಿದರಿಗೆ ಹಾಗೂ ಜಾನಪದ ಪರಿಷತ್‌ಗೆ ಸರ್ಕಾರ ಅಗತ್ಯ ಅನುದಾನ ನೀಡಬೇಕು ’ಎಂದು ಆಗ್ರಹಿಸಿದರು.

‘ಎಚ್. ಎಲ್. ನಾಗೇಗೌಡ ಅವರ ಪ್ರಯತ್ನದಿಂದ ರಾಜ್ಯದಲ್ಲಿ ಕನ್ನಡ ಜಾನಪದ ಪರಿಷತ್ ಉದಯವಾಯಿತು. ಸ್ಥಳೀಯ ಭಾಷೆ, ಸಂಸ್ಕೃತಿ, ಕಲೆ ಪ್ರೋತ್ಸಾಹಿಸಿ ಬೆಳೆಸಿದ್ದರು. ಜಾನಪದ ಕಲೆ ಉಳಿಸಿ ಹಾಗೂ ಕಲಾವಿದರನ್ನು ಬೆಳೆಸಲು ರಾಜ್ಯದಾದ್ಯಂತ ಸಂಚಾರ ನಡೆಸಿದ್ದರು. ಕಲಾವಿದರಿಗೆ ತರಬೇತಿ, ಉತ್ತೇಜನ, ಕಲೆಯ ಉಡುಪುಗಳು ಸೇರದಂತೆ ಅನೇಕ ಸೌಕರ್ಯ ಕಲ್ಪಿಸಲು ನಿರಂತರ ಪ್ರಯತ್ನ ಹಾಕುತ್ತಿದ್ದರು’ ಎಂದು ಅವರು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಮಾತನಾಡಿ, ‘ಎಲ್ಲ ಕಲಾವಿದರೂ ಒಂದೇ. ಶಾಸ್ತ್ರೀಯ ಕಲಾವಿದರು, ಜಾನಪದ ಕಲಾವಿದರು ಎಂಬ ಭೇದಭಾವವನ್ನು ತೋರಬಾರದು’ ಎಂದು ಸಲಹೆ ನೀಡಿದರು.

‘ಇಂದಿನ ಯುವಕರು ಜಾನಪದ ಕಲೆ-ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ. ಆಧುನಿಕ ತಂತ್ರಜ್ಞಾನದ ಮೂಲಕ ಮುಂದಿನ ಪೀಳಿಗೆಗೂ ಜಾನಪದ ಕಲೆ ಹಾಗೂ ಸಂಸ್ಕೃತಿ ಕೊಂಡೊಯ್ಯಬೇಕು’ ಎಂದು ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ವಿಜಯನಗರ ಶಾಖಾ ಮಠದ ಮಠಾಧೀಶ ಸೌಮ್ಯನಾಥ ಸ್ವಾಮೀಜಿ, ಜಾನಪದ ಪರಿಷತ್ತು ಅಧ್ಯಕ್ಷ ಪ್ರೊ. ಹಿ. ಶಿ. ರಾಮಚಂದ್ರೇಗೌಡ, ಜಾನಪದ ವಿದ್ವಾಂಸ ಪ್ರೊ.ರಾಘವನ್ ಪಯ್ಯನಾಡ್, ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಹಾಜರಿದ್ದರು.

ವಾರ್ಷಿಕ ಕಥಾ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಸಮಾಜಮುಖಿ ಪ್ರಕಾಶನವು ಕಥಾ ಪರಂಪರೆಗೆ ಉತ್ತೇಜನ ನೀಡುವ ಸಲುವಾಗಿ ಸಮಾಜಮುಖಿ ವಾರ್ಷಿಕ ಕಥಾಸ್ಪರ್ಧೆ–2023 ಅನ್ನು ಏರ್ಪಡಿಸಿದೆ.

ಸಮಾಜಮುಖಿ ಪುರಸ್ಕಾರಕ್ಕೆ ಆಯ್ಕೆಯಾಗುವ ಐದು ಕಥೆಗಾರರಿಗೆ ತಲಾ ₹5 ಸಾವಿರ ನಗದು ನೀಡಿ ಗೌರವಿಸಲಾಗುವುದು. ಜತೆಗೆ ಆಯ್ದ 15 ಕಥೆಗಳಿಗೆ ಸಮಾಜಮುಖಿ ವಾರ್ಷಿಕ ಕಥಾ ಸಂಕಲನದಲ್ಲಿ ಅವಕಾಶ ನೀಡಲಾಗುವುದು.

ಕಥೆಗಾರರು 2 ಸಾವಿರ ಪದ ಮಿತಿಯಲ್ಲಿ, ಯಾವ ಮಾಧ್ಯಮದಲ್ಲೂ ಪ್ರಕಟವಾಗದ, ನುಡಿ ಅಥವಾ ಯುನಿಕೋಡ್ ಲಿಪಿಯಲ್ಲಿರುವ ಕಥೆಯನ್ನು 2023ರ ಜನವರಿ 15ರೊಳಗೆ samajamukhi2017@gmail.com ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 9900049892 ಸಂಪರ್ಕಿಸಿ.

ಡಿ.22ರಿಂದ ‘ಕಲಾತ್ಮಕ ಛಾಯಾಗ್ರಹಣ ಕಮ್ಮಟ’

ಬೆಂಗಳೂರು: ಸಾಗರ ಫೋಟೊಗ್ರಫಿಕ್ ಸೊಸೈಟಿಯಿಂದ ಡಿ.22 ರಿಂದ ರಾಜ್ಯಮಟ್ಟದ ಕಲಾತ್ಮಕ ಛಾಯಾಗ್ರಹಣ ಕಮ್ಮಟ ಆಯೋಜಿಸಲಾಗಿದೆ.

ಮೊದಲ ಎರಡು ದಿನ ಗಿರೀಶ್ ಮಾಯಾಚಾರಿ ಅವರಿಂದ ‘ಸ್ಮೋಕ್ ಅಂಡ್ ಗ್ಲಾಸ್.. ಡಾರ್ಕ್ ಫೀಲ್ಡ್–ಬ್ರೈಟ್ ಫೀಲ್ಡ್ ಫೋಟೊಗ್ರಫಿ’ಯ ಪ್ರಾತ್ಯಕ್ಷಿಕೆ ಹಾಗೂ ಗೌತಮ್ ರಮೇಶ್ ಅವರಿಂದ ಮಂಜು ಕವಿದ ಲ್ಯಾಂಡ್ ಸ್ಕೇಪ್ ಸೌಂದರ್ಯ, ಪುರಾತನ ದೇವಾಲಯಗಳ ವಾಸ್ತು, ಶಿಲ್ಪಸೌಂದರ್ಯದ ಛಾಯಾಗ್ರಹಣದ ಕಲಿಕೆ ಮತ್ತು ತರಬೇತಿ ನಡೆಯಲಿದೆ. ಉಳಿದ ರಡು ದಿನ ಪ್ರಾರಂಭಿಕ ಹಂತ, ಪಿಕ್ಟೋರಿಯಲ್, ಪ್ರವಾಸಿ, ದೇವಾಲಯ, ಪ್ರಕೃತಿ, ವನ್ಯಜೀವಿ ವಿಭಾಗಳು ಪರಿಣಿತರಿಂದ ತರಬೇತಿ ನಡೆಯಲಿವೆ. ಮೂರು ವರ್ಷಗಳಿಂದ ತಟಸ್ಥವಾಗಿದ್ದ ‘ನೀನಾಸಂ’ ಮತ್ತೆ ಸಾರ್ವಜನಿಕ ಕಾರ್ಯಕ್ರಮ ಆರಂಭಿಸಿದೆ ಎಂದು ಎಸ್‌ಪಿಎಸ್ ನಿರ್ವಾಹಕ ಕೆ.ಎಸ್. ರಾಜಾರಾಮ್ ತಿಳಿಸಿದ್ದಾರೆ.

ನಾಲ್ಕು ದಿನ ಪೂರ್ಣಾವಧಿಯ ವಸತಿ ಸಮೇತ ಮಹಿಳೆಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯಿದೆ. ಶುಲ್ಕ ಪಾವತಿಸಿ ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ. ಆಸಕ್ತರು ವಿವರಗಳಿಗೆ ಮೊಬೈಲ್: 94486 27878 (ಪಂಡಿತ್) ಅಥವಾ 98459 31306 (ರಾಜಾರಾಮ್) ಅವರನ್ನು ಸಂಪರ್ಕಿಸಬಹುದು.

ಗರ್ಭಪಾತದ ಮಾತ್ರೆ ಸೇವಿಸಿ ಮಹಿಳೆ ಸಾವು

ಬೆಂಗಳೂರು: ಗರ್ಭಪಾತದ ಮಾತ್ರೆ ಸೇವಿಸಿ ಮಹಿಳೆಯೊಬ್ಬರು ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

ನಗರದ ಬೇಗೂರು ಠಾಣಾ ವ್ಯಾಪ್ತಿಯ ನ್ಯೂಮೈಕೋ ಲೇಔಟ್‌ನಲ್ಲಿ ಮಹಿಳೆ ನೆಲೆಸಿದ್ದರು.

‘ಮಾತ್ರೆ ಸೇವಿಸಿದ ಬಳಿಕ ಮಹಿಳೆಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ರಕ್ತಸ್ರಾವದಿಂದ ಬಳಲುತ್ತಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಪತ್ನಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ದಂಪತಿಗೆ ಗಂಡು ಮಗುವಿತ್ತು. ಸದ್ಯಕ್ಕೆ ಮತ್ತೊಂದು ಮಗು ಬೇಡವೆಂದು ಮಾತ್ರೆ ಸೇವಿಸಿ ಆರೋಗ್ಯದಲ್ಲಿ ಏರುಪೇರಾಗಿ ಈ ಘಟನೆ ನಡೆದಿದೆ’ ಎಂದು ಮೂಲಗಳು ಹೇಳಿವೆ.

ನಿಧನ ವಾರ್ತೆ

ಕೆ.ಎಸ್. ಶ್ರೀಪಾದ

ಬೆಂಗಳೂರು: ಭದ್ರಾವತಿ ಪಟ್ಟಣದ ಎನ್‌ಎಂಸಿ ಬಡಾವಣೆಯ ನಿವಾಸಿ ಲೆಕ್ಕ ಪರಿಶೋಧಕ ಕೆ.ಎಸ್. ಶ್ರೀಪಾದ (59) ಬುಧವಾರ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಸಹೋದರರು ಇದ್ದಾರೆ. ಲೆಕ್ಕ ಪರಿಶೋಧಕ ಆಗಿ ಶಿವಮೊಗ್ಗ, ಭದ್ರಾವತಿ, ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ನಾಲ್ಕು ದಶಕಗಳಿಂದ ಆರ್‌ಎಸ್‌ಎಸ್ ಕಾರ್ಯಕರ್ತರಾಗಿಯೂ ಸೇವೆ ಸಲ್ಲಿಸುತ್ತಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ|| ಬಿ. ಆರ್. ಅಂಬೇಡ್ಕರ್ ಬೀದಿ, ಬೆಂಗಳೂರು – 560001
e-mail:- om.dwed@gmail.com ದೂರವಾಣಿ ಸಂಖ್ಯೆ: 080-22374981/2235778
ಸಂಖ್ಯೆ: WCD/STR/VOUT/1/2022-23 ದಿನಾಂಕ: 27-09-2022

ಮರುಟೆಂಡರ್ ಪತ್ರಿಕಾ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಕಛೇರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕರೊಂದಿಗೆ ಬಾಹ್ಯಮೂಲ ಆಧಾರದ ಮೇಲೆ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ಮರುಟೆಂಡರ್ ಮೂಲಕ 2022-23ನೇ ಸಾಲಿನ ಆರ್ಥಿಕ ವರ್ಷ ಅಥವಾ ಇಲಾಖೆ ತಿಳಿಸುವ ಮುಂದಿನ ಅವಧಿಯವರೆಗೆ ಅರ್ಹ ಏಜನ್ಸಿದಾರರನ್ನು ಗುರುತಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTTP), 1999 ನಿಯಮಗಳು 2000ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ದಿನಾಂಕ 13-12-2022 ರಿಂದ ದಿನಾಂಕ 20-12-2022 (ಸಂಜೆ 5.00 ಗಂಟೆ) ವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.
ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿದ್ದು, www.eproc.karnataka.gov.in ವೆಬ್‌ಸೈಟನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, 2ನೆ ಮಹಡಿ, ಬಹು ಮಹಡಿಗಳ ಕಟ್ಟಡ, ಬೆಂಗಳೂರು–01 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 22374981/2235378.

ಸಹಿ/–
ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು,
ಡಿಐಪಿಆರ್/ಬೆಂಗಳೂರು/3514/ಮಣಿಪಾಲ್/2022–23

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ
ನಿರ್ದೇಶಕರ ಕಾರ್ಯಾಲಯ ಸರ್ಕಾರಿ ಕೇಂದ್ರ ಮುದ್ರಣಾಲಯ,
8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560 059.
ದೂರವಾಣಿ: 080 2848 4515 / 080 284 84518
ಸಂಖ್ಯೆ: ಡಿಪಿಎಸ್46ಪಿಯುಆರ್(ಸಿ)2021-22/ಸಿಬಿಎಲ್‌ಎಸ್/ಕರೆ-3 ದಿನಾಂಕ: 13-12-2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಿಂಟರ್ ಕನ್ಸ್ಯೂಮಬಲ್ಸ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.48.20 ಲಕ್ಷಗಳಾಗಿರುತ್ತದೆ ಹಾಗೂ ಟೆಂಡರ್‌ನಲ್ಲಿ ಇ.ಎಂ.ಡಿ.ಯು ಈ ಕೆಳಕಂಡಂತೆ ವಿವರಿಸಿದೆ.

Sl. No.	Group No.	Description	EMD in Rs. (In Lakhs)
1.	Group A	Canon	0.05
2.	Group B	HP	0.50
3.	Group C	Konica Minolta	1.75
4.	Group E	Toshiba	0.06
5.	Group F	Ricoh	0.05

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 28–12–2022, 17.30 ಗಂಟೆಗಳು. ಮಾಹಿತಿಯನ್ನು www.https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ನಿರ್ದೇಶಕರು.
DIPR/CP/RO3522/AAPL/2022-23

PUBLIC NOTICE

Public are hereby informed that our client intends to enter into an arrangement of joint development in respect of residentially converted lands described in the Schedule hereunder (hereinafter referred to as the Schedule Property) with M/s. Ciwan Strategy Private Limited, who have represented to our client that they are the sole and absolute owner of the Schedule Property with uninhibited rights of alienation over the same and that none else has any manner of right over the same.

Any person/s claiming to have any manner of right, title, claim or interest in the Schedule Property is hereby called upon to notify the undersigned with supporting documents thereof within Fourteen (14) days from the date of this notice, after which period, our client shall proceed with execution of appropriate documentation with the aforesaid owner on the basis that there are no claims of whatsoever nature with regard to development of the Schedule Property or subsequent sale of developed area therein.

SCHEDULE
(Description of the Schedule Property)

Item No. 1
All that piece and parcel of immovable property being land bearing Survey No. 90/1 measuring 1 Acre 34 Guntas, situated in Ilthore Village, Kundana Hobli, Devanahalli Taluk, Bengaluru Rural District and bounded as follows:
On the East by : Land bearing Survey No. 90/2;
On the West by: Land bearing Survey No. 98;
On the North by: Land bearing Survey No. 99; and
On the South by: Lands bearing Survey Nos. 96, 91 and 89.

Item No. 2
All that piece and parcel of immovable property being portion of land bearing Survey No. 99 measuring 1 Acre 39 Guntas, situated in Ilthore Village, Kundana Hobli, Devanahalli Taluk, Bengaluru Rural District and bounded as follows:
On the East by: Lands bearing Survey Nos. 100 and 101;
On the West by: Land bearing Survey No. 98;
On the North by: Land bearing Survey No. 100 and Chowdanahalli village boundary; and
On the South by: Road and remaining portion of land bearing Survey No. 99.

Item No. 3
All that piece and parcel of immovable property being portion of land bearing Survey No. 99 measuring 6 Acres 35 Guntas, situated in Ilthore Village, Kundana Hobli, Devanahalli Taluk, Bengaluru Rural District and bounded as follows:
On the East by: Land bearing Survey No. 101;
On the West by: Land bearing Survey No. 98;
On the North by: Road and remaining portion of land bearing Survey No. 99; and
On the South by: Land bearing Survey No. 90/1.

Place: Bengaluru Date: December 15, 2022

A. Supreeth, Partner, **CRESTLAW PARTNERS,** Advocates
No. 33, Xavier Layout, 1st Cross, Victoria Road,
Bengaluru – 560 047. **Ph: 080 – 4147 3535/36/37**
E-mail: supreeth@crestlawpartners.in

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: KRYP-Doddahalli
ದಿನಾಂಕ: 06.12.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಕದಿರಿ ದೇವರಪಲ್ಲಿ – ದೊಡ್ಡಹಳ್ಳಿ (22 ಕಿಮೀ ಗಳ) ವಿಭಾಗದಲ್ಲಿ ಓಎಫ್‌ಸಿ ಮತ್ತು 6 ಕ್ವಾಡ್ ಕೇಬಲ್ ಆಧಾರಿತ ಸಂಪರ್ಕ ವ್ಯವಸ್ಥೆಯ ಪೂರೈಕೆ ಮತ್ತು ಟಿಕೆ–ಆರ್‌ಡಿಜಿ ವಿಭಾಗದ ಒಂದು ನಿಲ್ದಾಣದಲ್ಲಿ ಐಪಿ–ಎಂಪಿಎಲ್‌ಎಸ್ ಸಿಸ್ಟಮ್ ಅನ್ನು ಪೂರೈಸುವುದು ಹಾಗೂ ಅಳವಡಿಸುವುದು.	ರೂ. 1,94,29,412.29

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.12.2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ನಿರ್ಮಾಣ, ಬೆಂಗಳೂರು ದಂಡು
PUB/533/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: SWRCNBNCST/15/2022
ದಿನಾಂಕ: 22.12.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಎ) ಆರ್‌ಡಿಎಸ್‌ಓ ಚಿತ್ರ ಸಂ. ಟಿ–8673–8680 ಪ್ರಕಾರ ಬ್ರಿಡ್ಜ್ ಅಪ್ರೋಚ್‌ಗಾಗಿ ಬೇಕಾದ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಪೂರೈಕೆ. (ಪರಿಮಾಣ: 60 ಸೆಟ್‌ಗಳು) ಬಿ) ಆರ್‌ಡಿಎಸ್‌ಓ ಚಿತ್ರ ಸಂ. ಟಿ–8672 ಪ್ರಕಾರ ಬ್ರಿಡ್ಜ್ ಗಾರ್ಡ್ ರೈಲ್‌ಗಾಗಿ ಬೇಕಾದ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಪೂರೈಕೆ. (ಪರಿಮಾಣ: 2700 ಸಂ.) ಸಿ) ಆರ್‌ಡಿಎಸ್‌ಓ ಚಿತ್ರ ಸಂ. ಟಿ–8671 ಪ್ರಕಾರ ಲೆವೆಲ್ ಕ್ರಾಸಿಂಗ್‌ಗೆ ಬೇಕಾದ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಪೂರೈಕೆ. (ಪರಿಮಾಣ: 700 ಸಂ.)	ರೂ. 1,36,42,638/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.12.2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ಉಗ್ರಾಣ/ನಿರ್ಮಾಣ ಬೆಂಗಳೂರು ದಂಡು
PUB/532/AAD/PRB/SWR/2022-23
S.W.Railways SWRRLY SWRRLY

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ, ಬೆಂಗಳೂರು ಇವರ ಸಮ್ಮುಖದಲ್ಲಿ
ಸಿಪಿ(ಐಬಿ)/87/ಬಿಬಿ/2021
ರಲ್ಲಿನ
ಐಎ ಸಂ.347/ಬಿಬಿ/2022
ರಲ್ಲಿ
ಶ್ರೀ. ಅರವಿಂದನ್ ದೇವರಾಜನ್ ಮತ್ತು ಇನ್ನಿತರ 6 ಜನ
ವಿರುದ್ಧ
ಮೆ. ಲಲಿತ್ ಗಂಗಾಧರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್
ಇವರ ವಿಷಯದಲ್ಲಿ
ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ, ಬೆಂಗಳೂರು ಪೀಠ ಇವರ ಸಮ್ಮುಖದಲ್ಲಿ ಸಿಪಿ(ಐಬಿ)/87/ಬಿಬಿ/2021ರಲ್ಲಿ ಐಎ 347/2022 ಸಲ್ಲಿಕೆಯಾಗಿದ್ದು, ಇದರಲ್ಲಿ **ಮೆ. ಲಲಿತ್ ಗಂಗಾಧರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್‌ನ** ಹಿಂದಿನ ನಿರ್ದೇಶಕರುಗಳಾದ ಅಶೋಕ್ ಕುಮಾರ್ ಮತ್ತು ಗಿರೀಶ್ ಪುರವಂಕರ್ ಎಂಬ ನೀವುಗಳು ಪ್ರತಿವಾದಿಗಳು ಆಗಿರುತ್ತೀರಿ, ದಿನಾಂಕ 07 ಅಕ್ಟೋಬರ್ 2022ರ ಆದೇಶದ ಮೇರೆಗೆ ನಿಮಗೆ ಹೊರಡಿಸಲಾಗಿದ್ದ ನೋಟಿಸ್ “ಈ ವಿಳಾಸದಲ್ಲಿ ಸದರಿ ವ್ಯಕ್ತಿ ಲಭ್ಯವಿರುವುದಿಲ್ಲ” ಎಂಬ ಕಾರಣಕ್ಕೆ ಬಟವಾಡೆಗೊಳ್ಳದೆ ಮರಳಿ ಬಂದಿರುತ್ತದೆ. ಆದ್ದರಿಂದ, 05 ಜನವರಿ 2023 ರಂದು ನೀವು, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ, ಬೆಂಗಳೂರು ಪೀಠ ಇವರ ಸಮಕ್ಷದಲ್ಲಿ ಖುದ್ದಾಗಿ ಹಾಜರಾಗಬೇಕೆಂದು ಈ ಮೂಲಕ ನಿರ್ದೇಶನ ನೀಡಲಾಗಿದೆ, ಇದಕ್ಕೆ ತಪ್ಪಿದಲ್ಲಿ ಸದರಿ ವಿಷಯವನ್ನು ನಿಮ್ಮ ಅನುಪಸ್ಥಿತಿಯಲ್ಲಿಯೇ ಇತ್ಯರ್ಥಗೊಳಿಸಲಾಗುತ್ತದೆ.

PUBLIC NOTICE

This is to inform the general public that our clients **Mr. P.V. Venkatesh Iyer, Mr. Govinda Setty, Mr Purushothama Reddy and Mr. D.S. Deepak** are the absolute owners of the property morefully mentioned in the schedule.

It has come to the knowledge of our clients that, Nagesh and others are showing the schedule property as **Sy. No.91/18 of Rayasandra Village, Sarjapura Hobli, Anekal Taluk** and trying to create some third party interest over the same. Hence the general public are hereby warned not to proceed further or to enter into any kind of transaction with said person/s as they do not have any right, title and interest over the schedule property and inspite of this public notice, if any one proceeds further to transact with said Nagesh and others they will be doing so at their cost and risk which please note.

SCHEDULE

All that piece and parcel of the converted land in **Sy. No.91, an extent of 3 acre 19 guntas, situated at Rayasandra Village, Sarjapura Hobli, Anekal Taluk, Bengaluru District** and bounded on:
East by : Road,
West by : Naganathapura Border,
North by : Parappana Agrahara Border,
South by : Road, Doddamara & Temple.

ADDRESS FOR SERVICE:
REDDY & REDDY ASSOCIATES,
ARAVIND REDDY. H, Advocate,
No.S-5, 2nd Floor, No.1, Thimmaiah Chambers, 1st Cross, Gandhinagar, Bangalore - 560 009.
aruhmt@yahoo.com/9945506953

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Admission

Sri Danavantri Educational Trust (R.)
SRI LAKSHMI COLLEGE OF PHARMACY
127/1, Sri Ganadhada Kaval, Chandra Layout, Sunkadakatte, Bangalore-560091.
Contact Nos.: 9538099966, 080-23585832
Gmail id: pharmacysrilakshmi@gmail.com
Affiliated to Pharmacy Council of India, New Delhi, Rajiv Gandhi University of Health Sciences, Bangalore, Board of Examining Authority, Bangalore. Govt.of Karnataka

ADMISSION NOTIFICATION
B.Pharmacy and D. Pharmacy
Applications are invited from eligible candidates

B.Pharmacy
- 4 years course- Min. Qualification for Admission to Bachelor in Pharmacy
- Pass with 10+2 (40%)

(Regular Science Academic Stream with PCMB / PCMS/ Computer Science)

D.Pharmacy
- 2 years course - Min. Qualification for Admission to Diploma in Pharmacy
- Pass with 10+2 Examination

(Regular Science Academic Stream with PCMB / PCMS/ Computer Science)

SLCOP Job Vacancies
- Vacancies for teaching faculty for M.Pharma (Pharmacology/ Pharmaceutical Chemistry / Pharmacognosy
- Office Staff, Computer Operator
- Librarian
- Send resume within 20-DEC-2022 of this month
- Salary as per PCI/AICTE Guidelines.

Visit us at www.slcop.org Sd/- Principal

Multiple Vacancy

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

REAL ESTATE SELLING

Sites

HRBR Layout

DIRECT SALE BY OWNER BDA Plot (50 x 80) with Clean Title & Documents for SALE 1ST BLOCK HRBR Layout Behind GOLD's Gym GENUINE BUYERS ONLY BROKERS Excuse Contact Arun Kumar 98452 80547

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Marketing & Sales

URGENTLY REQUIRED Sales Executives For An Established UPVC Products For Bangalore Contact 7022723432

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

Business to Business

Business

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

PERSONAL

Change of Name

CHANGE OF NAME
I, **PURNIMA ROHATGI** W/o Herdesh Rohatgi and D/o Yas Pal Gahlaut R/a No. 101, LVS Lavender Apartment, 2/78/1, Rachenahalli, Thanisandra, Nagwara, Near Manyata Tech Park, Bangalore North, Dr. Shivarama Karanth Nagar, Bangalore- 560077 Declare That **PURNIMA GAHLAUT**, **PURNIMA KUMARI** and **PURNIMA ROHATGI** above all Names one and the same person i.e myself only, Henceforth, I am known as **PURNIMA ROHATGI** only, vide affidavit dated: 14.12.2022 sworn before notary K. Velayudham, Bangalore

I KHAJA Mohamad Wajidulla S/o Inayathulla Khaja Mohamad aged about 50 Years, resident of #2481 K G Mohalla main road, Kolar. Have changed my name to K M Wajeedulla and my father's name as K M Inayathulla vide affidavit dated 31.11.2022 before Notary Venkateshappa N, Kolar. Henceforth I shall be called as K M Wajeedulla S/o K M Inayathulla only

I, PRANAV SHETTY, aged about 19 years, S/o Abhayraj shetty, residing at No.24, M.N. Krishna Rao Road, Basavanagudi, Bengaluru -560004, have changed my earlier name from 'PRANAV ABHAYRAJ SHETTY' to PRANAV SHETTY vide affidavit dated 13-12-2022 sworn before Notary, Smt. Shashidevi M.P, Bengaluru.

I VIVEK KUMAR MUNDHRA S/O LATE HANUMAN DAS MUNDHRA RESIDING AT G01, STERLING DEWBERRIES, 1ST MAIN, 7TH CROSS, JUDICIAL LAYOUT, YELAHANKA, BANGALORE 560065 HAVE CHANGED MY NAME TO VIVEK MUNDHRA VIDE AFFIDAVIT DATED 13.12.2022 BEFORE NOTARY S.I. BALAGURU, BANGALORE.

CHANGE OF NAME
I, **P. Yohitha,** R/at: No. 20, Sri Nagamma Nilayam, 8th Cross, Nagappa Reddy Layout, B. Narayanapura, Dooravaninagar Post, Bangalore - 560 016 have changed my name to **SBP Yohitha** vide affidavit dated: 10.12.2021 before Notary Y.V. Shankar, Bangalore. Henceforth, I shall be called as **SBP Yohitha** only.

I, M Chitra, Spouse/o., #14807575P, Ex-Naik(TS), Saravanan N, R/a. #204/10, Chinnamma Layout Subbanapalya, M.S.Nagar Post Bangalore-33 have changed my name from M CHITRA to CHITRA S vide affidavit dated 13/12/2022 notary K. Venkateshan Bangalore.

CHANGE OF NAME
I, **Pradeep. R.P** S/o. **K.H. Paramashivaiah** R/at. #638, Shivaganga, Ward No.7, Agrahara, Ramanagara Town-562159 Ramanagara District have changed my Son's name from **R.P. ADITHYA** to **ADITHYA PRADEEP** vide affidavit dated 06/12/2022 before notary M.C. Devendra, Ramanagara.

I, #14807575P, Ex-Naik(TS), Saravanan N, R/a. #204/10, Chinnamma Layout Subbanapalya, M.S.Nagar Post Bangalore-560033 have changed my daughter's name from TIRTHANA to TIRTHANA S vide affidavit dated 13/12/2022 notary K. Venkateshan Bangalore.

CHANGE OF NAME
I, **Pradeep. R.P** S/o. **K.H. Paramashivaiah** R/at. #638, Shivaganga, Ward No.7, Agrahara, Ramanagara Town- 562159 Ramanagara District have changed my Son's name from **R.P. ABHI** to **ABHI PRADEEP** vide affidavit dated 06/12/2022 before notary M.C. Devendra, Ramanagara.

I, #14807575P, Ex-Naik(TS), Saravanan N, R/a. #204/10, Chinnamma Layout Subbanapalya, M.S.Nagar Post Bangalore-33 have changed my daughter's name from S SADIKSHA to S SUDIKSHA vide affidavit dated 14/12/2022 notary K. Venkateshan Bangalore.

CHANGE OF NAME
I, **P. NAGARAJ,** residing at #30/31, M.T.S. Layout, Kengeri Upanagara, Bangalore- 560060, have changed my name to **P. NAGARAJ GOWDA,** vide affidavit dated 09.11.2022 before Notary R.S. Vijay, Bangalore. Henceforth I shall be known as **P. NAGARAJ GOWDA** only

I, RUBEESA T M Changed my name to Rubeesa Faizal vide Affidavit Dt:12-12-2022 Sworn before Notary M Prabhakar Bangalore

I KUMAR S/O, Shankar Rathod R/o H No. 4/22 Nrupatunga Nagar, Aditya Nagar, Malkhed Tq - Sedam, Dis - Kalaburagi have changed my name to Kumar Rathod for all purposes

PUBLIC NOTICE

KAPL, BANGALORE
DISPOSAL OF SCRAP
WE ARE A GOVERNMENT OF INDIA ENTERPRISE, ENGAGED IN THE MANUFACTURE OF PHARMACEUTICAL PRODUCTS. WE ARE IN THE PROCESS OF FINALISING OUR ANNUAL CONTRACT FOR SALE OF SCRAP ITEMS.
YOU MAY OBTAIN TENDER DOCUMENTS FROM OUR MATERIALS DEPARTMENT AND SUBMIT YOUR BEST OFFER IN SEALED COVER WITHIN 7 DAYS FROM THE DATE OF THIS ADVERTISEMENT, TO DEPUTY GENERAL MANAGER – MATERIALS, KARNATAKA ANTIBIOTICS & PHARMACEUTICALS LIMITED, NO.14, 2ND PHASE, PEENYA INDUSTRIAL AREA, BANGALORE – 560 058, PHONE – 28395186, 28392605.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರತಿವಾದಿಗಳಿಗೆ ಕಾರಣವನ್ನು ತೋರಿಸಲು ಸೂಚನೆ
[ಎಸ್‌ಸಿಆರ್, ಆದೇಶ ಎಕ್ಸ್ ಎಕ್ಸ್‌ಐಐ]
ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೇಲ್ಮನವಿ ನ್ಯಾಯವ್ಯಾಪ್ತಿಯಲ್ಲಿ 2020 ರ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ 384 ಗಾಗಿ ಅರ್ಜಿ
ನಡುವೆ
ಎ.ಟಿ. ಬಾಬು ರಾವ್
----ಮೇಲ್ಮನವಿದಾರ
ವಿರುದ್ಧ
ರಾಮಚಂದ್ರ ಶೆಟ್ಟಿ ಎ. ಮತ್ತು ಇತರರು
---- ಪ್ರತಿಕ್ರಿಯಿಸಿದವರು
1. ರಾಮಚಂದ್ರಪ್ಪ ಶೆಟ್ಟಿ ಎ. ಸನ್ ಆಫ್ ಅಂಜನಪ್ಪ ಶೆಟ್ಟಿ, ನಂ. 17, 4ನೇ ಮುಖ್ಯ ರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು, ಕರ್ನಾಟಕ 560028.
2. ಎ.ಟಿ. ಶಂಕರ ರಾವ್ ಸನ್ ಆಫ್ ದಿವಂಗತ ಶ್ರೀ. ತುಕಾರಾಮ ರಾವ್, ನಂ. 6/6, ಹೆಚ್.ಬಿ. ಸಮಾಜ ರಸ್ತೆ ಕ್ರಾಸ್, ಬಸವನಗುಡಿ, ಬೆಂಗಳೂರು, ಕರ್ನಾಟಕ 560004
3. ಎಂ. ವೆಂಕಟರಾಮ್, ಸನ್ ಆಫ್ ಕೆ.ಮುನಿಯಪ್ಪ, ನಂ. 119, 4ನೆ ಕ್ರಾಸ್, ಮಲ್ಲಪ್ಪ ಬಡಾವಣೆ, ಕಲ್ಯಾಣ್ ನಗರ, ಬೆಂಗಳೂರು, ಕರ್ನಾಟಕ 560043
ಆದರೆ, ಮೇಲ್ಮನವಿದಾರರಾದ ಶ್ರೀ ಎ.ಟಿ. ಬಾಬು ರಾವ್ ರವರು ಸಿಸಿಸಿ ನಂ. 341/2018 ಗೌರವಾನ್ವಿತ ಹೈಕೋರ್ಟ್ ಆಫ್ ಕರ್ನಾಟಕ ನೀಡಿದ 25.10.2019 ರ ತೀರ್ಪು/ಆದೇಶವನ್ನು ಪ್ರಶ್ನಿಸಿ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಲು ಅದ್ಯತೆ ನೀಡಿದ್ದಾರೆ. ("ದೋಷಾರೋಪಣೆ ಆದೇಶ"). ಮೇಲ್ಕಂಡ ಮೇಲ್ಮನವಿ ಯನ್ನು ಆಲಿಸಿದ ನಂತರ, ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 02.03.2020 ರಂದು ಈ ಕೆಳಗಿನ ಆದೇಶವನ್ನು ನೀಡಲು ಮನಸ್ಸುಮಾಡಿತು.
‘ವಿಳಂಬವನ್ನು ಕ್ಷಮಿಸಲಾಗಿದೆ. ನೀಡಲಾದ ನೋಟಿಸನ್ನು, ಮೂರು ವಾರಗಳಲ್ಲಿ ಹಿಂತಿರುಗಿಸಬಹುದು. ಮುಂದಿನ ಆದೇಶದವರೆಗೆ, ಉಚ್ಚ ನ್ಯಾಯಾಲಯವು ಅಂಗೀಕರಿಸಿದ ಆಕ್ಷೇಪಾರ್ಹ ಆದೇಶದ ಕಾರ್ಯಾಚರಣೆಗೆ ತಡೆ ಇರುತ್ತದೆ.”
ಮತ್ತು, ಕಾರಣವನ್ನು ತೋರಿಲು ನೋಟಿಸ್‌ನ ಸೇವೆಯು ಸಲ್ಲಿಸದ ಪ್ರತಿವಾದಿ ಸಂಖ್ಯೆ. 1 ರಿಂದ 3 ರ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಮೇಲೆ ತಿಳಿಸಿದ ವಿಷಯವನ್ನು ಕಾಲಕಾಲಕ್ಕೆ ಮತ್ತು ಕೊನೆಯದಾಗಿ ನೊಂದಣಿ ಕಛೇರಿ ಮುಂದೆ ಪಟ್ಟಿ ಮಾಡಲಾಗಿದೆ. 3 ನವೆಂಬರ್, 2022 ರಂದು ರಿಜಿಸ್ಟ್ರಾರ್ ಕೋರ್ಟ್, ಈ ಕೆಳಗಿನ ಆದೇಶವನ್ನು ಜಾರಿಗೊಳಿಸಿದಾಗ:
"ತಕ್ಕ ಸೇವೆಯ ಹೊರತಾಗಿಯೂ, ಪ್ರತಿವಾದಿ ನಂ.4 ರ ಪರವಾಗಿ ಯಾರೂ ಹಾಜರಾಗುವುದಿಲ್ಲ. ಮರಣ ಹೊಂದಿದ ಪ್ರತಿವಾದಿ ಸಂಖ್ಯೆ. 1 ರಿಂದ 3 ಗೆ ಸಂಬಂಧಿಸಿದಂತೆ ಪರ್ಯಾಯಕ್ಕಾಗಿ ಅದೇ ಸಮಯದಲ್ಲಿ ಆಗಿದೆ. ನೋಂದಣಿ ಮುಂದುವರೆಯಲು ಅನುಮತಿಸಲಾಗಿದೆ."
09.12.2022 ರಂದು ಮತ್ತೊಮ್ಮೆ ಪಟ್ಟಿ ಮಾಡಿ.
ಈಗ, ಆದ್ದರಿಂದ, ಈ ನ್ಯಾಯಾಲಯದ ಮುಂದೆ ನೀವು ಖುದ್ದಾಗಿ ಅಥವಾ ನೀವು ಸರಿಯಾಗಿ ನೇಮಿಸಿದ ಈ ನ್ಯಾಯಾಲಯದಲ್ಲಿ ಅಡ್ವೊಕೇಟ್–ಆನ್–ರೆಕಾರ್ಡ್ ಮೂಲಕ ನೀವು ಈ ನ್ಯಾಯಾಲಯದ ಮುಂದೆ ಹಾಜರಾದಾಗ ಮೇಲಿನ ವಿಷಯವನ್ನು (ಗಳನ್ನು) ನ್ಯಾಯಾಲಯದ ಮುಂದೆ ವಿಚಾರಣೆಗೆ ಸೂಕ್ತ ಸಮಯದಲ್ಲಿ ಪೋಸ್ಟ್ ಮಾಡಲಾಗುತ್ತದೆ ಎಂಬುದನ್ನು ಗಮನಿಸಿ ಸೂಚನೆಯ ಸೇವೆಯ ದಿನಾಂಕದಿಂದ 30 ದಿನಗಳಲ್ಲಿ ಪರವಾಗಿ. ಅದರ ನಂತರ ನೀವು ನ್ಯಾಯಾಲಯಕ್ಕೆ ಕಾರಣವನ್ನು ತೋರಿಸಬಹುದು, ಆ ದಿನದಲ್ಲಿ ವಿಶೇಷ ರಜೆ ಮತ್ತು ಮಧ್ಯಂತರ ಪರಿಹಾರವನ್ನು ಏಕೆ ನೀಡಲಾಗುವುದಿಲ್ಲ ಎಂದು ನಿರ್ದಿಷ್ಟಪಡಿಸಬಹುದು ಮತ್ತು ಪರಿಣಾಮವಾಗಿ ಮೇಲ್ಮನವಿಯನ್ನು ಅನುಮತಿಸಲಾಗುವುದಿಲ್ಲ. ಆರ್ಡರ್ ಎಕ್ಸ್ ಎಕ್ಸ್ ಐ ಐ 2013 ರ ನಿಯಮ ಎಸ್ ಸಿ ಆರ್ ಅಡಿಯಲ್ಲಿ ಒದಗಿಸಲಾದ ಅರ್ಜಿಗೆ ವಿರೋಧವಾಗಿ ನೀವು ನಿಮ್ಮ ಅಫಿಡವಿಟ್ ಅನ್ನು ಸಲ್ಲಿಸಬಹುದು, ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಅಥವಾ ವಿಚಾರಣೆಗೆ ನಿಗದಿಪಡಿಸಿದ ದಿನಾಂಕಕ್ಕಿಂತ ಎರಡು ವಾರಗಳ ಮೊದಲು, ಯಾವುದು ಮೊದಲು, ಆದರೆ ಕ್ರಿಮಿನಲ್ ಮೇಲ್ಮನವಿಯಲ್ಲಿ ಸೂಚಿಸಲಾದ ಕಾನೂನು ಅಥವಾ ಆಧಾರಗಳ ಪ್ರಶ್ನೆಗಳಿಗೆ ವಿರುದ್ಧವಾಗಿ ಆಧಾರಗಳನ್ನು ಹೊಂದಿಸುವ ಮೂಲಕ ಮಾತ್ರ ಹಾಗೆ ಮಾಡಬೇಕು ಮತ್ತು ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ ಆದೇಶದ ವಿರುದ್ಧ ನ್ಯಾಯಾಲಯದ ಮುಂದೆ ಸಲ್ಲಿಸಲಾದ ಅಂತಹ ಮನವಿಗಳು ಮತ್ತು ದಾಖಲೆಗಳನ್ನು ಸಲ್ಲಿಸಬಹುದು ಮತ್ತು ಆಧಾರಗಳನ್ನು ಸಹ ಹೊಂದಿಸಬಹುದು ಮಧ್ಯಂತರ ಆದೇಶವನ್ನು ನೀಡದಿದ್ದಕ್ಕಾಗಿ ಅಥವಾ ಈಗಾಗಲೇ ನೀಡಿದ್ದರೆ ಮಧ್ಯಂತರ ಆದೇಶವನ್ನು ತೆರವು ಮಾಡಲು.
ಮೇಲ್ಕಂಡಂತೆ ನೀವು ಹಾಜರಾತಿಯನ್ನು ನಮೂದಿಸಲು ವಿಫಲರಾದರೆ, ಫಲಿತಾಂಶದ ಮೇಲ್ಮನವಿಯ ವಿಚಾರಣೆಗೆ ವಿಶೇಷ ರಜೆಯ ಮಂಜೂರಾತಿ ನಂತರವೂ ನಿಮಗೆ ಯಾವುದೇ ಮುಂದಿನ ಸೂಚನೆ ಇರುವುದಿಲ್ಲ ಮತ್ತು ಮೇಲೆ ತಿಳಿಸಲಾದ ವಿಷಯವನ್ನು ನಿಮ್ಮ ಅನುಪಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು ಎಂಬುದನ್ನು ಮತ್ತಷ್ಟು ಗಮನಿಸಿ.
ಮೇಲ್ಮನವಿಯ ಪ್ರತಿಗಳನ್ನು ಮೇಲ್ಮನವಿದಾರರ ಸಲಹೆಗಾರರಿಂದ, ಕೆಳಗೆ ಒದಗಿಸಲಾದ ವಿಳಾಸದಲ್ಲಿ ಸಂಗ್ರಹಿಸಬಹುದು.
ಈ ನ್ಯಾಯಾಲಯದ ನನ್ನ ಕೈ ಮತ್ತು ಮುದ್ರೆಯ ಅಡಿಯಲ್ಲಿ ಈ 18.11.2022 ರಂದು ನೀಡಲಾಗಿದೆ,
ಸಹಾಯಕ ರಿಜಿಸ್ಟ್ರಾರ್ ಅವರ ಆದೇಶದ ಮೇರೆಗೆ
ಭಾರತದ ಸರ್ವೋಚ್ಚ ನ್ಯಾಯಾಲಯ ಮೇಲ್ಮನವಿದಾರರ ವಕೀಲರ ವಿಳಾಸ
ಶ್ರೀಮತಿ ಅನುರಾಧಾ ಮುತ್ತಟ್ (ವಕೀಲರು.)
ಕೆ–57, ಜಾಂಗ್ಪುರ ಎಕ್ಸ್ಟೆಂಷನ್, ಹೊಸ ದೆಹಲಿ, ಹೊಸ ದೆಹಲಿ, ದೆಹಲಿ

For Advt. Booking Contact : 9845114560

DH DECCAN HERALD ಪ್ರಜಾವಾಣಿ

BOOK YOUR REAL ESTATE
AD IN DECCAN HERALD ALL KARNATAKA
PRAJAVANI ALL KARNATAKA
@ 750/-* Per Sqcm
Single Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಕೇಶವ ರಾಜಣ್ಣ .ಬಿ ರವರಿಗೆ ಹುಟ್ಟು ಹಬ್ಬದ ಶುಭಾಶಯಗಳು

ಯಲಹಂಕದ ಜನತೆಯ ಒಳಿತಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಸರಳತೆಯ ಒಡೆಯ

ಯಲಹಂಕವನ್ನು ಬೆಳೆಸಲು ಮುಂದಾಗಿರುವ ಕೇಶವ ರಾಜಣ್ಣ.ಬಿ ರವರನ್ನು ಇನ್ನಷ್ಟು ಪ್ರೋತ್ಸಾಹಿಸೋಣ

ಪ್ರಸ್ತುತಿ: ವಿ.ವಿ. ಬ್ಯಾಂಡ್ ಸ್ಪಾಟ್

ಕೆ.ಪಿ.ಸಿ.ಸಿ ಸದಸ್ಯರು, ಮಾಜಿ ಕಾರ್ಯದರ್ಶಿಗಳು ಹಾಗೂ ಯಲಹಂಕ ಕಾಂಗ್ರೆಸ್ ಮುಖಂಡರಾದ ಕೇಶವರಾಜಣ್ಣ .ಬಿ ರವರು ಸಮಾಜದ ಸರ್ವತೋಮುಖ ಬೆಳವಣಿಗೆಗೆ, ಎಲ್ಲಾ ವರ್ಗಗಳ ಏಳಿಗೆಗೆ ಮತ್ತು ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಪ್ರಶಂಸನೀಯ.30 ವರ್ಷಗಳ ಹಿಂದೆ ವಿದ್ಯಾರ್ಥಿ ಜೀವನದಿಂದಲೇ ಸಮಾಜ ಸೇವೆ ಆರಂಭ.

ಸಾಮಾಜಿಕ ಕಳಕಳಿ ಹೊಂದಿರುವ ಇವರು ರಾಜಕೀಯದ ಮುಖೇನ ಸಮಾಜ ಸೇವೆ ಮಾಡಲು ಮುಂದಾದರು.ಕಾಂಗ್ರೆಸ್ಸಿನ ತತ್ವ ಸಿದ್ಧಾಂತಗಳನ್ನು ಮನದಟ್ಟು ಮಾಡಿಕೊಂಡು ಅದರ ಸೈದ್ಧಾಂತಿಕ ಧ್ಯೇಯ, ಉದ್ದೇಶ ಅರ್ಥೈಸಿಕೊಂಡು ತಮ್ಮ ವಿಚಾರಧಾರೆಗೆ ಮತ್ತು ಕಾಂಗ್ರೆಸ್ ಪಕ್ಷದ ವಿಚಾರಧಾರೆ ಹೊಂದಿಕೆ ಇರುವುದರಿಂದ ಕಾಂಗ್ರೆಸ್ ಪಕ್ಷವನ್ನು ಸೇರಿದರು.ನಂತರ ಕೆ.ಪಿ.ಸಿ.ಸಿ ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು.ಪ್ರಸ್ತುತ ಕೆ.ಪಿ. ಸಿ.ಸಿ ಸದಸ್ಯರು ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದ ಮುಖಂಡರಾಗಿದ್ದಾರೆ.ಕಾಂಗ್ರೆಸ್ಸಿನ ಪ್ರಬಲ ಸದಸ್ಯರಲ್ಲಿ ಕೇಶವ ರಾಜಣ್ಣ .ಬಿ ಯವರ ಹೆಸರು ಅಗ್ರಪಂಕ್ತಿಯಲ್ಲಿ ಕಂಡುಬರುತ್ತದೆ.ಇವರ ತತ್ವನಿಷ್ಠೆ ಮತ್ತು ಒಡನಾಟ ಕಾಂಗ್ರೆಸ್ಸಿನ ವರ್ಚಸ್ಸನ್ನು ಇನ್ನಷ್ಟು ಹೆಚ್ಚಿಸಿದೆ.

ಇಡೀ ವಿಶ್ವವೇ ತಿರುಗಿ ನೋಡುವಂತೆ ಬೃಹತ್ ಬೆಂಗಳೂರನ್ನು ನಿರ್ಮಿಸಿದ ನಾಡಪ್ರಭು ಕೆಂಪೇಗೌಡರು ಹುಟ್ಟಿದ ಊರು ಯಲಹಂಕ... ಮಹಾನ್ ವ್ಯಕ್ತಿ ಜನಿಸಿದ ಊರಿನಲ್ಲಿ ಕರಾಳತೆಯ ಬದುಕು ಬದುಕುತ್ತಿದ್ದ ಜನರು ತಮ್ಮನ್ನು ನಿರಾಳಗೊಳಿಸಲು ಅಂಗಲಾಚುತ್ತಿದ್ದರು.ಸ್ವಾತಂತ್ರ್ಯ ಪೂರ್ವದಿಂದಲೇ ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವ ಒಕ್ಕಲಿಗ ಸಮುದಾಯದ ನಾಯಕ ದಿ|| ನಂಜಪ್ಪ ಗೌಡರ ಮೊಮ್ಮಗನಾದ ಕೇಶವ ರಾಜಣ್ಣ .ಬಿ ಯವರು ತಮ್ಮ ಪರಂಪರೆಯ ತತ್ವಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ.ಜನರ ನೋವಿನ ಕೂಗಿಗೆ ಓಗೊಟ್ಟು ಯಲಹಂಕ ವಿಧಾನಸಭಾ ಕ್ಷೇತ್ರ ಪ್ರದೇಶದ ಉದ್ದಗಲಕ್ಕೂ ಪ್ರವಾಸ ಮಾಡಿ ಅಲ್ಲಿನ ಸಾರ್ವಜನಿಕರ ಕುಂದು ಕೊರತೆಗಳನ್ನು ವಿಶ್ರುತವಾಗಿ ಚರ್ಚಿಸಿ ಅದಕ್ಕೆ ತಕ್ಕಂತೆ ಕೈಲಾದ ಪ್ರಾಮಾಣಿಕ ಪ್ರಯತ್ನ ಮಾಡಿ ಜನರಿಗೆ ಸಹಾಯ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಕಾಂಗ್ರೆಸ್ಸಿನ ಮೂಲಭೂತ ಧ್ಯೇಯಗಳನ್ನು ಸಾಮಾಜಿಕ ಸಮಾನತೆ, ಬಡವರ ಏಳಿಗೆ, ದಾರಿದ್ರ್ಯ ನಿರ್ಮೂಲನೆ, ಸಾಮಾಜಿಕ ಸೌಹಾರ್ದತೆ ಹಾಗೂ ಮತ್ತಷ್ಟು ಅಭಿವೃದ್ಧಿಪರ ಕಾರ್ಯಗಳನ್ನು ಪಾಲಿಸಿಕೊಂಡು ಅದಕ್ಕೆ ತಕ್ಕಂತೆ ಜನ ಸೇವೆಯಲ್ಲಿ ನಿರತರಾಗಿದ್ದಾರೆ. ಇವರು ಪ್ರಚಾರ ಪ್ರಿಯರಲ್ಲ ಕೇವಲ ನಿಷ್ಠಾವಂತ ಕಾರ್ಯಕರ್ತರು ಹಾಗೂ ನಿಸ್ವಾರ್ಥ ಮನೋಭಾವನೆ ಹೊಂದಿರುವ ವ್ಯಕ್ತಿ.

ಯಲಹಂಕದಲ್ಲಿ ಸಮಸ್ಯೆಗಳ ಸರಮಾಲೆಯೇ ಇದೆ.. ಅದನ್ನು ಅರ್ಥೈಸಿಕೊಂಡು ಸಮತೋಲನವಾಗಿ ತೂಗಿ ಪರಿಹಾರ ನೀಡುವುದರಲ್ಲಿ ಇವರ ನಿಷ್ಠೆ ಮತ್ತು ಪ್ರಾಮಾಣಿಕತೆ ಸ್ಮರಣೀಯ. ಬಹುಶಃ ಅದನ್ನು ಯಲಹಂಕದ ಜನರು ಪೂರ್ತಿಯಾಗಿ ಮನಗಂಡಿರುತ್ತಾರೆ.ಜನಸಾಮಾನ್ಯರ ಹಿತವೇ ಇವರ ಮೂಲ ಉದ್ದೇಶವೆಂದು ಪರಿಗಣಿಸಿ ಅದಕ್ಕಾಗಿ ನಿರಂತರ ಶ್ರಮಿಸುತ್ತಿದ್ದಾರೆ ಜೊತೆಗೆ ಜನ ಸೇವೆಯನ್ನು ತಮ್ಮ ಉಸಿರಾಗಿಸಿಕೊಂಡು ಬದುಕುತ್ತಿದ್ದಾರೆ.ಯಾವುದೇ ಸಮಯದಲ್ಲಿ ಯಾರು ಬಂದು ಸಹಾಯ ಕೇಳಿದರು ಕ್ಷಣ ಮಾತ್ರದಲ್ಲಿ ಸಹಾಯ ಮಾಡುವುದು ಇವರ ಚರ್ಯೆ. ಯಲಹಂಕದಲ್ಲಿನ ಎಷ್ಟೋ ನಿರ್ಗತಿಕರಿಗೆ ಅನ್ನದಾತರಾಗಿ,ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಸಿಕೊಟ್ಟು ಮಾನವೀಯತೆಯ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ರಾಜಕೀಯವನ್ನು ಹೊರತು ಪಡಿಸಿ ಯಲಹಂಕದ ಜನ ಪರಿವಾರವನ್ನು ಸ್ವಾವಲಂಬಿಗಳಾಗಿ ಮಾಡಲು ಆರ್ನ ಹಾಲಿನ ಡೈರಿಯನ್ನು ಪ್ರಾರಂಭಿಸಿ ಸಾವಿರಾರು ರೈತರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಿದ್ದಾರೆ.ಇಂದು ಆರ್ನ ಡೈರಿ ದಿನಕ್ಕೆ ಸರಾಸರಿ 60 ಸಾವಿರ ಲೀ. ಹಾಲನ್ನು ರೈತರಿಂದ ಸಂಗ್ರಹಿಸಿ ರೈತರ ಪಾಲಿನ ಆಶಾಕಿರಣವಾಗಿ ಪ್ರತಿನಿಧಿಸುತ್ತಿದೆ.ಮಹಿಳೆಯರನ್ನು ಪ್ರೋತ್ಸಾಹಿಸಿ ಉದ್ಯೋಗ ಕಲ್ಪಿಸಿಕೊಟ್ಟು ಅವರನ್ನು ಸ್ವಾಭಿಮಾನದಿಂದ ಬದುಕಲು ಉತ್ತೇಜಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಣ್ಣೆಂದರೆ ಬರೀ ಒಲೆಯ ಮುಂದೆ ಇರಬೇಕಾದವಳಲ್ಲ ಅಥವಾ ಮನೆಯ ಮತ್ತು ಮನೆಯವರ ಸೇವೆ ಮಾಡುತ್ತಾ ಕಾಲಕಳೆಯುವುದಲ್ಲ ಎಂಬ ಮಾತನ್ನು ವರು ಸ್ತ್ರೀ ಶಕ್ತಿ ಸಂಘವನ್ನು ಪ್ರೋತ್ಸಾಹಿಸುವುದರ ಮೂಲಕ ಅಕ್ಷರಶಃ ಸಾಭೀತು ಮಾಡಿದ್ದಾರೆ. ಅನಾಥ ಮಕ್ಕಳ ಶಿಕ್ಷಣಕ್ಕೆ ಇವರು ನೀಡುತ್ತಿರುವ ಪರೋಕ್ಷವಾದ ಕೊಡುಗೆಗಳು ಅವರ್ಣನೀಯ ಸಮಾಜದಲ್ಲಿ ಎಲ್ಲರು ಉತ್ತಮರಾಗಬೇಕೆಂಬ ಇವರ ಕಲ್ಪನೆಗೆ ಮೆಚ್ಚುಗೆ ವ್ಯಕ್ತಪಡಿಸಲೇಬೇಕು.ಸರಳತೆಯೇ ಇವರ ಆಸ್ತಿ, ಬಡವರ ಮೇಲಿನ ಸಹಾನುಭೂತಿಯೇ ಇವರ ಅಂತಸ್ತು. ಎಲ್ಲರನ್ನು ಸರಿಸಮಾನವಾಗಿ ಕಾಣುವ ದೃಷ್ಟಿಕೋನ ಇವರ ಮೇಲಿನ ಗೌರವವನ್ನು ದುಪ್ಪಟ್ಟಾಗಿಸುತ್ತದೆ. ದಯವೇ ಧರ್ಮದ ಮೂಲವಯ್ಯ ಎಂಬ ಬಸವಣ್ಣರ ವಚನವನ್ನು ಚಾಚು ತಪ್ಪದೆ ಅರ್ಥಪೂರ್ಣವಾಗಿ ತಮ್ಮಲ್ಲಿ ಅಳವಡಿಸಿಕೊಂಡು ಬದುಕುತ್ತಿದ್ದಾರೆ ಮತ್ತು ಬೇರೆಯವರಿಗೂ ಸ್ವತಂತ್ರವಾದ ಬದುಕು ರೂಪಿಸುತ್ತಿದ್ದಾರೆ.

ಕೊರೋನವೆಂಬ ಹೆಮ್ಮಾರಿಯಿಂದ ಇಡೀ ವಿಶ್ವವೇ ಲಾಕ್ಡೌನ್ನು ಳಿಯಲ್ಲಿ ಬಂಧನವಾಗಿತ್ತು. ಹಾಗೆಯೇ ಯಲಹಂಕದ ಸಾಮಾನ್ಯ ಜನರು ತತ್ತರಿಸಿಹೋಗಿದ್ದರು ಹಾಗೂ ಅಸಹಾಯಕತೆಯಿಂದ ಬದುಕುಳಿಯುವ ನಂಬಿಕೆಯನ್ನೇ ಕಳೆದುಕೊಂಡಿದ್ದರು.ಇಂತಹ ಸಮಯದಲ್ಲಿ ಸಂಕಷ್ಟದಲ್ಲಿರುವ ಜನರ ಪಾಲಿಗೆ ದೇವರ ಹಾಗೆ ಬಂದು ಕೇಶವ ರಾಜಣ್ಣ.ಬಿ ಯವರು.. ಲಕ್ಷಾಂತರ ಲೀಟರ್ ಹಾಲು, ಸಾವಿರಾರು ದಿನಸಿ ಕಿಟ್ ಗಳು ಹಾಗೂ 90 ಲಾರಿ ಲೋಡ್ ತರಕಾರಿಯನ್ನು ಹಂಚಿ ಯಲಹಂಕದ ಅಸಹಾಯಕರಿಗೆ ನೆರವಾದರು. ಮೂಲತಃ ರೈತ ಕುಟುಂಬದಲ್ಲಿ ಜನಿಸಿದ ಕೇಶವ ರಾಜಣ್ಣ.ಬಿ ಯವರು ಅದೆಷ್ಟೋ ರೈತರಿಗೆ ಹಾಗೂ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ.ಇವರ ಸರಳ ಜೀವನಶೈಲಿ ಮತ್ತು ಸಾರ್ವಜನಿಕರ ಜೊತೆಗೆ ಬೆರೆಯುವ ರೀತಿಗೆ ಪ್ರತಿಯೊಬ್ಬರೂ ಕೂಡ ಇವರ ಅಭಿಮಾನಿಯಾಗುವುದರಲ್ಲಿ ಅನುಮಾನವೇ ಇಲ್ಲ.ಇವರು ಸಮರ್ಥ ಜನನಾಯಕರೆಂದು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬೇಕಾದ ವಿಚಾರ. ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡು ಅದರ ಜೊತೆಗೆ ಸಹಬಾಳ್ವೆನಡೆಸುತ್ತಿದ್ದಾರೆ.ನಿಷ್ಕಲ್ಮಶವಾದ ಮನಸ್ಸು ಹಾಗೂ ಪರಿಶುದ್ಧವಾದ ಚಿಂತನೆಯಿಂದ ಯಲಹಂಕದ ಜನತೆಯ ಪ್ರೀತಿ ಪಾತ್ರರಾಗಿದ್ದಾರೆ.ಸೌಜನ್ಯ ನಡವಳಿಕೆ ಹಾಗೂ ಸಮಸ್ಯೆಗಳ ಬಗೆಗಿನ ಗ್ರಹಿಕೆ ಅಪಾರ,ಶಾಂತಿಪ್ರಿಯರು ಮತ್ತು ಸೌಮ್ಯ ಸ್ವಭಾವ ಹೊಂದಿರುವ ವ್ಯಕ್ತಿ ಕೂಡ ಆಗಿರುತ್ತಾರೆ. ಯಲಹಂಕದಲ್ಲಿ ಹೊಸ ಚೈತನ್ಯ ಮೂಡಿಸಿ ಭವಿಷ್ಯದಲ್ಲಿ ಹೊಸ ಇತಿಹಾಸ ಬರೆಯಲು ಮುಂದಾಗಿದ್ದಾರೆ.ಕುಂಠಿತಗೊಂಡಿರುವ ಜನಸಾಮಾನ್ಯರ ಬದುಕನ್ನು ಕ್ಷೇಮಗೊಳಿಸುವ ಧೃಡ ಸಂಕಲ್ಪದಲ್ಲಿ ಮುನ್ನಡೆಯುತ್ತಿದ್ದಾರೆ.

ಬಹುಶಃ ಕೇಶವ ರಾಜಣ್ಣ.ಬಿ ಯವರನ್ನು ಯಲಹಂಕದ ಜನತೆಯ ಬಾಳಿಗೆ ಹೊಸಬೆಳಕಾಗಿ ದೇವರೇ ನೇಮಿಸಿದ್ದಾರೆ ಎನ್ನುವ ಭಾವನೆ ಕೆಲವೊಮ್ಮೆ ಮೂಡುತ್ತದೆ ಹಾಗೂ ಅದೇ ನಿಜವೂ ಕೂಡ ಆಗಿರಬಹುದು.ಯಲಹಂಕದ ನಿವಾಸಿಗಳ ನಂಬಿಕೆಗಳು ಅವಶೇಷವಾಗುತ್ತಿದ್ದ ಸಮಯದಲ್ಲಿ ಕೇಶವ ರಾಜಣ್ಣ.ಬಿ ಸ್ವತಃ ತಾವೇ ಮುಂದೆ ಬಂದು ಯಾವುದೇ ಸ್ವಾರ್ಥ ಬಯಕೆಗಳು ಹಾಗೂ ಅಪೇಕ್ಷೆಗಳಿಲ್ಲದೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿರುವ ಜನರನ್ನು ಕಾಪಾಡುವಲ್ಲಿ ಸಫಲರಾಗಿದ್ದಾರೆ.ಇವರ ಈ ಸೇವೆಯು ಯಲಹಂಕ ಜನತೆಯ ಮನದಲ್ಲಿ ಹಚ್ಚೆಯ ಹಾಗೆ ಉಳಿದಿರುತ್ತದೆ. ಕೇಶವ ರಾಜಣ್ಣ.ಬಿ ಯವರಿಗೂ ಹಾಗೂ ಯಲಹಂಕದ ನಿವಾಸಿಗಳಿಗೂ ಇರುವ ಒಡನಾಟ ಅನನ್ಯ,ಅಮೋಘ ಹಾಗೂ ಅವರ್ಣನೀಯ.ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಸೇವೆ ಮಾಡಲು ದೇವರು ಇವರಿಗೆ ಶಕ್ತಿ ಕರುಣಿಸಲಿ ಎಂದು ನಾವೆಲ್ಲರೂ ಈ ಕ್ಷಣದಲ್ಲಿ ಕೇಳಿಕೊಳ್ಳೋಣ.

ನಮ್ಮನ್ನು ಬೆಂಬಲಿಸಲು ನಮ್ಮ ಮೊಬೈಲ್ ಸಂಖ್ಯೆ 9504660466 ಗೆ ಕರೆಮಾಡಿ.

❖

ಭಾರತ, ಅಮೆರಿಕದ ನಕಲಿ ನೋಟುಗಳ ತಯಾರಿ ಜಾಲ: ತಲೆಮರೆಸಿಕೊಂಡ ಇಬ್ಬರು ಆರೋಪಿಗಳು

₹1.10 ಕೋಟಿ ಮೌಲ್ಯದ ನಕಲಿ ನೋಟು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ₹ 1.10 ಕೋಟಿ ಮೌಲ್ಯದ ಭಾರತ ಹಾಗೂ ಅಮೆರಿಕದ ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣದ ಇಬ್ಬರು ರೂವಾರಿಗಳು ತಲೆಮರೆಸಿಕೊಂಡಿದ್ದಾರೆ.

‘ಮನೆಯೊಂದನ್ನು ಬಾಡಿಗೆ ಪಡೆದಿದ್ದ ಆರೋಪಿಗಳು, ನಕಲಿ ನೋಟು ತಯಾರಿಸುತ್ತಿದ್ದರು. ಜೊತೆಗೆ ಹಣ ದ್ವಿಗುಣ, ಹಣ ವರ್ಗಾವಣೆ, ಹೂಡಿಕೆಯ ಹೆಸರಿನಲ್ಲಿ ಸಾರ್ವಜನಿಕರಿಗೆ ವಂಚಿಸುತ್ತಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘₹ 500 ಮುಖಬೆಲೆಯ 10,033 ಭಾರತೀಯ ನಕಲಿ ನೋಟುಗಳು, 100 ಡಾಲರ್ ಮುಖಬೆಲೆಯ 798 ನಕಲಿ

ಸಿಸಿಬಿ ಪೊಲೀಸರು ಜಪ್ತಿ ಮಾಡಿದ ನಕಲಿ ನೋಟುಗಳು

ಅಪರಾಧ ಸುದ್ದಿ

ನೋಟುಗಳು, ನಕಲಿ ಕರೆನ್ಸಿ ತಯಾರಿಕೆಗೆ ದಾಸ್ತಾನಿದ್ದ ನೋಟಿನ ಮಾದರಿಯ 1 ಸಾವಿರ ಕಪ್ಪು ಬಣ್ಣದ ಹಾಗೂ ಬಿಳಿ ಬಣ್ಣದ ಹಾಳೆ, ರಾಸಾಯನಿಕ ಬಾಟಲಿಗಳು, ಕೆನಾನ್ ಕಂಪನಿಯ ಕೆಂಪು, ಗುಲಾಬಿ, ಹಳದಿ, ಕಪ್ಪುಬಣ್ಣದ ಪ್ರಿಂಟರ್ ಇಂಕ್ ಜೆಟ್‌ಗಳು, ಎಲೆಕ್ಟ್ರಾನಿಕ್ ಡ್ರೈಯಿಂಗ್ ಯಂತ್ರ ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿವೆ.

‘ಇಬ್ಬರು ಆರೋಪಿಗಳು ಸ್ಥಳೀಯ ಹಾಗೂ ವಿದೇಶಿ ಮೂಲದ ವ್ಯಕ್ತಿಗಳೊಂದಿಗೆ ಸೇರಿಕೊಂಡು, ನಕಲಿ ನೋಟು ತಯಾರಿಸಿ ವಂಚಿಸುತ್ತಿದ್ದರು. ಕಂಪ್ಯೂಟರ್ ಹಾಗೂ ಕಲರ್ ಇಂಕ್ ಬಳಕೆಯಿಂದ ನೋಟು ತಯಾರಿಸುತ್ತಿದ್ದರು. ವಂಚನೆಗೆ ಒಳಗಾದ ವ್ಯಕ್ತಿಯೊಬ್ಬರು ಹೆಣ್ಣೂರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ ಸಿಸಿಬಿ ಘಟಕದ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನಕಲಿ ಕರೆನ್ಸಿ ವಶಕ್ಕೆ ಪಡೆದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಎಂಡಿಎಂಎ ಕ್ರಿಸ್ಟಲ್

ನಾಲ್ವರು ಪೆಡ್ಲರ್, ವಿದೇಶಿ ಪ್ರಜೆ ಬಂಧನ

ಹೆಬ್ಬಾಳ, ಬಾಣಸವಾಡಿ ಹಾಗೂ ಕೋರಮಂಗಲದಲ್ಲಿ ನಿಷೇಧಿತ ಮಾದಕ ವಸ್ತು ಹಾಗೂ ಎಂಡಿಎಂಎ ಕ್ರಿಸ್ಟಲ್ ಪರಿಚಯಸ್ಥರಿಗೆ ಮಾರಾಟ ಮಾಡುತ್ತಿದ್ದ ಸೂಡಾನ್ ದೇಶದ ಪ್ರಜೆ ಸೇರಿ ನಾಲ್ವರು ಪೆಡ್ಲರ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹ 35 ಲಕ್ಷದ ಮಾದಕ ವಸ್ತು ಹಾಗೂ ಎಂಡಿಎಂಎ ಕ್ರಿಸ್ಟಲ್ ವಶಕ್ಕೆ ಪಡೆದಿದ್ದಾರೆ. ಕೃತ್ಯಕ್ಕೆ ಬಳಸಿದ ಕಾರು ಹಾಗೂ ಐದು ಮೊಬೈಲ್ ವಶಕ್ಕೆ ಪಡೆಯಲಾಗಿದೆ.

‘ಆರೋಪಿಗಳು ನೈಜೀರಿಯಾ ಮತ್ತು ಕೇರಳದಿಂದ ಕಡಿಮೆ ಬೆಲೆಗೆ ಎಂಡಿಎಂಎ ಕ್ರಿಸ್ಟಲ್ ಅನ್ನು ಖರೀದಿಸಿ ರಾಜಧಾನಿಯ ವಿದ್ಯಾರ್ಥಿಗಳು, ಐಟಿ –ಬಿಟಿ ಉದ್ಯೋಗಿಗಳಿಗೆ ಪ್ರತಿ ಗ್ರಾಂಗೆ ₹ 10ರಿಂದ ₹ 12 ಸಾವಿರಕ್ಕೆ ಮಾರಾಟ ಮಾಡಿ ಹಣ ಗಳಿಸುತ್ತಿದ್ದರು. ಈ ದಂಧೆಯಲ್ಲಿ ಇನ್ನಷ್ಟು ಮಂದಿ ತೊಡಗಿಕೊಂಡಿದ್ದು ಅವರ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸರ್ಕಾರಿ ಜಮೀನು ಗುತ್ತಿಗೆಗೆ ಶೀಘ್ರ ಕ್ರಮ: ಸಚಿವ ಅಶೋಕ

ಬೆಂಗಳೂರು: ‘ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಸರ್ಕಾರಿ ಜಮೀನುಗಳನ್ನು ಕಾಫಿ ಬೆಳೆಗಾರರಿಗೆ ದೀರ್ಘಾವಧಿಗೆ ಗುತ್ತಿಗೆಗೆ ನೀಡಲು ಅಗತ್ಯ ಪ್ರಕ್ರಿಯೆಗಳನ್ನು ಶೀಘ್ರದಲ್ಲಿ ಅಂತಿಮಗೊಳಿಸಲಾಗುವುದು’ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಕಾಫಿ ಬೆಳೆಗಾರರ ನಿಯೋಗದ ಜತೆ ಬುಧವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ಎಸ್ಟೇಟ್‌ಗಳಿಗೆ ಹೊಂದಿಕೊಂಡಿರುವ ಸರ್ಕಾರಿ ಜಮೀನುಗಳಲ್ಲಿ ದೀರ್ಘ ಕಾಲದಿಂದ ಸಾಗುವಳಿ ಇದೆ. ಅಂತಹ ಜಮೀನುಗಳನ್ನು ರೈತರಿಗೆ ಗುತ್ತಿಗೆಗೆ ನೀಡುವ ಕುರಿತು ಹಲವು ಬಾರಿ ಚರ್ಚಿಸಲಾಗಿದೆ. ಕಾನೂನಿನ ವ್ಯಾಪ್ತಿಯಲ್ಲಿ ಯಾವ ರೀತಿಯಲ್ಲಿ ಗುತ್ತಿಗೆ ನೀಡಬೇಕು ಎಂಬುದರ ಕುರಿತು ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್ ಮತ್ತು ಶಾಸಕ ಎಂ.ಪಿ. ಕುಮಾರಸ್ವಾಮಿ ಹಾಜರಿದ್ದರು.

ಹಕ್ಕಿಪಿಕ್ಕಿ ಜನಾಂಗದವರ ಸುಲಿಗೆ: ಆರೋಪಿಗಳ ಬಂಧನ

ಬೆಂಗಳೂರು: ಕೆಂಗೇರಿ ಉಪನಗರದ ಗಾಂಧಿ ನಗರದಲ್ಲಿ ಶೆಡ್‌ಗೆ ನುಗ್ಗಿ ಹಕ್ಕಿಪಿಕ್ಕಿ ಜನಾಂಗದವರ ಸುಲಿಗೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ಮೈಲಸಂದ್ರದ 1ನೇ ಕ್ರಾಸ್‌ನ ದರ್ಪಣ್‌ಕುಮಾರ್ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಮೂವರು ಬಾಲಕರನ್ನು ಬಂಧಿಸಲಾಗಿದೆ.

ಬಂಧಿತರಿಂದ ₹ 10 ಲಕ್ಷ ಮೌಲ್ಯದ ಮೂರು ಆಟೊ, 5 ದ್ವಿಚಕ್ರ ವಾಹನ, 4 ಮೊಬೈಲ್, ಒಂದು ಬೆಳ್ಳಿಯ ಚೈನು ಹಾಗೂ ಒಂದು ಚಿನ್ನದ ಚೈನ್ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೆಂಗೇರಿ ಗಾಂಧಿನಗರದ ಹಕ್ಕಿಪಿಕ್ಕಿ ಕಾಲೊನಿಯ ಪೂನಂ ಮಹಲ್ ಪಕ್ಕದಲ್ಲಿ ಕೃಷ್ಣಮೂರ್ತಿ ಅವರಿಗೆ ಸೇರಿದ ಶೆಡ್‌ನಲ್ಲಿ ರೇಣುಕಾ ಹಾಗೂ ಅಭಿಷೇಕ್ ನೆಲೆಸಿದ್ದರು. ಗಾರೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಡಿ.6ರಂದು ಮಧ್ಯರಾತ್ರಿ ಶೆಡ್‌ಗೆ ನುಗ್ಗಿ ಅಭಿಷೇಕ್ ಅವರಿಗೆ ಕಬ್ಬಿಣದ ರಾಡಿನಿಂದ ಮುಖ ಹಾಗೂ ಕೈಕಾಲಿಗೆ ಹಲ್ಲೆ ನಡೆಸಿ ಮೂರು ಮೊಬೈಲ್ ಕಸಿದು ಪರಾರಿಯಾಗಿದ್ದರು. ಬಂಧಿತರು ನಗರದ ಬೇರೆ ಬೇರೆ ಕಡೆಗಳಲ್ಲಿ ನಡೆದ ಕಳವು ಹಾಗೂ ಸುಲಿಗೆ ಕೃತ್ಯದಲ್ಲೂ ಭಾಗಿಯಾಗಿದ್ದರು ಎಂದು ಮೂಲಗಳು ತಿಳಿಸಿವೆ.

‘ಲವ್ ಜಿಹಾದ್: ಪ್ರತ್ಯೇಕ ಕಾನೂನು ಅಗತ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಲವ್ ಜಿಹಾದ್’ ತಡೆಗೆ ರಾಜ್ಯದಲ್ಲಿ ಪ್ರತ್ಯೇಕ ಕಾನೂನು ರೂಪಿಸುವ ಹಾಗೂ ವಿಶೇಷ ಕಾರ್ಯಪಡೆ ರಚಿಸುವ ಅಗತ್ಯ ಇಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅಭಿಪ್ರಾಯಪಟ್ಟರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲವ್ ಜಿಹಾದ್ ತಡೆಗೆ ಪ್ರತ್ಯೇಕ ಕಾನೂನು ರೂಪಿಸಲು ಸಂಘ ಪರಿವಾರದ ಸಂಘಟನೆಗಳು ಮನವಿ ಮಾಡಿವೆ. ರಾಜ್ಯದಲ್ಲಿ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯ್ದೆಯಲ್ಲಿ ಈ ಅಂಶ ಅಡಕವಾಗಿದ್ದು, ಪ್ರತ್ಯೇಕ ಕಾನೂನು ರೂಪಿಸುವ ಅವಶ್ಯಕತೆ ಸದ್ಯಕ್ಕೆ ಇಲ್ಲ. ಆದರೂ, ಮನವಿ ಪರಿಶೀಲಿಸಲಾಗುವುದು’ ಎಂದರು.

‘ವ್ಯಕ್ತಿಯೊಬ್ಬ ತನಗೆ ಇಷ್ಟ ವಾದ ಧರ್ಮ ಅನುಸರಿಸಲು ಸಂವಿಧಾನದಲ್ಲಿ ಅವಕಾಶವಿದೆ. ಮತ್ತೊಂದು ಧರ್ಮ ಅನುಸರಿಸುವ ಮುನ್ನ ಅರ್ಜಿ ಸಲ್ಲಿಸಬೇಕು. ಆಮಿಷವೊ ಅಥವಾ ಬಲ ವಂತದ ಮತಾಂತರವೊ ಎಂದು ಪರಿಶೀಲಿಸಿ ಅನುಮತಿ ನೀಡಲಾಗುವುದು. ಆದರೆ, ಚಿತ್ರದುರ್ಗ ಸೇರಿ ರಾಜ್ಯದ ಹಲವೆಡೆ ಆಮಿಷದ ಮತಾಂತರ ಅವ್ಯಾಹತವಾಗಿ ನಡೆಯುತ್ತಿವೆ. ಮಠಾಧೀಶರ ಕೋರಿಕೆಯ ಮೇರೆಗೆ ಕಾನೂನು ರೂಪಿಸಲಾಗಿದೆ. ಮತಾಂತ ರಕ್ಕೆ ಸಂಬಂಧಿಸಿ ರಕ್ತ ಸಂಬಂಧಿಗಳು ದೂರು ನೀಡಬೇಕು’ ಎಂದರು.

14 ಠಾಣೆ, ಎಸಿಪಿ ಕಚೇರಿಯಲ್ಲಿ ಕ್ಯೂಆರ್ ಕೋಡ್

ಆಗ್ನೇಯ ವಿಭಾಗ: ಜನಸ್ನೇಹಿ ಪೊಲೀಸ್‌ನತ್ತ ಹೆಜ್ಜೆ; ಡಿಸಿಪಿ ಸಿ.ಕೆ.ಬಾಬಾ ಮೇಲುಸ್ತುವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಗ್ರಂಥಾಲಯ ನಿರ್ಮಿಸಿದ್ದ ಆಗ್ನೇಯ ವಿಭಾಗದ ಪೊಲೀಸರು, ಇದೀಗ ಜನಸ್ನೇಹಿ ಪೊಲೀಸ್ ವ್ಯವಸ್ಥೆ ಜಾರಿಗೊಳಿಸಲು ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ.

ಆಗ್ನೇಯ ವಿಭಾಗದ 14 ಪೊಲೀಸ್ ಠಾಣೆಗಳಿಗೂ ಈಗ ಕ್ಯೂಆರ್ ಕೋಡ್ ವ್ಯವಸ್ಥೆ ಬಂದಿದೆ. ಜತೆಗೆ ಎಸಿಪಿ ಕಚೇರಿಯಲ್ಲೂ ಕ್ಯೂಆರ್ ಕೋಡ್ ಸ್ಕ್ಯಾನರ್ ಬೋರ್ಡ್ ಅಳವಡಿಸಲಾಗಿದೆ. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಠಾಣೆಗೆ ಬರುವ ದೂರುದಾರರು, ಸಿಬ್ಬಂದಿ ಕಾರ್ಯ ವೈಖರಿ, ದೂರು ಸ್ವೀಕಾರವಾಯಿತೆ? ಸಿಬ್ಬಂದಿ ವರ್ತನೆ ಹೇಗಿತ್ತು? ಎಂಬುದನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಭಿಪ್ರಾಯ ತಿಳಿಸುವ ವ್ಯವಸ್ಥೆ ಇದಾಗಿದೆ.

ಇದನ್ನು ಪರಾಮರ್ಶೆ ಮಾಡಲು ಪ್ರತ್ಯೇಕ ತಂಡವನ್ನೇ ನಿಯೋಜಿಸಲಾಗಿದೆ. ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ಠಾಣೆಯಲ್ಲಿ ಏನಾದರೂ ಸಮಸ್ಯೆ ಎದುರಾದರೆ ಸ್ಕ್ಯಾನ್ ಮಾಡಿ ನಿಗದಿತ ಕಾಲಂನಲ್ಲಿ ಬರೆದರೆ ಸಾಕು. ಹಿರಿಯ ಅಧಿಕಾರಿಗಳು ಸಿಬ್ಬಂದಿಗೆ ಸೂಚನೆ ನೀಡಿ ಕೆಲಸ ಆಗುವಂತೆ ನೋಡಿಕೊಳ್ಳುತ್ತಿದ್ದಾರೆ.

‘ಠಾಣೆಗಳಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಈ ವ್ಯವಸ್ಥೆ ಸಹಕಾರಿಯಾಗಿದೆ. ಸಾರ್ವಜನಿಕರು ಠಾಣೆಗೆ ಪ್ರವೇಶಿಸುತ್ತಿದ್ದಂತೆ ಸಿಬ್ಬಂದಿ ನಮಸ್ಕರಿಸಿದರೆ? ಕುಡಿಯಲು ನೀರು ಕೊಟ್ಟರೆ? ಎಂಬುದರ ಬಗ್ಗೆಯೂ ಅಲ್ಲಿ ಬರೆಯಬಹುದು. ಸಂಬಂಧಪಟ್ಟ ಸಿಬ್ಬಂದಿ ಕೆಲಸದ ಬಗ್ಗೆಯೂ ಅಲ್ಲಿ ತಿಳಿಸಬಹುದು. ಸಿಬ್ಬಂದಿ ಹಣ ಕೇಳಿದರೆ? ಒಟ್ಟಾರೆ ನಿಮ್ಮ ಅನುಭವ ಹೇಗಿತ್ತು ಎಂಬುದರ ಬಗ್ಗೆಯೂ ಅಲ್ಲಿ ಬರೆಯಬಹುದು. ಕ್ಯೂಆರ್ ಕೋಡ್ ಅಳವಡಿಸಿಕೊಂಡ ಮೇಲೆ ಗುಣಾತ್ಮಕ ಬದಲಾವಣೆಯಾಗಿದೆ’ ಎಂದು ಡಿಸಿಪಿ ಸಿ.ಕೆ.ಬಾಬಾ ತಿಳಿಸಿದ್ದಾರೆ.

‘ಎಫ್‌ಐಆರ್ ಸ್ವೀಕರಿಸದಿದ್ದರೂ ಅಲ್ಲಿ ಮಾಹಿತಿ ಹಾಕಿದರೆ ಸಾಕು ಮರು ಕ್ಷಣವೇ ಎಫ್‌ಐಆರ್ ದಾಖಲಿಸುವ ವ್ಯವಸ್ಥೆ ಆಗಲಿದೆ. ಸಿಟ್ಟಿನಿಂದ ಬಂದವರೂ ಖುಷಿಯಿಂದ ಹೋಗಬೇಕೆಂದು ಈ ವ್ಯವಸ್ಥೆ ಅನುಷ್ಠಾನಕ್ಕೆ ತರಲಾಗಿದೆ’ ಎಂದು ಹೇಳಿದರು.

ಕ್ಯೂಆರ್ ಕೋಡ್

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

ದಕ್ಷಿಣ ಪಿನಾಕಿನಿ: ಮೂರು ತಿಂಗಳಲ್ಲಿ ನ್ಯಾಯಮಂಡಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆಗೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸಲು ‘ದಕ್ಷಿಣ ಪಿನಾಕಿನಿ ಜಲವಿವಾದ ನ್ಯಾಯಮಂಡಳಿ’ ರಚಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮೂರು ತಿಂಗಳ ಕಾಲಾವಕಾಶ ನೀಡಿದೆ.

ಈ ವಿವಾದವನ್ನು ಮಾತುಕತೆ (ಸಂಧಾನ) ಮೂಲಕ ಬಗೆಹರಿಸಲು ವಿಳಂಬ ಮಾಡುತ್ತಿರುವ ಕೇಂದ್ರ ಸರ್ಕಾರವನ್ನು ನ. 16ರಂದು ತರಾಟೆಗೆ ತೆಗೆದುಕೊಂಡಿದ್ದ ಸುಪ್ರೀಂ ಕೋರ್ಟ್, 4 ವಾರಗಳಲ್ಲಿ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸೂಚಿಸಿತ್ತು.

‘ನದಿ ನೀರು ಹಂಚಿಕೆಗೆ ನ್ಯಾಯಾಧೀಕರಣ ಸ್ಥಾಪಿಸಬೇಕು ಎಂದು ತಮಿಳುನಾಡು ಸರ್ಕಾರವು 2019ರ ನ. 30ರಂದು ಮನವಿ ಮಾಡಿದೆ. ಈ ವಿವಾದವನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸಲು ಸಂಧಾನ ಸಮಿತಿಯನ್ನು ರಚಿಸಲಾಗಿದೆ. ನ್ಯಾಯಾ ಧೀಕರಣ ರಚಿಸಲು ಸಮಿತಿಯು ತಾತ್ವಿಕ ಅನುಮೋದನೆ ನೀಡಿದೆ’ ಎಂದು ಕೇಂದ್ರ ಸರ್ಕಾರ ಹೇಳಿತ್ತು.

> **ನ್ಯಾಯಮಂಡಳಿ ರಚಿಸಬಾರದು ಎಂಬುದು ರಾಜ್ಯದ ನಿಲುವು. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗುವುದು. ಜತೆಗೆ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಈ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸಿ.ಟಿ.ರವಿಕುಮಾರ್ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ ಬುಧವಾರ ನಡೆಸಿತು. ನ್ಯಾಯಮಂಡಳಿ ಸ್ಥಾಪನೆಯ ಸಂಪೂರ್ಣ ಕಾರ್ಯವಿಧಾನಕ್ಕೆ ಆರು ತಿಂಗಳುಗಳು ಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರದ ವಕೀಲರು ಮನವಿ ಮಾಡಿದರು. ಈ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಬಾಟಿ ಅವರನ್ನು ಒಳಗೊಂಡ ತಂಡವು ತನ್ನ ಅರ್ಜಿಯಲ್ಲಿ, ‘ನ್ಯಾಯಮಂಡಳಿ ಸ್ಥಾಪನೆಯ ಸಚಿವ ಸಂಪುಟದ ಟಿಪ್ಪಣಿಗೆ ಕೇಂದ್ರ ಜಲಶಕ್ತಿ ಸಚಿವಾಲಯ ಒಪ್ಪಿಗೆ ನೀಡಿದೆ. ಈ ಟಿಪ್ಪಣಿಗಳನ್ನು ಗೃಹ ಸಚಿವಾಲಯ, ಕಾನೂನು ಮತ್ತು ನ್ಯಾಯ ಸಚಿವಾಲಯ, ಹಣಕಾಸು ಸಚಿವಾಲಯ ಹಾಗೂ ಪ್ರಧಾನಿ ಕಚೇರಿಗೆ ಕಳುಹಿಸಲಾಗಿದೆ. ಎರಡು ವಾರಗಳ ಒಳಗೆ ಪ್ರತಿಕ್ರಿಯೆ ನೀಡುವಂತೆ ಕೋರಲಾಗಿದೆ’ ಎಂದು ತಿಳಿಸಿತು.

ನ್ಯಾಯಮಂಡಳಿ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಪಡೆಯಬೇಕಾಗುತ್ತದೆ. ಈ ಎಲ್ಲ ಪ್ರಕ್ರಿಯೆ ಪೂರ್ಣ ಗೊಳಿಸಲು ಆರು ತಿಂಗಳ ಕಾಲಾವಕಾಶ ನೀಡಬೇಕು ಎಂದು ಕೋರಿತು.

ಈ ಪ್ರಕ್ರಿಯೆಗಳನ್ನು 24 ಗಂಟೆಗಳ ಒಳಗೆ ಮಾಡಬಹುದು ಎಂಬುದನ್ನು ಗಮನಿಸಿದ ನ್ಯಾಯಪೀಠ, ನ್ಯಾಯಮಂಡಳಿ ಸ್ಥಾಪನೆಯ ಪ್ರಕ್ರಿಯೆ ಪೂರ್ಣಗೊಳಿಸಲು ಮೂರು ತಿಂಗಳ ಕಾಲಾವಕಾಶ ನೀಡುವುದಾಗಿ ತಿಳಿಸಿತು. ಬಳಿಕ ವಿಚಾರಣೆಯನ್ನು 2023ರ ಮಾರ್ಚ್ 14ಕ್ಕೆ ಮುಂದೂಡಿತು. ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಶ್ಯಾಮ್ ದಿವಾನ್ ಹಾಗೂ ಮೋಹನ್ ವಿ.ಕಾತರಕಿ, ನ್ಯಾಯಮಂಡಳಿ ರಚನೆಯ ಪ್ರಸ್ತಾವವನ್ನು ವಿರೋಧಿಸಿದರು.

ಯಕ್ಷಗಾನ ಭಾಗವತ ತಿಮ್ಮಪ್ಪ ಬಾಳೆಹದ್ದ ಸಾವು

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ಯಕ್ಷಗಾನ ಭಾಗವತಿಕೆ ಹಾಗೂ ಸಂಗೀತದಲ್ಲಿ ಅಪಾರ ಜ್ಞಾನ ಹೊಂದಿದ್ದ ತಾಲ್ಲೂಕಿನ ತಿಮ್ಮಪ್ಪ ಭಾಗವತ ಬಾಳೆಹದ್ದ (59) ಹಿತ್ಲಳ್ಳಿ ಬಳಿಯ ರಾಜ್ಯ ಹೆದ್ದಾರಿ ತಿರುವಿನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ತಿಮ್ಮಪ್ಪ ಭಾಗವತ

ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಶಿರಸಿಯ ಖಾಸಗಿ ಆಸ್ಪತ್ರೆಗೆ ಕರೆತರಲಾಗಿತ್ತು.

ಚಿಕಿತ್ಸೆಗೆ ಸ್ಪಂದಿಸದೆ ಅವರು ಸಾವಿಗೀಡಾದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಬುಧವಾರ ಸಾಯಂಕಾಲ ನಡೆಯಿತು.

ಪ್ರಸಿದ್ಧ ಯಕ್ಷಗಾನ ಭಾಗವತರಾಗಿದ್ದ ತಂದೆ ಕೃಷ್ಣ ಭಾಗವತ ಅವರ ಬಳಿ ಭಾಗವತಿಕೆಯನ್ನು ಕಲಿತ ಇವರು, ಹಿಂದೂಸ್ತಾನಿ ಗಾಯಕ ಶ್ರೀಪಾದ ಹೆಗಡೆ ಕಂಪ್ಲಿ ಅವರ ಬಳಿ ಸಂಗೀತ ಜ್ಞಾನ ಪಡೆದಿದ್ದರು.

ಹೊಸ್ತೋಟ ಮಂಜುನಾಥ ಭಾಗವತರ ಶಿಷ್ಯರಾಗಿದ್ದ ಇವರು ಸೋಂದಾದ ‘ಯಕ್ಷ ಶಾಲ್ಮಲಾ’ ಯಕ್ಷಗಾನ ಬಳಗದಲ್ಲಿ ಗುರುತಿಸಿಕೊಂಡಿದ್ದರು.

ರಂಗಭೂಮಿಗೆ ಸಂಗೀತ ನೀಡುತ್ತಿದ್ದ ಇವರು ರಂಗಾಯಣದ ಮೂಲಕ ಕೈದಿಗಳಿಗೆ ನಾಟಕ ಕಲಿಸುವ ತಂಡದಲ್ಲಿ ಸಕ್ರಿಯರಾಗಿದ್ದರು.

ಬೊಮ್ಮಾಯಿ ವಿರುದ್ಧ ಶಿಂದೆ ದೂರು

ನವದೆಹಲಿ: ಗಡಿ ವಿವಾದವು ಭುಗಿಲೇಳಲು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಡಿದ ಪ್ರಚೋದನಕಾರಿ ಟ್ವೀಟ್‌ಗಳೇ ಕಾರಣ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬುಧವಾರ ದೂರಿದ್ದಾರೆ.

ಶಾ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಶಿಂದೆ ಅವರು ಬೊಮ್ಮಾಯಿ ವಿರುದ್ಧ ದೂರಿದರು ಎಂದು ಮೂಲಗಳು ಹೇಳಿವೆ. ಈ ಸಂಬಂಧ ಸುಪ್ರೀಂಕೋರ್ಟ್ ತೀರ್ಪು ನೀಡುವವರೆಗೆ ಯಾರೂ ಆರೋಪ–ಪ್ರತ್ಯಾರೋಪಗಳನ್ನು ಮಾಡಬಾರದೆಂದು ಶಾ ಇಬ್ಬರಿಗೂ ತಾಕೀತು ಮಾಡಿದ್ದಾಗಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೆರೆಗೆ ಹಾರಿ ಖಾಸಗಿ ಕಂಪನಿ ಉದ್ಯೋಗಿ ಆತ್ಮಹತ್ಯೆ

ಬಿಡದಿ: ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿಯೊಬ್ಬರು ಮಂಗಳವಾರ ಬಿಡದಿಯ ನೆಲ್ಲಿಗುಡ್ಡೆ ಕೆರೆಗೆ ಕಾಲಿಗೆ ಹಗ್ಗ ಕಟ್ಟಿಕೊಂಡು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರಿನ ಕಾಡುಬಿಸನಹಳ್ಳಿ ನಿವಾಸಿ ರಾಜು (48 ವರ್ಷ) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಇವರು ಮಾನವ ಹಕ್ಕು ಮತ್ತು ಭ್ರಷ್ಟಾಚಾರ ವಿರೋಧಿ ವೇದಿಕೆಯಲ್ಲಿ ಸಕ್ರಿಯರಾಗಿದ್ದರು ಎಂದು ತಿಳಿದು ಬಂದಿದೆ.

ಮಂಗಳವಾರ ಮಧ್ಯಾಹ್ನ ಬಿಡದಿಗೆ ಬಂದು ಅಲ್ಲಿಂದ ನೆಲ್ಲಿಗುಡ್ಡೆ ಕೆರೆಗೆ ತಮ್ಮ ಕಾರಿನಲ್ಲಿ ಬಂದಿದ್ದಾರೆ. ಸಂಜೆ ಕೆರೆಯ ಬಳಿ ಕಾರು ಪಾರ್ಕ್ ಮಾಡಿ ಕೆರೆಗೆ ಜಿಗಿದ್ದಿದ್ದಾರೆ. ಬೆಳಗ್ಗೆ ಕೆರೆಯ ಬಳಿ ವಾಯು ವಿಹಾರಕ್ಕೆ ಬಂದ ಸಾರ್ವಜನಿಕರಿಗೆ ಕೆರೆಯಲ್ಲಿ ತೇಲುತ್ತಿದ್ದ ಶವ ಕಂಡಿದೆ. ಜನರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಬಿಡದಿ ಪೊಲೀಸರು ಶವವನ್ನು ಮರಣೋತ್ತರ ಪರೀಕ್ಷೆಗಾಗಿ ರಾಜರಾಜೇಶ್ವರಿ ಆಸ್ಪತ್ರೆಗೆ ರವಾನಿಸಿದ್ದಾರೆ.

ಸಾಲಭಾದೆಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್‌ನತ್ತ ಪುಟ್ಟಣ್ಣ, ವೈ.ಎಸ್.ವಿ. ದತ್ತ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು / ಚಿಕ್ಕಮಗಳೂರು: ಜೆಡಿಎಸ್ ಮುಖಂಡ, ಮಾಜಿ ಶಾಸಕ ವೈ.ಎಸ್.ವಿ.ದತ್ತ ಮತ್ತು ವಿಧಾನಪರಿಷತ್ ಸದಸ್ಯ ಬಿಜೆಪಿಯ ಪುಟ್ಟಣ್ಣ ಅವರು ಕಾಂಗ್ರೆಸ್ ಪಕ್ಷದತ್ತ ಮುಖ ಮಾಡಿದ್ದಾರೆ.

‘ಕಾಂಗ್ರೆಸ್ ಸೇರುವುದು ಖಚಿತ’ ಎಂದು ದತ್ತ ಅವರೇ ಸ್ವತಃ ದೃಢಪಡಿಸಿದ್ದರೆ, ‘ಪುಟ್ಟಣ್ಣ ಅವರಿಗೆ ಪಕ್ಷವನ್ನು ಸೇರುವಂತೆ ಕಾಂಗ್ರೆಸ್ ಪಕ್ಷದಿಂದ ಆಹ್ವಾನ ಬಂದಿದೆ’ ಎಂದು ಅವರ ಆಪ್ತ ವಲಯವು ತಿಳಿಸಿದೆ. ‘ಪಕ್ಷವನ್ನು ಅಧಿಕಾರಕ್ಕೆ ತರಲು ತಮ್ಮನ್ನು, ಸಿ.ಪಿ.ಯೋಗೇಶ್ವರ ಅವರನ್ನು ಚೆನ್ನಾಗಿ ಬಳಸಿಕೊಂಡರು. ಬಳಿಕ ತಮ್ಮನ್ನು ಮರೆತದ್ದೂ ಅಲ್ಲದೇ ನಿರ್ಲಕ್ಷಿಸುತ್ತಿದ್ದಾರೆ’ ಎಂದು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಪುಟ್ಟಣ್ಣ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

‘ಇದೇ ಕಾರಣದಿಂದ ಪುಟ್ಟಣ್ಣ ಅವರು ಸದ್ಯಕ್ಕೆ ತಟಸ್ಥರಾಗಿ ಉಳಿದಿದ್ದಾರೆ. ಕಾಂಗ್ರೆಸ್‌ನಿಂದ ಆಹ್ವಾನ ಬಂದಿರುವುದರಿಂದ, ಮುಂದಿನ ದಿನ ಗಳಲ್ಲಿ ಆ ಪಕ್ಷ ಸೇರುವ ಬಗ್ಗೆ ಒಲವು ಹೊಂದಿದ್ದಾರೆ’ ಎಂದು ಅವರ ಆಪ್ತವಲಯ ತಿಳಿಸಿದೆ. ಪುಟ್ಟಣ್ಣ ಅವರು 2019ರಲ್ಲಿ ಜೆಡಿಎಸ್ ಬಿಟ್ಟು ಬಿಜೆಪಿ ಸೇರಿದ್ದು, ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಕಾಂಗ್ರೆಸ್ ಸೇರಲು ತೀರ್ಮಾನಿಸಿದ ಬೆನ್ನಲ್ಲೇ ಪುಟ್ಟಣ ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.



ಪುಟ್ಟಣ್ಣ

ವೈ.ಎಸ್.ವಿ. ದತ್ತ

‘ಕಾಂಗ್ರೆಸ್ ಸೇರ್ಪಡೆ ಖಚಿತ’ (ಚಿಕ್ಕಮಗಳೂರು ವರದಿ): ‘ಕಾಂಗ್ರೆಸ್ ಸೇರುವುದು ಖಚಿತ. ಆದರೆ ಯಾವತ್ತು ಎಂಬುದು ಇನ್ನೂ ನಿಗದಿಯಾಗಿಲ್ಲ’ ಎಂದು ಜೆಡಿಎಸ್ ಮುಖಂಡ ವೈ.ಎಸ್.ವಿ. ದತ್ತ ಅವರು ಹೇಳಿದರು.

‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ನನಗೆ 70 ವರ್ಷ. ಬಹುಶಃ ಇದು ಕೊನೆಯ ಪರೀಕ್ಷೆ. ಟಿಕೆಟ್ ಆಕಾಂಕ್ಷಿಯಾಗಿ ಕಾಂಗ್ರೆಸ್ ಸೇರುತ್ತಿಲ್ಲ. ಟಿಕೆಟ್ ನೀಡಬೇಕು ಎಂದು ಷರತ್ತು ವಿಧಿಸಿಲ್ಲ. ಜೆಡಿಎಸ್‌ನ ಬಹುತೇಕ ಕಾರ್ಯ ಕರ್ತರು, ಪಕ್ಷಾತೀತವಾಗಿರುವ ಅಭಿಮಾನಿಗಳು, ಕ್ಷೇತ್ರದ ಜನರ ಅಭಿಪ್ರಾಯದಂತೆ ತೀರ್ಮಾನ ಕೈಗೊಂಡಿದ್ದೇನೆ’ ಎಂದರು.

ಕಾಂಗ್ರೆಸ್ ಚುನಾವಣಾ ಸಮಿತಿ ರಚನೆ

ನವದೆಹಲಿ: ಮುಂದಿನ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಜ್ಜಾಗಲು ಕೆಪಿಸಿಸಿ ಚುನಾವಣಾ ಸಮಿತಿ ರಚಿಸಿ ಎಐಸಿಸಿ ಬುಧವಾರ ರಾತ್ರಿ ಆದೇಶ ಹೊರಡಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ಕಾಂಗ್ರೆಸ್‌ನ ಹಿರಿಯ ನಾಯಕರ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆದಿತ್ತು. ಒಂದೆರಡು ದಿನಗಳಲ್ಲಿ ಸಮಿತಿ ರಚಿಸಲಾಗುತ್ತದೆ ಎಂದು ಖರ್ಗೆ ತಿಳಿಸಿದ್ದರು.

ಈ ಸಮಿತಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರು, ಹಿರಿಯ ನಾಯಕರು ಸೇರಿ 36 ಮಂದಿ ಇದ್ದಾರೆ. ಯುವ ಕಾಂಗ್ರೆಸ್, ಎನ್‌ಎಸ್‌ಯುಐ, ಮಹಿಳಾ ಕಾಂಗ್ರೆಸ್, ಸೇವಾದಳ ಹಾಗೂ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಸಮಿತಿಯಲ್ಲಿ ಇದ್ದಾರೆ. ಕಾಂಗ್ರೆಸ್ ಟಿಕೆಟ್ ಕೋರಿ ಸಲ್ಲಿಕೆಯಾದ ಅರ್ಜಿಗಳನ್ನು ಈ ಸಮಿತಿ ಪರಿಶೀಲನೆ ಮಾಡಿ ಹೈಕಮಾಂಡ್‌ಗೆ ಕಳುಹಿಸಲಿದೆ.

ಸಂಪುಟ ವಿಸ್ತರಣೆ: ಮತ್ತೊಮ್ಮೆ ಭೇಟಿ

ನವದೆಹಲಿ: ‘ಕರ್ನಾಟಕ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಲ್ಲಿ ಪ್ರಸ್ತಾಪ ಮಾಡಿದೆ. ಈ ವಿಷಯದ ಬಗ್ಗೆ ಚರ್ಚಿಸಲು ಸಮಯ ನೀಡುವುದಾಗಿ ಭರವಸೆ ನೀಡಿದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗಡಿ ವಿವಾದದ ಕುರಿತ ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಗಡಿ ವಿಚಾರ ಮುಗಿದ ಬಳಿಕ ಇನ್ನೊಂದು ಸಭೆಯನ್ನು ನಾವು ಮಾಡಿದೆವು. ರಾಜ್ಯದ ಸ್ಥಿತಿಗತಿ ಬಗ್ಗೆ ಅಮಿತ್ ಶಾ ಜತೆಗೆ ಚರ್ಚೆ ಮಾಡಿದ್ದೇವೆ. ಪಕ್ಷ ಸಂಘಟನೆ ಹಾಗೂ ಪ್ರಧಾನಿ ನರೇಂದ್ರ ಮೋದಿ ರಾಜ್ಯಕ್ಕೆ ಬರುವ ವಿಷಯದ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ. ಇನ್ನು ಮುಂದೆ ರಾಜ್ಯಕ್ಕೆ ಹೆಚ್ಚಿನ ಸಮಯ ಕೊಡುವಂತೆ ಮನವಿ ಮಾಡಿದ್ದೇವೆ. ಜನವರಿ 12ಕ್ಕೆ ನಡೆಯುವ ಯುವಶಕ್ತಿ ಕಾರ್ಯಕ್ರಮಕ್ಕೆ ಆಹ್ವಾನ ನೀಡುವ ಬಗ್ಗೆ ಚರ್ಚೆ ಆಗಿದೆ. ರಾಜ್ಯದ ರ‍್ಯಾಲಿಗಳ ಬಗ್ಗೆಯೂ ವಿಸ್ತೃತ ಚರ್ಚೆ ಆಗಿದೆ’ ಎಂದರು.

‘ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ನನ್ನ ಜತೆಗೆ ಖಂಡಿತವಾಗಿಯೂ ಮುನಿಸಿಕೊಂಡಿಲ್ಲ. ಏನೋ ಹೇಳಬೇಕು ಎಂಬ ಕಾರಣಕ್ಕೆ ಕಾಂಗ್ರೆಸ್‌ನವರು ಇಂತಹ ಸುದ್ದಿಗಳನ್ನು ಹರಡುತ್ತಾರೆ. ಅವರ ತಟ್ಟೆಯಲ್ಲಿ ಕತ್ತೆ ಬಿದ್ದಿದೆ. ಕತ್ತಲಲ್ಲಿ ಕರಿ ಬೆಕ್ಕು ಹುಡುಕುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ’ ಎಂದರು.

ನರಿ ದಾಳಿ: ಅಟ್ಟಾಡಿಸಿ ಕೊಂದ ಸ್ಥಳೀಯರು

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ (ಗದಗ ಜಿಲ್ಲೆ): ಪಟ್ಟಣದಲ್ಲಿ ಬುಧವಾರ ಬೆಳಗಿನ ಜಾವ ಹಲವರ ಮೇಲೆ ನರಿಯೊಂದು ದಾಳಿ ನಡೆಸಿದ್ದು, ಸಿಟ್ಟಿಗೆದ್ದ ಸ್ಥಳೀಯರು ಅದನ್ನು ಅಟ್ಟಾಡಿಸಿ ಕೊಂದಿದ್ದಾರೆ.

ಪಟ್ಟಣಕ್ಕೆ ಹೊಂದಿಕೊಂಡಿರುವ ಗುಡ್ಡದ ಕಡೆಯಿಂದ ಲಂಬಾಣಿ ತಾಂಡಾ, ಅಂಬೇಡ್ಕರ್ ವೃತ್ತದ ಮೂಲಕ ಚೌಕಿ ಮಠದ ಬಳಿಗೆ ಬಂದ ನರಿಯು ಮೂವರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. ಇದರಿಂದ ಆಕ್ರೋಶಗೊಂಡ ಸಾರ್ವಜನಿಕರು ನರಿಯನ್ನು ಕೊಂದು ಹಾಕಿದ್ದಾರೆ.

ಸ್ಥಳಕ್ಕೆ ಅರಣ್ಯಾಧಿಕಾರಿ ಪ್ರವೀಣ ಕುಮಾರ ಸಾಸ್ವಿಹಳ್ಳಿ ಭೇಟಿ ನೀಡಿ ಪರಿಶೀಲಿಸಿದರು.

ನಟ ಶಿವರಾಜ್‌ಕುಮಾರ್ ಅಭಿಪ್ರಾಯ

‘ಒಟಿಟಿ ಅನಿವಾರ್ಯ, ತಡೆಯಲು ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಾವು ಆಧುನಿಕ ಜಗತ್ತಿನಲ್ಲಿದ್ದು, ಬದಲಾವಣೆಯತ್ತ ದಾಪುಗಾಲಿಡುತ್ತಿದ್ದೇವೆ. ಚಿತ್ರ ಬಿಡುಗಡೆಗೆ ಒಟಿಟಿಯೂ ಒಂದು ವೇದಿಕೆಯಾಗಿದ್ದು ಅದನ್ನು ತಡೆಯಲು ಸಾಧ್ಯವಿಲ್ಲ’ ಎಂದು ನಟ ಶಿವರಾಜ್‌ಕುಮಾರ್ ಅಭಿಪ್ರಾಯಪಟ್ಟರು.

ಅವರ ಹೊಸಚಿತ್ರ ‘ವೇದ’ ಬಿಡುಗಡೆ ಪೂರ್ವ ಸಮಾರಂಭದ ಹಿನ್ನೆಲೆಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚಿತ್ರರಂಗದಲ್ಲೂ ಬದಲಾವಣೆಯಾಗುತ್ತಿದ್ದು, ಒಟಿಟಿಗೆ ನಾವು ಅನಿವಾರ್ಯವಾಗಿ ಹೊಂದಿಕೊಳ್ಳಲೇಬೇಕು’ ಎಂದರು.

‘ಇತ್ತೀಚೆಗೆ ಸಿನಿಮಾಗಳ ಪೈರಸಿ ಹೆಚ್ಚುತ್ತಿದ್ದು, ಅದನ್ನು ತಡೆಯಲು ಚಿತ್ರರಂಗ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದರ ಸಂಪೂರ್ಣ ತಡೆಗೆ ಸರ್ಕಾರವೂ ಅಗತ್ಯ ಕ್ರಮಕ್ಕೈಗೊಳ್ಳಬೇಕು. ಹಾಗಾದಾಗ ಮಾತ್ರ ಕಲಾವಿದರು, ನಿರ್ಮಾಪಕರು ಹಾಗೂ ಚಿತ್ರದ ತಾಂತ್ರಿಕ ತಂಡ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯ. ಯಾವುದೇ ಚಿತ್ರವನ್ನು ಯೋಜನಾಬದ್ಧವಾಗಿ ನಿರ್ಮಿಸಿದರೆ ಯಶಸ್ಸು ಪಡೆಯಬಹುದು. ಕೆಲವೊಮ್ಮೆ ಚಿತ್ರ ನಿರೀಕ್ಷೆ ಮೀರಿ ಯಶಸ್ಸು ಪಡೆಯುತ್ತದೆ. ಅದಕ್ಕೆ ‘ಕಾಂತಾರ’ ಜ್ವಲಂತ ನಿದರ್ಶನವಾಗಿದ್ದು, ನಾನಾ ಭಾಷೆಗಳಲ್ಲಿ ಡಬ್ಬಿಂಗ್ ಆಗಿ ಜನಮನ್ನಣೆ ಗಳಿಸಿದೆ’ ಎಂದು ಹೇಳಿದರು.

> **ಮಹದಾಯಿ ಯೋಜನೆ ಅನುಷ್ಠಾನದ ಪರವಾಗಿ ಕನ್ನಡ ಚಿತ್ರರಂಗ ಸದಾ ಇದೆ. ಆದರೆ, ಆಳುವ ವರ್ಗ ಆ ಕುರಿತು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು**
> **ಶಿವರಾಜ್‌ಕುಮಾರ್,** ನಟ

‘ಕನ್ನಡ ಚಿತ್ರಗಳಿಗೆ ಡಬ್ಬಿಂಗ್ ಪೂರಕವಾಗಿದೆ. ಬೇರೆ ಭಾಷೆಗಳಲ್ಲಿ ಚಿತ್ರ ಡಬ್ಬಿಂಗ್ ಮಾಡುವುದರಿಂದ ದೇಶ–ವಿದೇಶಗಳಲ್ಲಿ ಸಿನಿಮಾಪ್ರಿಯರು ಅದನ್ನು ವೀಕ್ಷಿಸುತ್ತಾರೆ. ನಮ್ಮ ಚಿತ್ರ ಜಗತ್ತೇ ನೋಡುತ್ತದೆ ಎಂದರೆ ಕಲಾವಿದರಿಗೆ ಅದು ಹೆಮ್ಮೆಯ ಸಂಗತಿ. ನಾನು ಅಭಿನಯಿಸಿದ ‘ಭಜರಂಗಿ’ ಚಿತ್ರ ಸಹ ಬೇರೆ ಭಾಷೆಗಳಲ್ಲಿ ಡಬ್ಬಿಂಗ್ ಆಗಿದ್ದು, ಈಗಲೂ ವೀಕ್ಷಿಸುತ್ತಿದ್ದಾರೆ’ ಎಂದರು.

‘ಪತ್ನಿ ಗೀತಾ ಅವರ ಹೆಸರಿನ ಬ್ಯಾನರ್ ಅಡಿ ಮೊದಲ ಹಾಗೂ ನನ್ನ ನಟನೆಯ 125 ನೇ ಚಿತ್ರ ‘ವೇದ’ ನಿರ್ಮಾಣವಾಗಿದ್ದು, ಡಿ.23ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ. ಪ್ರೀತಿ, ಸಂತೋಷ, ಬದುಕು ಮತ್ತು ನಂಬಿಕೆಯ ಮೌಲ್ಯಗಳನ್ನು ಸಾರುತ್ತ, ಚಿತ್ರ ಮೌನವಾಗಿ ಸಾಗುತ್ತದೆ. ಬೆಂಗಳೂರು, ಮೈಸೂರು ಮತ್ತು ಕೇರಳದಲ್ಲಿ ಚಿತ್ರೀಕರಣವಾಗಿದ್ದು, ಮೂರು ಹಾಡುಗಳಿವೆ’ ಎಂದ ನಟ ಶಿವರಾಜ್‌ಕುಮಾರ್, ಮುಂದಿನ ಚಿತ್ರ ಕೆಡಿ(ಕರಟಕ-ದಮನಕ)ಯಲ್ಲಿ ನಟಿಸುತ್ತಿರುವುದಾಗಿ ತಿಳಿಸಿದರು.

ನಗರದಲ್ಲಿ ಇಂದು

ರಾಜ್ಯ ಸರ್ಕಾರಿ ನೌಕರರ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಸಿ.ಎಸ್. ಷಡಾಕ್ಷರಿ, ಆರ್. ಅಶೋಕ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಟಿ. ಸೋಮಶೇಖರ್, ಆಯೋಜನೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 10

57ನೇ ಅಂತರ ಕಾಲೇಜು ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್: ಉದ್ಘಾಟನೆ: ರಿತು.ಎ. ಪಾಟಿಕ್, ಅಧ್ಯಕ್ಷತೆ: ಜಯಕರ್ ಎಸ್.ಎಂ., ಗಿರೀಶ್ ಎಚ್.ಎಂ., ಮಹೇಶ್ ಬಾಬು, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಭಾರತೀಯ ಕ್ರೀಡಾ ಪ್ರಾಧಿಕಾರ, ಜ್ಞಾನಭಾರತಿ, ಬೆಳಿಗ್ಗೆ 10.30

ಹೇಮಂತ್ ವಾಮನಶಂಕರ್ ಮತ್ತು ರಾಧಾ ಎಸ್.ಜಿ. ಅವರ ಕಲಾ ಪ್ರದರ್ಶನ: ಉದ್ಘಾಟನೆ: ಗುರುದಾಸ್ ಶೆಣೈ, ಗಣಪತಿ ಎಸ್ ಹೆಗ್ಡೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10:30

ಕನ್ನಡ ಹಬ್ಬ ಮತ್ತು ಪಂಚರತ್ನಗಳ ಪುತ್ಥಳಿ ಅನಾವರಣ: ಅತಿಥಿಗಳು: ರಾಮಲಿಂಗಾ ರೆಡ್ಡಿ, ಸೌಮ್ಯ ರೆಡ್ಡಿ, ಮಂಜುನಾಥ ರೆಡ್ಡಿ, ಜಿ. ಮಂಜುನಾಥ್, ರಾಜಪ್ಪ ರೆಡ್ಡಿ, ಟಿ.ಎ. ನಾರಾಯಣಗೌಡ, ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ದರ್ಶನ, ಸುಮಲತಾ ಅಂಬರೀಶ್, ಆಯೋಜನೆ: ಕರುನಾಡು ಪಂಚಮೂರ್ತಿ ಅಭಿಮಾನಿಗಳ ಸಂಘ, ಸ್ಥಳ: ಮಡಿವಾಳ ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿ, ಹೊಸೂರು ಮುಖ್ಯರಸ್ತೆ, ಬೆಳಿಗ್ಗೆ 10.30

ಸಂವಾದ ಸಭೆ: ಅತಿಥಿಗಳು: ಪಂಕಜ್ ಕುಮಾರ್ ಪಾಂಡೆ, ಆರ್. ಗಿರೀಶ್, ಸತ್ಯಭಾಮ ಸಿ., ಎಸ್.ಜೆ. ಸೋಮಶೇಖರ್, ಅಧ್ಯಕ್ಷತೆ: ಕೆ.ಎನ್. ನರಸಿಂಹಮೂರ್ತಿ, ಆಯೋಜನೆ: ಕಾಸಿಯಾ, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಮಧ್ಯಾಹ್ನ 3

ಶಕ್ತಿ ಪೀಠ ಸಮಾಗಮ ಮತ್ತು ಮಕ್ಕಳ ಹಬ್ಬ: ಅತಿಥಿಗಳು: ಡಾ. ಕೆ. ಸುಧಾಕರ್, ವಿ. ಸುನಿಲ್ ಕುಮಾರ್, ಪಿ. ಜಿ. ಆರ್. ಸಿಂಧ್ಯಾ, ಎನ್. ತಿಪ್ಪೇಸ್ವಾಮಿ, ಅಧ್ಯಕ್ಷತೆ: ಗಣೇಶ್ ಭಟ್, ಆಯೋಜನೆ: ಹಿಂದುಸ್ತಾನ್ ಗಗನ್ ಗೌರವ್ ಜ್ಯೋತಿರ್ಲಿಂಗ ಫೌಂಡೇಶನ್ ಹಾಗೂ ವರ್ಲ್ಡ್ ಹೆಲ್ತ್ ಹಾರ್ಟ್ ಡಯಾಬಿಟಿಕ್ ಕ್ಯಾನ್ಸರ್ ಮತ್ತು ಏಡ್ಸ್ ಫೌಂಡೇಶನ್, ಸ್ಥಳ: ಗಾಂಧಿ ಭವನ, ಮಧ್ಯಾಹ್ನ 3:30

ಸೇಠ್ ವಾಲ್‌ಚಂದ್ ಹೀರಾಚಂದ್ ಜನ್ಮ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮಿಹಿರ್ ಕಾಂತಿ ಮಿಶ್ರ, ಅತಿಥಿಗಳು: ಕೆ. ಮುರಳೀಧರ್, ಸುದರ್ಶನ ಚೆನ್ನಿಂಗಿಹಳ್ಳಿ, ಮಹೇಶ ಅಂಗಡಿ, ಕುಸುಮ ರಾಜಶೇಖರ್, ಎಚ್. ಲಿಂಗರಾಜು, ಬಿ. ಎನ್. ಶಿವಲಿಂಗ, ಅಧ್ಯಕ್ಷತೆ: ಎಂ. ಜಿ. ಬಾಲಸುಬ್ರಮಣ್ಯ, ಆಯೋಜನೆ: ಶ್ರೀ ಸೇವಾಹೀ ಪ್ರತಿಷ್ಠಾನ, ಸ್ಥಳ: ಹಳೇ ಎಚ್. ಎಂ. ಎ., ಸಭಾಂಗಣ, ಎಚ್‌ಎಎಲ್ ಆಸ್ಪತ್ರೆ ಹತ್ತಿರ, ಸಂಜೆ 4

ಮಾರ್ಗಶೀರ್ಷೋತ್ಸವ: ಅತಿಥಿಗಳು: ಎಂ. ಎನ್. ವೆಂಕಟಾಚಲಯ್ಯ, ವಿ. ಆರ್. ಗೌರೀಶಂಕರ್, ಆಯೋಜನೆ: ಶ್ರೀ ಸುರಭಾರತಿ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನ, ಸ್ಥಳ:ಎಚ್‌ಆರ್‌ಬಿಆರ್ ಲೇಔಟ್, ಸಂಜೆ 5

‘ಮೊದಲು ಮಾನವನಾಗು’ ಉದ್ಘಾಟನಾ ಸಮಾರಂಭ, ನುಡಿನಮನ, ಗೀತನಮನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಅತಿಥಿಗಳು: ಆರ್. ಅಶೋಕ್, ಎಚ್. ಎಸ್. ವೆಂಕಟೇಶಮೂರ್ತಿ, ತುಳಸಿರಾಮ ನಾಯ್ಡು, ಆಯೋಜನೆ: ಡಾ. ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ, ಸ್ಥಳ: ಸರ್. ಪುಟ್ಟಣ್ಣಚೆಟ್ಟಿ ಪುರಭವನ, ಸಂಜೆ 5

ಶಿಶಿರ ರಂಗೋತ್ಸವ: ಉದ್ಘಾಟನೆ: ರವೀಂದ್ರ ಭಟ್ಟ, ಅತಿಥಿಗಳು: ಸಂಗಮೇಶ್ ಉಪಾಸೆ, ಚಂದ್ರಶೇಖರ್ ಆರ್., ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, 'ನೆಮ್ಮದಿ ಅಪಾರ್ಟ್‌ಮೆಂಟ್’ ನಾಟಕ ಪ್ರದರ್ಶನ: ನಿರ್ದೇಶನ: ಭೀಮೇಶ್ ಎಚ್. ಎಸ್, ಆಯೋಜನೆ: ಪದ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6:30

'ಬುದ್ಧಿ ಭ್ರಾಂತಿಯೊಳಗಿನ ತಲ್ಲಣಗಳು’ ಉಪನ್ಯಾಸ ಕಾರ್ಯಕ್ರಮ: ಉಪನ್ಯಾಸಕರು: ಬಸವರಾಜ ಎಸ್. ಹಿರೇಮಣಿ, ಅತಿಥಿ: ಎಂ. ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6:30

ಶಾರದಾದೇವಿಯವರ ಜೀವನ–ಆದರ್ಶ ಪ್ರವಚನ: ಉಪಸ್ಯಾಸಕರು: ಮಾತಾಜಿ ಬ್ರಹ್ಮಮಯಿ, ಮಾತಾ ಶಾರದಾಶ್ರಯ, ಆಯೋಜನೆ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ, ಸಂಜೆ 6:30

ಹರಿನಾಮ ಸಂಕೀರ್ತನೆ: ಗಾಯನ: ಚಾಂದಿನಿ ಗರ್ತಿಕೆರೆ, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮೀಜಿಗಳ ಮಠ, ಪ್ರಕಾಶನಗರ, ಸಂಜೆ 7

ಚಾಂದಿನಿ ಗರ್ತಿಕೆರೆ

114 'ನಮ್ಮ ಕ್ಲಿನಿಕ್'ಗಳಿಗೆ ವರ್ಚುವಲ್ ಚಾಲನೆ ನೀಡಿದ ಸಿ.ಎಂ ಬಸವರಾಜ ಬೊಮ್ಮಾಯಿ

60 ವರ್ಷ ಮೀರಿದವರಿಗೆ ಉಚಿತ ತಪಾಸಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: '60 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರ ಆರೋಗ್ಯವನ್ನು ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಜನವರಿಯಿಂದ ಉಚಿತವಾಗಿ ತಪಾಸಣೆ ನಡೆಸಲಾಗುವುದು. ನೇತ್ರ ಚಿಕಿತ್ಸೆ, ಕನ್ನಡಕ, ಶ್ರವಣದೋಷವುಳ್ಳವರಿಗೆ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗಿರುವ 114 'ನಮ್ಮ ಕ್ಲಿನಿಕ್' ಗಳಿಗೆ ಇಲ್ಲಿನ ಬೈರಿದೇವರಕೊಪ್ಪದಲ್ಲಿ ಬುಧವಾರ ವರ್ಚುವಲ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲರಿಗೂ ಉತ್ತಮ ಆರೋಗ್ಯ ಸೇವೆ ನೀಡಲು ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಗರ ಪ್ರದೇಶ ಗಳ ಬಡ, ದುರ್ಬಲ ವರ್ಗದ ಜನರಿಗೆ ಉಚಿತ ಆರೋಗ್ಯ ಸೇವೆ ನೀಡಲು ರಾಜ್ಯದಾದ್ಯಂತ 'ನಮ್ಮ ಕ್ಲಿನಿಕ್' ಗಳನ್ನು ತೆರೆಯಲಾಗುತ್ತಿದ್ದು, ಜನವರಿ ಅಂತ್ಯದ ವೇಳೆಗೆ 438 ಕ್ಲಿನಿಕ್‌ಗಳು ಸ್ಥಾಪನೆಯಾಗಲಿವೆ. ಇವುಗಳನ್ನು ಮೇಲ್ದರ್ಜೆಗೇರಿಸಲು ಮುಂದಿನ ಬಜೆಟ್‌ನಲ್ಲಿ ಅನುದಾನ ನೀಡಲಾಗುವುದು' ಎಂದು ಹೇಳಿದರು.



ಹುಬ್ಬಳ್ಳಿಯ ಬೈರಿದೇವರಕೊಪ್ಪದಲ್ಲಿ ಬುಧವಾರ ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗಿರುವ 114 'ನಮ್ಮ ಕ್ಲಿನಿಕ್' ಗಳಿಗೆ ವರ್ಚುವಲ್ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. (ಎಡದಿಂದ) ಶಾಸಕ ಅರವಿಂದ ಬೆಲ್ಲದ, ಸಚಿವ ಕೆ.ಸುಧಾಕರ್, ಶಾಸಕ ಜಗದೀಶ ಶೆಟ್ಟರ್, ಸಚಿವರಾದ ಸಿ.ಸಿ. ಪಾಟೀಲ, ಹಾಲಪ್ಪ ಆಚಾರ್, ಮೇಯರ್ ಈರೇಶ ಅಂಚಟಗೇರಿ ಇದ್ದಾರೆ

'ಈ ಕೇಂದ್ರಗಳಲ್ಲಿ ಒಬ್ಬ ವೈದ್ಯಾಧಿಕಾರಿ, ಒಬ್ಬ ಶುಶ್ರೂಷಕ, ಒಬ್ಬ ಪ್ರಯೋಗ ಶಾಲಾ ತಂತ್ರಜ್ಞ/ ಕಿರಿಯ ದರ್ಜೆ ಸಹಾಯಕ ಹಾಗೂ ಒಬ್ಬ ಡಿ–ದರ್ಜೆ ನೌಕರ ಇರುತ್ತಾರೆ. ಇಲ್ಲಿ ಪ್ರಾಥ ಮಿಕ ಹಂತದ ಎಲ್ಲ ಆರೋಗ್ಯ ಸೇವೆಗಳು ಹಾಗೂ ಔಷಧಿಗಳು ಉಚಿತವಾಗಿ ದೊರೆಯುತ್ತವೆ. ಯೋಗ ಕಲಿಕೆಗೂ ಅವಕಾಶ ಇದೆ' ಎಂದು ತಿಳಿಸಿದರು.

'ರಾಜ್ಯದ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಸಮುದಾಯ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗುವುದು. ಕಲ್ಯಾಣ ಕರ್ನಾಟಕ ಭಾಗದಲ್ಲಿ 42 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗುವುದು. ರೈತರಿಗೆ 'ಯಶಸ್ವಿನಿ ಆರೋಗ್ಯ ವಿಮಾ ಯೋಜನೆ' ಪುನರಾರಂಭಿಸಿದ್ದೇವೆ' ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, ಮಹಿಳೆಯರಿಗಾಗಿ 'ಆಯುಷ್ಮತಿ ಕ್ಲಿನಿಕ್'ಗಳನ್ನು ಮುಂದಿನ ವರ್ಷ ಆರಂಭಿಸಲಾಗುವುದು' ಎಂದು ತಿಳಿಸಿದರು.

'ಜನವರಿಯಿಂದ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಕ್ಷಯ ರೋಗದ ಔಷಧಿಗಳನ್ನು ಉಚಿತವಾಗಿ ರೋಗಿಯ ಮನೆ ಬಾಗಿಲಿಗೆ ತಲುಪಿಸಲಾಗುವುದು' ಎಂದು ಹೇಳಿದರು.

ಜನವರಿಯಲ್ಲಿ ಶಂಕುಸ್ಥಾಪನೆ

'ಹುಬ್ಬಳ್ಳಿಯಲ್ಲಿ ₹ 350 ಕೋಟಿ ವೆಚ್ಚದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ಮಿಸಲಾಗುವುದು. ಟೆಂಡರ್ ನೀಡುವ ಪ್ರಕ್ರಿಯೆಯಲ್ಲಿದ್ದು, ಜನವರಿಯಲ್ಲಿ ಶಂಕುಸ್ಥಾಪನೆ ಮಾಡಲಾ ಗುವುದು. ಹುಬ್ಬಳ್ಳಿಯ ಕ್ಯಾನ್ಸರ್ ಆಸ್ಪತ್ರೆಗೆ ₹ 10 ಕೋಟಿ ಅನುದಾನ ನೀಡಲಾಗಿದೆ. ಹುಬ್ಬಳ್ಳಿಯ ಕೋ–ಆಪರೇಟಿವ್ ಆಸ್ಪತ್ರೆ ಹಾಗೂ ಘಟಪ್ರಭಾ ಕೋ–ಆಪರೇಟಿವ್ ಆಸ್ಪತ್ರೆಗೆ ತಲಾ ₹ 2 ಕೋಟಿ ಅನುದಾನ ಕೊಟ್ಟಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

'ಮಹದಾಯಿ: ಕಾಲುವೆಗೆ ಗೋಡೆ ಕಟ್ಟಿದ ಕಾಂಗ್ರೆಸ್'

ಹುಬ್ಬಳ್ಳಿ: 'ಮಹದಾಯಿ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕ ಹಕ್ಕಿಲ್ಲ. ಮಹದಾಯಿ ನೀರನ್ನು ಕರ್ನಾಟಕಕ್ಕೆ ತರುವ ಕಾಲುವೆಗೆ ಗೋಡೆ ಕಟ್ಟಿರುವುದೇ ಕಾಂಗ್ರೆಸ್‌ನ ದೊಡ್ಡ ಸಾಧನೆ. ರಕ್ತದಲ್ಲಿ ನಾನು ಪತ್ರ ಬರೆದಿದ್ದಕ್ಕೇ ಮಹದಾಯಿ ಕಾಮಗಾರಿ ಪ್ರಾರಂಭವಾಗಿದ್ದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ನಾನು ನೀರಾವರಿ ಸಚಿವನಾಗಿದ್ದಾಗ 5.5 ಮೀಟರ್‌ಗಳಷ್ಟು ಕಾಲುವೆ ನಿರ್ಮಾಣವಾಯಿತು. ಆದರೆ, ಕಾಂಗ್ರೆಸ್ ಪುಣ್ಯಾತ್ಮರು ಏನು ಮಾಡಿದರು? ಸೋನಿಯಾ ಗಾಂಧಿ ಅವರು ಗೋವಾದಲ್ಲಿ ಒಂದು ಹನಿ ನೀರನ್ನು ತಿರುಗಿಸಲು ಬಿಡುವುದಿಲ್ಲ ಎಂದಿದ್ದರು. ನಾವು ನಿರ್ಮಿಸಿದ್ದ ಕಾಲುವೆಗೆ ಅವರ ಕಾಲದಲ್ಲಿ ಗೋಡೆ ಕಟ್ಟಿದರು' ಎಂದು ಟೀಕಿಸಿದರು.

ಗಡಿ ವಿವಾದ- ವ್ಯಾಖ್ಯಾನಿಸುವುದಿಲ್ಲ: 'ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆಗೂ ಮುನ್ನ ಹಲವು ವರದಿಗಳು ಬಂದಿವೆ. ಅಂತಿಮವಾಗಿ ಕಾಯ್ದೆ ರೂಪುಗೊಂಡಿದೆ. ಇದು ಈಗಿನ ಕಾನೂನಿನ ವಸ್ತುಸ್ಥಿತಿ. ಸದ್ಯದ ಸ್ಥಿತಿಯನ್ನೇ ಉಳಿಸಿಕೊಳ್ಳಬೇಕೊ ಬೇಡವೊ ಎಂಬುದನ್ನು ಸುಪ್ರೀಂ ಕೋರ್ಟ್ ಇನ್ನೂ ತೀರ್ಮಾನಿಸಿಲ್ಲ. ಕೋರ್ಟ್‌ನಲ್ಲಿ ಪ್ರಕರಣವಿರುವಾಗ ವ್ಯಾಖ್ಯಾನ ಮಾಡುವುದಿಲ್ಲ' ಎಂದು ಗಡಿ ವಿವಾದ ಕುರಿತು ಬೊಮ್ಮಾಯಿ ಪ್ರತಿಕ್ರಿಯಿಸಿದರು.

'ದಲಿತ ಮುಖ್ಯಮಂತ್ರಿ ವಿಚಾರ ಈಗ ಅಪ್ರಸ್ತುತ'

ಮೈಸೂರು: 'ದಲಿತ ಮುಖ್ಯಮಂತ್ರಿ ವಿಚಾರ ಈಗ ಅಪ್ರಸ್ತುತ. ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದೇ ಮುಖ್ಯ. ಕಾಂಗ್ರೆಸ್‌ನಲ್ಲಿ ಮಾತ್ರ ದಲಿತರು ಮುಖ್ಯಮಂತ್ರಿಯಾಗಲು ಸಾಧ್ಯ' ಎಂದು ಕೆಪಿಸಿಸಿ ಚುನಾವಣಾ ಪ್ರಣಾಳಿಕೆ ಸಮಿತಿಯ ಅಧ್ಯಕ್ಷ ಹಾಗೂ ಐಕ್ಯತಾ ಸಮಿತಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಪ್ರತಿಪಾದಿಸಿದರು.

'ರಾಜಕೀಯ ಉದ್ದೇಶಕ್ಕಾಗಿಯೇ ಚಿತ್ರದುರ್ಗದಲ್ಲಿ ಜ.8ರಂದು ಪರಿಶಿಷ್ಟ ಜಾತಿ ಹಾಗೂ ಪಂಗಡದ ಐಕ್ಯತಾ ಸಮಾವೇಶ ನಡೆಸುತ್ತಿದ್ದು, ಆ ಮೂಲಕ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಡ ಹೇರಲಾಗುವುದು. ಮುಖ್ಯಮಂತ್ರಿ ಹುದ್ದೆಗೆ ವಿಚಾರದಲ್ಲಿ ನಾನೇನು ಸನ್ಯಾಸಿಯಲ್ಲ' ಎಂದು ಬುಧವಾರ ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೆಪಿಟಿಸಿಎಲ್ ಅಕ್ರಮ: ಮತ್ತೊಬ್ಬ ಆರೋಪಿ ಬಂಧನ

ಸೋಮನಗೌಡ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮಕ್ಕೆ ಸಂಬಂಧಿಸಿ ದಂತೆ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 35ಕ್ಕೆ ಏರಿದೆ.

ರಾಯಬಾಗ ತಾಲ್ಲೂಕಿನ ಕೋಳಿಗುಡ್ಡದ ಸೋಮನಗೌಡ ಶಂಕರಗೌಡ ಪಾಟೀಲ (36) ಬಂಧಿತ. 'ಗದಗ ನಗರದ ಮುನ್ಸಿಪಲ್ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರದಿಂದ ಪ್ರಶ್ನೆ ಪತ್ರಿಕೆಯನ್ನು ಬಹಿರಂಗ ಮಾಡುವಲ್ಲಿ ಈ ಆರೋಪಿಯ ಪಾತ್ರ ಪ್ರಮುಖವಾಗಿದೆ' ಎಂದು ಜಿಲ್ಲಾ ಎಸ್ಪಿ ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483641

ಸಂಖ್ಯೆ: ಕರಾಪಾನಿನಿ/ಇನ್‌ಫ್ರಾ/ಆಡಳಿತ–04–023/ಎ7/2022–23 ದಿನಾಂಕ: 12.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಂಗಳೂರು ಮತ್ತು ಕೊತ್ತನೂರು(ಬೆಂಗಳೂರು) ನಿಗಮದ ಉಪಯೋಗಕ್ಕೆ ಬಾಡಿಗೆ ಆಧಾರದ ಮೇಲೆ ಗೋದಾಮನ್ನು ಒದಗಿಸಲು ಗೋದಾಮು ಮಾಲೀಕರಿಂದ ಆನ್‌ಲೈನ್ ಇ–ಟೆಂಡರ್ ಅನ್ನು ಆಹ್ವಾನಿಸಿದೆ. ಇಎಂಡಿ ಮೊತ್ತ: ರೂ. 25,000/–.
1) ವಿಚಾರಣೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 22.12.2022ರ ಸಂಜೆ 4:00 ಗಂಟೆಯವರೆಗೆ. 2) ಟೆಂಡರ್‌ಗಳನ್ನು ಅಪ್‌ಲೋಡ್ ಕೊನೆಯ ದಿನಾಂಕ ಮತ್ತು ಸಮಯ: 28.12.2022ರ ಸಂಜೆ 4:00 ಗಂಟೆಯವರೆಗೆ. 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 30.12.2022ರ ಸಂಜೆ 4:30 ಗಂಟೆಗೆ. ಬಿಡ್ಡುದಾರರು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://eproc.karnataka.gov.in ಅನ್ನು ವೀಕ್ಷಿಸಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)
ವಾಸಾಸಂಇ/ವಾಪ್ರ/ಜಿಎ/3510/2022–23

ಸುವರ್ಣ ಕರ್ನಾಟಕ
ನಗರ ಸಭೆ ಕಾರ್ಯಾಲಯ,ಬಾಗಲಕೋಟ–587103
ಜಿಲ್ಲಾ:ಬಾಗಲಕೋಟ (ಕರ್ನಾಟಕ:ರಾಜ್ಯ)
Post Box NO:19 STD: 08354 235011
Website:www.bagalkotecity.gov.in. FAX NO. 235732.
E-mail ID:itstaff-ulb-bagalkote@yahoo.co.in HELP Line: 235792
ಕ್ರ.ಸಂ:ನಸಬಾ/ಲೋ.ವಿ/TND/2022–23/ ದಿನಾಂಕ:12–12–2022

ತಿದ್ದುಪಡೆ ಟೆಂಡರ್ ಪ್ರಕಟಣೆ E-Proceurement portal ಮುಖಾಂತರ e-protal: https://eproc.karnataka.gov.in

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ನಗರಸಭೆ ವ್ಯಾಪ್ತಿಯಲ್ಲಿ ಸನ್ 2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಲ್ಲಿ, ಹಾಗೂ ನಗರಸಭೆ ನಿಧಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೇದಾರರಿಂದ / E-Proceurement portal ನಲ್ಲಿ ನೋಂದಾಯಿತ Standard Tender Documents Kw–1 ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿರುತ್ತದೆ.

1) DMA/2022-23/BD/WORK_INDENT 143331
ಹೀಗೆ ರೂ : 19.38 ಲಕ್ಷದ ಕಾಮಗಾರಿ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.
1) Last date for submission of bid through E - procurement portal before : 19-12-2022 At 16.30 hours.
2) Opening of Technical and Financial bid is on or after : 21-12-2022 at 11.30 AM

ಸಹಿ/– ಸಹಾಯಕ ಕಾರ್ಯಪಾಲ ಅಭಿಯಂತರರು ನಗರಸಭೆ ಬಾಗಲಕೋಟೆ
ಸಹಿ/– ಪೌರಾಯುಕ್ತರು ನಗರಸಭೆ ಬಾಗಲಕೋಟೆ
ವಾ.ಸಾ.ಇ/ಬಾಗಲಕೋಟೆ/685/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ರೆವಿನ್ಯೂ ಸರ್ವೆ ಕಚೇರಿ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.
ಸಂಖ್ಯೆ: ಕಂಇ/ಎಜೆಎಸ್‌ಕೆ/ಆಡಳಿತ–25/20–21(ಭಾಗ–1) ದಿನಾಂಕ: 14.12.2022

ಪತ್ರಿಕಾ ಪ್ರಕಟಣೆ

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಲ್ಲಿ ಖಾಲಿ ಇರುವ 01 ಸಾಫ್ಟವೇರ್ ಡೆವಲಪರ್ ಹಾಗೂ 01 ಮೊಬೈಲ್ ಡೆವಲಪರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳಿಗೆ ಈ ಕೆಳಕಂಡಂತೆ ವಿದ್ಯಾರ್ಹತೆ ಮತ್ತು ನೈಪುಣ್ಯತೆ ಹೊಂದಿರುವವರಿಗೆ ಆದ್ಯತೆಯನ್ನು ನೀಡಲಾಗುವುದು.

SOFTWARE DEVELOPER

1.	Qualification	B.E/B.Tech in Computer Science/ECE/IT/ Information Science or MCA.
2.	Experience	3-5 years in. NET (Asp. NET) development of which atleast 2 years in MVC Architecture (C# full stack) development and development in MS SQL and should have experience in Database design, writing stored procedures/ functions, API development.
3.	Salary per month	From Rs.40,000/- to Rs. 80,000/- based on experience
4.	No. of Position	01

ANDROID APPLICATION DEVELOPER

1.	Qualification	B.E/B.Tech in Computer Science/ECE/IT/ Information Science or MCA.
2.	Experience	3-5 years experience in Android Application Development and should have experience in Java Language, Retrofit API Integration, Sqlite Database and Good Knowledge on UI/UX.
3.	Salary per month	From Rs.40,000/- to Rs. 80,000/- based on experience
4.	No. of Position	01

ಅರ್ಹ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಅರ್ಜಿಯನ್ನು ದಿನಾಂಕ: 23.12.2022 ರೊಳಗಾಗಿ ಇ–ಮೇಲ್: ajskcareers@gmail.com ಮೂಲಕ ಸಲ್ಲಿಸತಕ್ಕದ್ದು.

ಸಹಿ/–
ನಿರ್ದೇಶಕರು,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ.
DIPR/CP/3526/Zen/2022-23

ಕರ್ನಾಟಕ ಸರ್ಕಾರ
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ
ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಬಲೇಶ್ವರ

ಟೆಂಡರ್ ಪ್ರಕಟಣೆ

ಪ್ರಾಚಾರ್ಯರು ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಬಲೇಶ್ವರ ತಾ/ಬಬಲೇಶ್ವರ ಜಿಲ್ಲಾ/ ವಿಜಯಪುರ ಇವರು ಕಚೇರಿ ಹಾಗೂ NSQF Level-04 ರ ಪಠ್ಯಕ್ರಮದನುಸಾರ ತರಬೇತಿ ವಿಭಾಗಗಳಿಕ್ಕೆ ಅವಶ್ಯವಿರುವ ಸಾಧನ ಮತ್ತು ಸಲಕರಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಖರೀದಿಗಾಗಿ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಇ–ಟೆಂಡರ್ ಸಂಖ್ಯೆ: No ITI/PUR/CR-06/2022-23 ಇ–ಟೆಂಡರ್ DET/2022-23/IND790 Dt: 09.12.2022 ಇ–ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡಲು ಅರ್ಹ ಆಸಕ್ತಿಯುಳ್ಳ ಸರಬರಾಜುದಾರರಿಗೆ ಕೊನೆಯ ದಿನಾಂಕ: 26.12.2022 ಸಂಜೆ 5.00 ಘಂಟೆ.

ಹೆಚ್ಚಿನ ಮಾಹಿತಿಯನ್ನು www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಪ್ರಾಚಾರ್ಯರು, ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಬಲೇಶ್ವರ
ವಾಸಾಸಂಇ/ವಿಜಯಪುರ/668/ಎಂಸಿಎ/2022–23

MSIL **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
ಟೂರ್ಸ್ & ಟ್ರಾವೆಲ್ಸ್ ವಿಭಾಗ
ಎಂಎಸ್‌ಐಎಲ್ ಹೌಸ್, #36, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು – 560 052.
ದೂರವಾಣಿ : 080–22264021–25
ಸಂ: ಎಂಎಸ್‌ಐಎಲ್/ಟಿ&ಟಿ/004/2022–23/ಕರೆ–3 ದಿನಾಂಕ: 15.12.2022

ಆಸಕ್ತಿ ವ್ಯಕ್ತಪಡಿಸುವಿಕೆ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ವಿವಿಧ ಉತ್ಪನ್ನಗಳು ಮತ್ತು ಸೇವೆಗಳನ್ನು ಮಾರ್ಕೆಟಿಂಗ್ ಮಾಡುವಲ್ಲಿ ತೊಡಗಿಸಿಕೊಂಡಿರುವ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾಗಿದೆ. ಈಗ ಎಂಎಸ್‌ಐಎಲ್‌ನೊಂದಿಗೆ ದೇಶೀಯ, ಅಂತಾರಾಷ್ಟ್ರೀಯ, ಶಿಕ್ಷಣ ಮತ್ತು ವೈದ್ಯಕೀಯ ಪ್ರವಾಸ ಪ್ಯಾಕೇಜ್‌ಗಳು, ವಿದೇಶಿ ವಿನಿಮಯ ಮತ್ತು ಸಂಬಂಧಿತ ಸೇವೆಗಳನ್ನು ಸಂಘಟಿಸಲು ಸಹಯೋಗ ಬಯಸುವ ವ್ಯಾಪಾರ ಸಹವರ್ತಿಗಳಿಗಾಗಿ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗೆ ಸಂಬಂಧಪಟ್ಟ ದಸ್ತಾವೇಜುಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ದಿನಾಂಕ 15.12.2022 ರಿಂದ 29.12.2022 ಮಧ್ಯಾಹ್ನ 3.30 ಗಂಟೆ ವರೆಗೆ ಲಭ್ಯವಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29.12.2022 ಮಧ್ಯಾಹ್ನ 3.30 ಗಂಟೆಗೆ. ಬಿಡ್ ಪೂರ್ವ ಸಭೆ ದಿನಾಂಕ : 22.12.2022.

ಸಹಿ/–ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟಿ&ಟಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ–ಪೂರ್ವ ವಿಭಾಗ, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ(ಪಿಯುಬಿ), 21ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–560001.
ಸಂ: ಕಾಪಾಅ/ಯೋ–ಪೂರ್ವ/ಟೆಂಡ್/08/2022–23 ದಿನಾಂಕ: 13.12.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಏಕ&ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–1, ಕೆಡಬ್ಲ್ಯೂ–2 & ಕೆಡಬ್ಲ್ಯೂ–3)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಪೂರ್ವ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)
ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿದೆ			
1	ವಾರ್ಡ್ ಸಂಖ್ಯೆ 111ರ ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದಲ್ಲಿ ಸ್ಯಾನಿಟರಿ ಪೈಪ್‌ಲೈನ್ ಅನ್ನು ಬದಲಾಯಿಸುವುದು ಹಾಗೂ ಇತರೆ ಕಾಮಗಾರಿಗಳು.	100.00	2,00,000/-
2	ವಾರ್ಡ್ ಸಂಖ್ಯೆ 111ರ ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ 10ನೇ ಮಹಡಿಯ ವಲಯ ಆಯುಕ್ತರು(ಪೂರ್ವ)ರವರ ಕಛೇರಿಯ ನವೀಕರಣ ಕಾಮಗಾರಿ.	105.00	2,00,000/-
3	ವಾರ್ಡ್ ಸಂಖ್ಯೆ 117ರ ಡಾ. ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದ ವಿಶೇಷ ದುರಸ್ತಿ ಕಾಮಗಾರಿ.	30.00	60,000/-
4	ವಾರ್ಡ್ ಸಂಖ್ಯೆ 114ರ ಗೌತಮಪುರ ಸಮುದಾಯ ಭವನದ ವಿಶೇಷ ದುರಸ್ತಿ ಕಾಮಗಾರಿ.	20.00	50,000/-
5	ವಾರ್ಡ್ ಸಂಖ್ಯೆ 115, ಸೊನ್ನೇನಹಳ್ಳಿ ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದ ದುರಸ್ತಿ ಕಾಮಗಾರಿ.	8.00	20,000/-
6	ಪೂರ್ವ ವಲಯದ ರೆಫೆರಲ್ & ಹೆರಿಗೆ ಆಸ್ಪತ್ರೆಗಳಲ್ಲಿ ಇಟಿಪಿ ಪ್ಲಾಂಟ್ & ಬಿಎಂಡಬ್ಲ್ಯೂ ಕೊಠಡಿ ಒದಗಿಸುವುದು.	15.00	37,500/-
7	ವಾರ್ಡ್ ಸಂಖ್ಯೆ 47ರ ಡಿ.ಜೆ. ಹಳ್ಳಿ ಹೆರಿಗೆ ಆಸ್ಪತ್ರೆಯಲ್ಲಿ ಮಾರ್ಪಾಡು ಕಾಮಗಾರಿ.	52.00	1,04,000/-
8	ಪೂರ್ವ ವಲಯ ವ್ಯಾಪ್ತಿಯ ಬಿಬಿಎಂಪಿ ಆಸ್ತಿಗಳಿಗೆ ಫೆನ್ಸಿಂಗ್ ಒದಗಿಸುವುದು (ಉದ್ಯಾನವನಗಳು, ಆಟದ ಮೈದಾನಗಳು, & ಉದ್ಯಾನಗಳು)	70.00	1,40,000/-
9	ಪೂರ್ವ ವಲಯ ವ್ಯಾಪ್ತಿಯ ಬಿಬಿಎಂಪಿ ಆಸ್ತಿಗಳಿಗೆ ಫೆನ್ಸಿಂಗ್ ಒದಗಿಸುವುದು.	62.50	1,25,000/-
ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ			
10	ವಾರ್ಡ್ ಸಂಖ್ಯೆ 89ರ ಹಲಸೂರು ರೆಫೆರಲ್ ಆಸ್ಪತ್ರೆಯಲ್ಲಿ ವಿದ್ಯುತ್ ಕೆಲಸಗಳು ಮತ್ತು ಇತರೆ ಕಾಮಗಾರಿಗಳು.	35.00	70,000/-
11	ವಾರ್ಡ್ ಸಂಖ್ಯೆ 111ರ ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದಲ್ಲಿ ಮಳೆನೀರು ಕೊಯ್ಲು ಕಾಮಗಾರಿ.	23.00	50,000/-
ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ			
12	ವಾರ್ಡ್ ಸಂಖ್ಯೆ 111ರ ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದಲ್ಲಿ ಸುಧಾರಣಾ ಕಾಮಗಾರಿಗಳು.	50.00	1,00,000/-

1) ಟೆಂಡರ್ ಡಾಕ್ಯುಮೆಂಟ್‌ಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ : 17.12.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26.12.2022 ರ ಸಂಜೆ 4.00 ಗಂಟೆಯವರೆಗೆ 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 27.12.2022 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ : www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–22975815 ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ಪೂರ್ವ ವಿಭಾಗ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಚೇರಿ ಕಲಬುರಗಿ
(ಉಗ್ರಾಣ ಇಲಾಖೆ)
ಸಂ.ಕಕರಸಾ/ಕೇಕ/ಉ&ಮಖನಿ/721/2022–23 ದಿನಾಂಕ 09.12.2022

ಟೆಂಡರ್ ಪ್ರಕಟಣೆ. (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) ಸಂಖ್ಯೆ ಮತ್ತು ದಿನಾಂಕ : ಜಿ–06/ ದಿ. 09.12.2022, 2) ವಸ್ತುಗಳ ವಿವರ : ಅಟೋಮೋಟಿವ್ ಗ್ಲಾಸ್‌ಗಳನ್ನು ಸರಬರಾಜು ಮಾಡುವ ಕುರಿತು. 3) ಟೆಂಡರ್ ಮೌಲ್ಯ : ರೂ 4.54 ಕೋಟಿ
. ಟೆಂಡರ್, ನೊಂದಣಿ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು http://eproc.karnataka.gov.in ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ eprocurementhelpdesk@gmail.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಭಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರುಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ/ಕಲಬುರಗಿ/957/ಎಂ.ಸಿ.&ಎ/2022–23

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ–584115, ಲಿಂಗಸುಗೂರು–ತಾ., ರಾಯಚೂರು ಜಿಲ್ಲೆ, ಕರ್ನಾಟಕ. ದೂ: 08537–275022
ಸಿಐಎನ್ ನಂ. ಯು85110ಕೆಎ1947ಎಸ್‌ಜಿಸಿ001321

ನೇರ ಸಂದರ್ಶನ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಹಟ್ಟಿಯಲ್ಲಿರುವ 120 ಹಾಸಿಗೆಗಳ ಆಸ್ಪತ್ರೆಗೆ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ತಜ್ಞ ವೈದ್ಯರುಗಳು ಹಾಗೂ ವೈದ್ಯಾಧಿಕಾರಿಗಳು ಬೇಕಾಗಿದ್ದಾರೆ.

1)	ಜನರಲ್ ಸರ್ಜನ್ ವಿದ್ಯಾರ್ಹತೆ ಕ್ರೋಡೀಕೃತ ಸಂಬಳ	: : :	1 ಹುದ್ದೆ ಎಂಎಸ್(ಜನರಲ್ ಸರ್ಜರಿ) ಎನ್.ಹೆಚ್.ಆರ್.ಎಂ ವೇತನ ಶ್ರೇಣಿ ಮತ್ತು ಮಾರ್ಗದರ್ಶನಗಳಂತೆ
2)	ಇ.ಎನ್.ಟಿ ಸರ್ಜನ್ ವಿದ್ಯಾರ್ಹತೆ ಕ್ರೋಡೀಕೃತ ಸಂಬಳ	: : :	1 ಹುದ್ದೆ ಇ.ಎನ್.ಟಿಯಲ್ಲಿ ಎಂಎಸ್/ಡಿಎನ್‌ಬಿ/ಡಿಪ್ಲೊಮಾ ತಿಂಗಳಿಗೆ ರೂ.80,000/–
3)	ಪೀಡಿಯಾಟ್ರಿಷಿಯನ್ ವಿದ್ಯಾರ್ಹತೆ ಕ್ರೋಡೀಕೃತ ಸಂಬಳ	: : :	1 ಹುದ್ದೆ ಪೀಡಿಯಾಟಿಕ್ಸ್‌ನಲ್ಲಿ ಎಂಎಸ್/ಡಿಎನ್‌ಬಿ/ಡಿಪ್ಲೊಮಾ. ಎನ್.ಹೆಚ್.ಆರ್.ಎಂ ವೇತನ ಶ್ರೇಣಿ ಮತ್ತು ಮಾರ್ಗದರ್ಶನಗಳಂತೆ
4)	ಡರ್ಮಟಾಲಜಿಸ್ಟ್ ವಿದ್ಯಾರ್ಹತೆ ಕ್ರೋಡೀಕೃತ ಸಂಬಳ	: : :	1 ಹುದ್ದೆ ಡರ್ಮಟಾಲಜಿಯಲ್ಲಿ ಪಿ.ಜಿ. ಪದವಿ ಅಥವಾ ಡಿಪ್ಲೊಮಾ ತಿಂಗಳಿಗೆ ರೂ.80,000/–
5)	ವೈದ್ಯಾಧಿಕಾರಿಗಳು ವಿದ್ಯಾರ್ಹತೆ ಕ್ರೋಡೀಕೃತ ಸಂಬಳ	: : :	5 ಹುದ್ದೆಗಳು. ಎಂಬಿಬಿಎಸ್ ತಿಂಗಳಿಗೆ ರೂ.60,000/–

ಜಾಹೀರಾತು ಪ್ರಕಟಣೆಗೊಂಡ ದಿನಾಂಕ 28.12.2022 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ–584 115 ನಲ್ಲಿರುವ ಆಡಳಿತ ಕಛೇರಿಯಲ್ಲಿ ನೇರ ಸಂದರ್ಶನ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ತಮ್ಮ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯನ್ನು ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲೆ ಪ್ರಮಾಣ, ಅನುಭವ ಪ್ರಮಾಣ ಪತ್ರ, ಜಾತಿ ಇತ್ಯಾದಿಗಳ ಮೂಲ ಮತ್ತು ಪ್ರತಿಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಜೊತೆಗೆ ಹಾಜರುಪಡಿಸಬೇಕು.

ಸಹಿ/– ಪ್ರಭಾರಿ ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
GSTIN:29BLR002252F1DR
ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2022–23/ 5324, ದಿನಾಂಕ: 09.12.2022

–:: ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ ::–

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, 2, 3 & 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022–23ನೇ ಸಾಲಿನ ಲೆಕ್ಕಶೀರ್ಷಿಕೆ ಕೆಕೆಆರ್‌ಡಿಬಿ, 5054 ಅಪೆಂಡಿಕ್ಸ್–ಇ ಮತ್ತು 3054 ರಸ್ತೆ ನಿರ್ವಹಣೆ ಯೋಜನೆ ಅಡಿಯಲ್ಲಿ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ e-procurement ಮುಖಾಂತರ ಶಹಾಪೂರ ತಾಲೂಕಿನ ತಾಲೂಕಿನ 06 ಮತ್ತು ಸುರಪೂರ ತಾಲೂಕಿನ ತಾಲೂಕಿನ 06 ಒಟ್ಟು 12 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಇವುಗಳಲ್ಲಿ ಸಾಮಾನ್ಯ ವರ್ಗ ಇಂಡೆಂಟ ಸಂಖ್ಯೆ–1)161691, 2)161692, 3)161693, 4)161731, 5)161702, 6)161023, 7)161024, 8)161066, 9)161801 & 10) 155862/Call-2, ಎಸ್.ಸಿ.ಮೀಸಲಾತಿ: 1)161694 &, 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ.8.00 ಲಕ್ಷ ಹಾಗೂ ಗರಿಷ್ಠ ರೂ:220.00 ಲಕ್ಷ. 3) ಗುತ್ತೆದಾರರ ಅರ್ಹತೆ ವಿವರ: 4 ನೇ ದರ್ಜೆ ಹಾಗೂ ಮೇಲ್ಪಟ್ಟು (ನಿಯಮಾನುಸಾರ) 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 8,500.00 ಗರಿಷ್ಠ ರೂ:2,79,400.00 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 14.12.2022 (11.30 ಗಂಟೆ ನಂತರ) (ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ). 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 16.12.2022 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 23.12.2022 (16.00 ಗಂಟೆವರೆಗೆ) 8) ಟೆಂಡರ/ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.12.2022 (11.30 ಗಂಟೆ ನಂತರ) (ಕೆಡಬ್ಲ್ಯೂ–1&2ರ ಕಾಮಗಾರಿಗಳಿಗೆ ಮಾತ್ರ) 9) ಟೆಂಡರ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.12.2022 (11.30 ಗಂಟೆ ನಂತರ) (ಕೆಡಬ್ಲ್ಯೂ–3&4ರ ಕಾಮಗಾರಿಗಳಿಗೆ ಮಾತ್ರ) 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.12.2022 (11.30 ಗಂಟೆ ನಂತರ) (ಕೆಡಬ್ಲ್ಯೂ–3&4ರ ಕಾಮಗಾರಿಗಳಿಗೆ ಮಾತ್ರ) 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ. 12) ಅಂತರ್ಜಾಲ ತಾಣದ ವಿಳಾಸ: www.e-proc. karnataka. gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡೆ/ಬದಲಾವಣೆಯಾದಲ್ಲಿ ಇ–ಪೋರ್ಟಾಲ್‌ನಲ್ಲಿ ಮಾತ್ರ ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು
ಲೋಕೋಪಾಯೋಗಿ ಇಲಾಖೆ, ವಿಭಾಗ
ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/353/ಎಂ.ಸಿ.&ಎ/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ / ಇಎಂಡಿ
ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.	
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)–ಯೋ/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/407/2022–23, ದಿನಾಂಕ: 14.12.2022	
ಟರ್ನ್‌ಕೀ ಆಧಾರದಲ್ಲಿ 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ರೈಸಿಂಗ್ ಮೇನ್ ಜೊತೆಗೆ ಬೆಂಗಳೂರಿನ ಹೆಬ್ಬಾಳದಲ್ಲಿ ಹಾಲಿಯಿರುವ 60 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಟಿ.ಪಿ ಬದಲಾಗಿ ಇಂಟಿಗ್ರೇಟೆಡ್ ಫಿಕ್ಸೆಡ್–ಫಿಲ್ಮ್ ಆಕ್ಟಿವೇಟೆಡ್ ಸ್ಲಡ್ಜ್ (IFAS) ಆಧಾರದ ಮೇಲೆ ಹೊಸದಾದ 60 ಎಂ.ಎಲ್.ಡಿ ಎಸ್.ಟಿ.ಪಿ ಮತ್ತು ಹೆಣ್ಣೂರಿನಲ್ಲಿ 40 ಎಂ.ಎಲ್.ಡಿ ಐ.ಎಸ್.ಪಿ.ಎಸ್ ಗಳ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿ.	ರೂ. 123.40 ಕೋಟಿ ರೂ. 1.46 ಕೋಟಿ
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)–ಯೋ/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/409/2022–23, ದಿನಾಂಕ: 14.12.2022	
ಟರ್ನ್‌ಕೀ ಆಧಾರದಲ್ಲಿ 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಬೆಂಗಳೂರಿನ ಹೊರಮಾವುವಿನಲ್ಲಿ ಇಂಟಿಗ್ರೇಟೆಡ್ ಫಿಕ್ಸೆಡ್–ಫಿಲ್ಮ್ ಆಕ್ಟಿವೇಟೆಡ್ ಸ್ಲಡ್ಜ್ (IFAS) ಆಧಾರದ ಮೇಲೆ ಹೊಸದಾದ 60 ಎಂ.ಎಲ್.ಡಿ ಸಾರ್ಮರ್ಥ್ಯದ ಎಸ್.ಟಿ.ಪಿ ಮತ್ತು ರಾಜಾಕೆನಾಲನಲ್ಲಿ 80 ಎಂ.ಎಲ್.ಡಿ ಐ.ಎಸ್.ಪಿ.ಎಸ್ ಮತ್ತು ಹೊರಮಾವುವಿನಲ್ಲಿ 20 ಎಂ.ಎಲ್.ಡಿ ಟಿ.ಎಸ್.ಪಿ.ಎಸ್ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿ ಹಾಗೂ ಹೊರಮಾವುವಿನಲ್ಲಿ ಹಾಲಿಯಿರುವ 20ಎಂ.ಎಲ್.ಡಿ ಎಸ್.ಟಿ.ಪಿ ಉನ್ನತೀಕರಣ ಕಾಮಗಾರಿ.	ರೂ. 131.09 ಕೋಟಿ ರೂ. 1.55 ಕೋಟಿ
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 13.01.2023 ರಂದು ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.01.2023 ರಂದು ಸಂಜೆ: 4.00 ಗಂಟೆಗೆ.	
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪೂರ್ವ)/ಉಮುಅ(ತ್ಯಾನೀನಿ)/431/2022–23, ದಿನಾಂಕ: 14.12.2022	
5 ವರ್ಷಗಳ ಅವಧಿಗೆ ಕಾರ್ಯಚಾಲನೆ, ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ಬೆಂಗಳೂರಿನ ಕೆ.ಆರ್.ಪುರಂನಲ್ಲಿ ಹಾಲಿಯಿರುವ 20 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ವಿನ್ಯಾಸ, ನಿರ್ಮಾಣ, ಉನ್ನತೀಕರಣ ಮತ್ತು ಪುನಶ್ಚೇತನ ಕಾಮಗಾರಿ. ವಿನ್ಯಾಸದ ಅವಧಿಯಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ, ಉನ್ನತೀಕರಣ ಮತ್ತು ಪುನಶ್ಚೇತನ ಅವಧಿಯಲ್ಲಿ ಎಲ್ಲಾ ಉಪಕರಣಗಳಿಗೆ ಸಣ್ಣ ಮತ್ತು ಬೃಹತ್ ರಿಪೇರಿಗಳು ಸೇರಿ ಘಟಕದ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲಾ ಬಿಡಿ ಭಾಗಗಳ ಸರಬರಾಜು, ಆಯಿಲ್ ಮತ್ತು ಲೂಬ್ರಿಕೆಂಟ್ಸ್‌ಗಳ ಸರಬರಾಜು, ಮೇಲ್ವಿಚಾರಕ ಮತ್ತು ಭದ್ರತಾ ಸಿಬ್ಬಂದಿಗಳ ವ್ಯವಸ್ಥೆ, ಉದ್ಯಾನವನ ಮತ್ತು ಮರಗಳ ನಿರ್ವಹಣೆ, ದಿನದ ಎಲ್ಲಾ ಸಮಯದಲ್ಲಿ ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳು ಮತ್ತು ವಿದ್ಯುತ್ ಶುಲ್ಕ ಹೊರತುಪಡಿಸಿ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡುವುದು.	ರೂ. 53.95 ಕೋಟಿ ರೂ. 63.66 ಲಕ್ಷಗಳು
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪೂರ್ವ)/ಉಮುಅ(ತ್ಯಾನೀನಿ)/429/2022–23, ದಿನಾಂಕ: 14.12.2022	
4 ವರ್ಷಗಳ ಅವಧಿಗೆ ಕಾರ್ಯಚಾಲನೆ, ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ಬೆಂಗಳೂರಿನ ಕಾಡುಬೀಸನಹಳ್ಳಿಯಲ್ಲಿ ಹಾಲಿಯಿರುವ 50 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ವಿನ್ಯಾಸ, ನಿರ್ಮಾಣ, ಉನ್ನತೀಕರಣ ಮತ್ತು ಪುನಶ್ಚೇತನ ಕಾಮಗಾರಿ. ವಿನ್ಯಾಸದ ಅವಧಿಯಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ, ಉನ್ನತೀಕರಣ ಮತ್ತು ಪುನಶ್ಚೇತನ ಅವಧಿಯಲ್ಲಿ ಎಲ್ಲಾ ಉಪಕರಣಗಳಿಗೆ ಸಣ್ಣ ಮತ್ತು ಬೃಹತ್ ರಿಪೇರಿಗಳು ಸೇರಿ ಘಟಕದ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲಾ ಬಿಡಿ ಭಾಗಗಳ ಸರಬರಾಜು, ಆಯಿಲ್ ಮತ್ತು ಲೂಬ್ರಿಕೆಂಟ್ಸ್‌ಗಳ ಸರಬರಾಜು, ಮೇಲ್ವಿಚಾರಕ ಮತ್ತು ಭದ್ರತಾ ಸಿಬ್ಬಂದಿಗಳ ವ್ಯವಸ್ಥೆ, ಉದ್ಯಾನವನ ಮತ್ತು ಮರಗಳ ನಿರ್ವಹಣೆ, ದಿನದ ಎಲ್ಲಾ ಸಮಯದಲ್ಲಿ ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳು ಮತ್ತು ವಿದ್ಯುತ್ ಶುಲ್ಕ ಹೊರತುಪಡಿಸಿ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡುವುದು.	ರೂ. 71.70 ಕೋಟಿ ರೂ. 84.61 ಲಕ್ಷಗಳು
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 13.01.2023 ರಂದು ಸಂಜೆ 5:30 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.01.2023 ರಂದು ಸಂಜೆ: 4.00 ಗಂಟೆಗೆ. ಸಹಿ/– ಪ್ರಧಾನ ಮುಖ್ಯ ಅಭಿಯಂತರರು.	

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://eproc.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/RA/3532/2022-23

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಪ್ರಬಂಧ

ಡಾರ್ಕ್ ಸ್ಕೈ ಪಾರ್ಕ್

ಲಡಾಖ್‌ನ 'ಹಾನ್ಲೆ' ಎಂಬ ಪ್ರದೇಶವನ್ನು ಡಾರ್ಕ್ ಸ್ಕೈ ಪಾರ್ಕ್‌ಗಾಗಿ ಆಯ್ಕೆ ಮಾಡಲಾಗಿದೆ. ಐಎಸ್‌ಸಿಟಿ ಹಾಗೂ ಬೆಂಗಳೂರಿನ ಐಐಎ ಸಂಸ್ಥೆ ಪಾರ್ಕ್ ಸೌಲಭ್ಯ ಅಭಿವೃದ್ಧಿಪಡಿಸಲು ವೈಜ್ಞಾನಿಕ ಮತ್ತು ತಾಂತ್ರಿಕ ಬೆಂಬಲ ಒದಗಿಸುತ್ತಿವೆ.

ಆರ್.ಬಿ. ಗುರುಬಸವರಾಜ

ರಾತ್ರಿಯಲ್ಲಿ ಆಗಸವನ್ನು ನೋಡುವುದೇ ಒಂದು ಮಹದಾನಂದ. ಆಕಾಶದಲ್ಲಿನ ಗ್ರಹತಾರೆಗಳು, ನಕ್ಷತ್ರಪುಂಜಗಳನ್ನು ನೋಡುವುದೆಂದರೆ ಎಲ್ಲರಿಗೂ ಅಮಿತಾನಂದವನ್ನು ನೀಡುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೃತಕ ಬೆಳಕಿನ ಹಾವಳಿಯಿಂದಾಗಿ ರಾತ್ರಿ ವೇಳೆ ಸ್ಪಷ್ಟವಾಗಿ ಆಕಾಶಕಾಯಗಳನ್ನು ನೋಡಲಾಗುತ್ತಿಲ್ಲ. ಇದು ಖಗೋಳಾಸಕ್ತರಿಗೆ ನಿರಾಸೆಯನ್ನುಂಟು ಮಾಡಿದೆ.

ಈ ನಿರಾಸೆಯನ್ನು ತೊಡೆದುಹಾಕಿ ಮೋಡವಿಲ್ಲದ ಪ್ರತಿ ರಾತ್ರಿಯೂ ಆಕಾಶಕಾಯಗಳ ವೀಕ್ಷಣೆಗೆ ಅನುಕೂಲವಾಗುವ ಕೆಲ ತಾಣಗಳನ್ನು ಗುರುತಿಸುವ ಮತ್ತು ಅವುಗಳನ್ನು ರಕ್ಷಿಸುವ ಕೆಲಸ ವಿಶ್ವದಾದ್ಯಂತ ನಡೆಯುತ್ತಿದೆ. ಇಂಥ ಪ್ರದೇಶಗಳನ್ನು ಗುರುತಿಸಲು ಹುಟ್ಟಿಕೊಂಡ ಸಂಸ್ಥೆಯೇ 'ಅಂತರರಾಷ್ಟ್ರೀಯ ಡಾರ್ಕ್ ಸ್ಕೈ ಅಸೋಸಿಯೇಷನ್'. ಈ ಸಂಘಟನೆ 'ಇಂಟರ್‌ನ್ಯಾಷನಲ್ ಡಾರ್ಕ್ ಸ್ಕೈ ಪಾರ್ಕ್' ಹೆಸರಿನಲ್ಲಿ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ನಕ್ಷತ್ರಗಳು ಮತ್ತು ಇನ್ನಿತರೆ ಆಕಾಶಕಾಯಗಳ ವೀಕ್ಷಿಸುವುದಕ್ಕಾಗಿ ಕೆಲವು ತಾಣಗಳನ್ನು ಗುರುತಿಸಿ, ಸಂರಕ್ಷಿಸಲು ಮುಂದಾಗಿದೆ.

ಕೃತಕ ಬೆಳಕಿನ ಆಕರಗಳಿಂದ ಮುಕ್ತವಾದ ಎತ್ತರದ ತಾಣಗಳನ್ನು ಹುಡುಕಿ, 'ಡಾರ್ಕ್ ಸ್ಕೈ ಪಾರ್ಕ್' ನಿರ್ಮಿಸುವುದು, ಆ ಮೂಲಕ ಗ್ರಹತಾರೆಗಳ ಅಧ್ಯಯನಕ್ಕೆ ಮುಕ್ತ ವಾತಾವರಣ ಕಲ್ಪಿಸುವುದು ಈ ಅಸೋಸಿಯೇಷನ್ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಖಾಸಗಿ ಅಥವಾ ಸಾರ್ವಜನಿಕ ವಲಯದ ಸಂರಕ್ಷಿತ ತಾಣಗಳನ್ನು ಡಾರ್ಕ್ ಸ್ಕೈ ಪಾರ್ಕ್‌ಗೆ ಆಯ್ಕೆ ಮಾಡಲಾಗುತ್ತದೆ.

ಭಾರತದ ಪ್ರಥಮ ಡಾರ್ಕ್ ಸ್ಕೈ ಪಾರ್ಕ್

ಗಾಢ ಕತ್ತಲು ಇರುವಂತಹ ಹಾಗೂ ದೀರ್ಘಾವಧಿಯಲ್ಲಿ ಮೋಡಗಳು ಬಾರದಂತಹ ತಾಣಗಳನ್ನು ಸ್ಕೈ ಪಾರ್ಕ್ ನಿರ್ಮಾಣಕ್ಕೆ ಗುರುತಿಸಲಾಗುತ್ತದೆ. ಭಾರತದಲ್ಲಿ ಲಡಾಖ್‌ನ 'ಹಾನ್ಲೆ' ಎಂಬ ಪ್ರದೇಶವನ್ನು ಡಾರ್ಕ್ ಸ್ಕೈ ಪಾರ್ಕ್‌ಗಾಗಿ ಆಯ್ಕೆ ಮಾಡಲಾಗಿದೆ. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೊಫಿಸಿಕ್ಸ್‌ನ ತಜ್ಞರು ಇಲ್ಲಿ ಡಾರ್ಕ್ ಸ್ಕೈ ಪಾರ್ಕ್ ಸೌಲಭ್ಯ ಅಭಿವೃದ್ಧಿಪಡಿಸಲು ವೈಜ್ಞಾನಿಕ ಮತ್ತು ತಾಂತ್ರಿಕ ಬೆಂಬಲವನ್ನು ಒದಗಿಸುತ್ತಿದ್ದಾರೆ.

ಹಾನ್ಲೆಯಲ್ಲಿ ಈಗಾಗಲೇ ಭಾರತೀಯ ಖಗೋಳ ವೀಕ್ಷಣಾಲಯ ಸಂಕೀರ್ಣವಿದ್ದು, ಇದನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋ ಫಿಸಿಕ್ಸ್ ನಿರ್ವಹಿಸುತ್ತಿದೆ. ಇದೇ ಹಾನ್ಲೆಯಲ್ಲಿ ಬಹುದೊಡ್ಡ ಟೆಲಿಸ್ಕೋಪ್‌ವೊಂದನ್ನು ಅಳವಡಿಸಲಾಗಿದ್ದು, ಇದರ ಮೂಲಕ ಖಗೋಳ ವಿಜ್ಞಾನಿಗಳು ಎಕ್ಸೋಪ್ಲಾನೆಟ್‌ಗಳು, ಗೆಲಕ್ಸಿಗಳು ಮತ್ತು ನಕ್ಷತ್ರಗಳನ್ನು ಅಧ್ಯಯನ ಮಾಡುತ್ತಿದ್ದಾರೆ.

ಈಗಾಗಲೇ ಪ್ರಾಥಮಿಕ ಹಂತದ ಕಾರ್ಯ ಆರಂಭವಾಗಿದ್ದು, ಮಹತ್ವದ ಉಪಕರಣಗಳನ್ನು ಜೋಡಿಸುವ ಕಾರ್ಯವೂ ಚಾಲನೆಯಲ್ಲಿದೆ. ನಂತರ ಪೂರ್ಣ ಪ್ರಮಾಣದ ವೀಕ್ಷಣಾ ಕಾರ್ಯ ಮುಂದುವರೆಯುತ್ತದೆ.

ಏಕೆ ಲಡಾಖ್ ಆಯ್ಕೆ ಮಾಡಲಾಗಿದೆ?

ಹಾನ್ಲೆ ಡಾರ್ಕ್ ಸ್ಕೈ ರಿಸರ್ವ್ ತಾಣವು ಚಾಂಗ್ತಾಂಗ್ ವನ್ಯಜೀವಿ ಅಭಯಾರಣ್ಯದ ವ್ಯಾಪ್ತಿಯಲ್ಲಿದೆ. ಲಡಾಖ್ ಸಮುದ್ರ ಮಟ್ಟದಿಂದ ಸುಮಾರು 4,500 ಮೀಟರ್ ಎತ್ತರವಾಗಿದ್ದು, ಪರ್ವತ ಪ್ರದೇಶಗಳೊಂದಿಗೆ ಇರುವ ಒಂದು ವಿಶಿಷ್ಟವಾದ ಶೀತ ಪ್ರದೇಶವಾಗಿದೆ. ಇಲ್ಲಿ ನಿಂತು 180 ಡಿಗ್ರಿ ಕೋನದಿಂದ ಆಕಾಶವನ್ನು ವೀಕ್ಷಿಸಬಹುದಾಗಿದೆ. ದೀರ್ಘ ಮತ್ತು ಕಠಿಣವಾದ ಚಳಿಗಾಲದ ತಾಣವಾಗಿರುವ ಇಲ್ಲಿ ಕನಿಷ್ಠ ತಾಪಮಾನ ಮೈನಸ್ 40 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುತ್ತದೆ. ಜೊತೆಗೆ ಇಲ್ಲಿ ಸೀಮಿತ ಸಸ್ಯವರ್ಗ, ಎತ್ತರದ ಪ್ರದೇಶಗಳು ಮತ್ತು ವಿರಳ ಜನಸಂಖ್ಯೆಯೊಂದಿಗೆ ವಿಸ್ತಾರವಾದ ಪ್ರದೇಶಗಳಿವೆ. ಇವೆಲ್ಲವೂ ದೀರ್ಘಾವಧಿಯ ಖಗೋಳ ವೀಕ್ಷಣಾಲಯ ಮತ್ತು ಗಾಢವಾದ ಆಕಾಶದ ಸ್ಥಳಗಳಿಗೆ ಪರಿಪೂರ್ಣವಾಗಿ ಹೊಂದಾಣಿಕೆಯಾಗುತ್ತವೆ. ಇದರ ಇನ್ನೊಂದು ವಿಶೇಷ ಏನೆಂದರೆ ಇದು ಮೋಡರಹಿತ ಆಕಾಶ ಮತ್ತು ಕಡಿಮೆ ವಾತಾವರಣದ ನೀರಿನ ಆವಿಯನ್ನು ಹೊಂದಿದ್ದು ಆಪ್ಟಿಕಲ್, ಇನ್ಫ್ರಾ ರೆಡ್ ಮತ್ತು ಗಾಮಾ ಕಿರಣಗಳ ದೂರದರ್ಶಕಗಳಿಗಾಗಿ ವಿಶ್ವದ ಅತಿ ಎತ್ತರದ ತಾಣಗಳಲ್ಲಿ ಒಂದಾಗಿದೆ. ಇದರಿಂದ ಭಾರತದಲ್ಲೂ ಬಾಹ್ಯಾಕಾಶ ಪ್ರವಾಸೋದ್ಯಮ ತಾಣಗಳು ಅಭಿವೃದ್ಧಿಯಾಗಬಹುದೇ ಕಾದು ನೋಡಬೇಕಿದೆ.

ಅಂತರರಾಷ್ಟ್ರೀಯ ಡಾರ್ಕ್ ಸ್ಕೈ ಅಸೋಸಿಯೇಷನ್

1988 ರಲ್ಲಿ ಸ್ಥಾಪಿತವಾದ ಅಂತರರಾಷ್ಟ್ರೀಯ ಡಾರ್ಕ್ ಸ್ಕೈ ಅಸೋಸಿಯೇಷನ್, 1993 ರಲ್ಲಿ ಮೊದಲ ಬಾರಿಗೆ ಅಮೆರಿಕದ ಮಿಚಿಗನ್ ಲೇಕ್ ಹಡ್ಸನ್‌ನ ಸ್ಟೇಟ್ ರಿಕ್ರಿಯೇಶನ್ ಪ್ರದೇಶದಲ್ಲಿ 'ಡಾರ್ಕ್ ಸ್ಕೈ ಪ್ರಿಸರ್ವ್' ಎಂಬ ಭೂ ಪ್ರದೇಶವನ್ನು ಗೊತ್ತುಪಡಿಸಿತು. ನಂತರ 1999 ರಲ್ಲಿ, ದಕ್ಷಿಣ ಒಂಟಾರಿಯೊದ ಮುಸ್ಕೋಕಾ ಪ್ರದೇಶದ ಟೊರೆನ್ಸ್ ಬ್ಯಾರೆನ್‌ನಲ್ಲಿ ಮೊದಲ ಶಾಶ್ವತ ಡಾರ್ಕ್ ಸ್ಕೈ ಸಂರಕ್ಷಣ ತಾಣವನ್ನು ಸ್ಥಾಪಿಸಲಾಯಿತು.

ಜಾಗತಿಕವಾಗಿ ಒಟ್ಟು 195 ಪ್ರದೇಶಗಳನ್ನು ಅಂತರರಾಷ್ಟ್ರೀಯ ಡಾರ್ಕ್ ಸ್ಕೈ ಸ್ಥಳಗಳೆಂದು ಗುರುತಿಸಲಾಗಿದ್ದು, ಅದರಲ್ಲಿ 20 ಸ್ಥಳಗಳಲ್ಲಿ ಸಂರಕ್ಷಿತ ತಾಣಗಳನ್ನು ನಿರ್ಮಿಸಲಾಗಿದೆ. ಬ್ರಿಟನ್‌ನಲ್ಲಿ ಏಳು, ಫ್ರಾನ್ಸ್‌ನಲ್ಲಿ ನಾಲ್ಕು, ಅಮೆರಿಕ ಮತ್ತು ಜರ್ಮನಿಯಲ್ಲಿ ತಲಾ ಎರಡು, ನ್ಯೂಜಿಲೆಂಡ್, ಕೆನಡಾ, ನಮೀಬಿಯಾ, ಆಸ್ಟ್ರೇಲಿಯಾ ಮತ್ತು ಭಾರತದಲ್ಲಿ ತಲಾ ಒಂದು ಡಾರ್ಕ್ ಸ್ಕೈ ಪಾರ್ಕ್‌ಗಳಿವೆ.



ಸಾಂದರ್ಭಿಕ ಚಿತ್ರ

ನಿಮ್ಮ ಸಂವಹನ ನಿಮ್ಮ ಶಕ್ತಿ

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ–9

ಡಾ. ನಿರಂಜನ ವಾನಳ್ಳಿ

ಸಂವಹನದ ಬಗ್ಗೆ ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳಲ್ಲಿ ಸಂವಹನದ ಪ್ರಕ್ರಿಯೆಯ ಕುರಿತಾಗಿ ಪ್ರಶ್ನೆ ಇದ್ದೇ ಇರುತ್ತದೆ. ಸಂವಹನ ಹೇಗೆ ನಡೆಯುತ್ತದೆ ಎಂದು ತಿಳಿದುಕೊಳ್ಳುವುದು ಸಂವಹನ ಕೌಶಲವನ್ನು ಸುಧಾರಿಸಿಕೊಳ್ಳಲು ಕೂಡಾ ಅಗತ್ಯ. ಎಲ್ಲರಿಗೂ ಸಂವಹನ ಬೇಕಾದುದಾದರೂ ಎಲ್ಲರಲ್ಲೂ ಅದು ಒಂದೇ ಮಟ್ಟದಲ್ಲಿ ಇರುವುದಿಲ್ಲ. ಸಂವಹನದ ನಮ್ಮ ನ್ಯೂನತೆಗಳನ್ನು ಅರ್ಥೈಸಿಕೊಂಡರೆ ಯಾವ ವಯಸ್ಸಿನಲ್ಲಾದರೂ ನಮ್ಮ ಸಂವಹನ ಕಲೆಯನ್ನು ಉತ್ತಮಪಡಿಸಿಕೊಳ್ಳಬಹುದು.

ಸಂವಹನದ ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡಿದವರಲ್ಲಿ ಅರಿಸ್ಟಾಟಲ್ ಮೊದಲಿಗರು. ಅವರು ಸಾರ್ವಜನಿಕ ಭಾಷಣದ ಪ್ರಕ್ರಿಯೆಯನ್ನು ಸೈದ್ಧಾಂತಿಕವಾಗಿ ವಿವರಿಸಲು ಪ್ರಯತ್ನಿಸಿದರು. ಅವರ ಪ್ರಕಾರ ನಾಲ್ಕೇ ಅಂಶಗಳು ಭಾಷಣದ ಪ್ರಕ್ರಿಯೆಯಲ್ಲಿರುವುದು. ಭಾಷಣ ಮಾಡುವವ (Source), ಭಾಷಣ ಕೇಳುವವರು (Receiver), ಭಾಷಣಕ್ಕೊಂದು ವಸ್ತು(Message) ಮತ್ತು ಅದನ್ನು ಕಳಿಸಲು ಒಂದು ವಾಹಿನಿ (Medium). ಇದು ಮುಂದೆ ಎಸ್‌ಎಂಸಿಆರ್ ಮಾದರಿ ಎಂಬುದಾಗಿ ಪ್ರಸಿದ್ಧವಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂವಹನದ ಪ್ರಭಾವ ಈ ನಾಲ್ಕು ಅಂಶಗಳ ಮೇಲೂ ನಿಂತಿರುತ್ತದೆ. ಯಾವುದೇ ಒಂದು ಅಂಗ ಬಡವಾದರೂ ಸಂವಹನ ಸೊರಗುತ್ತದೆ.

ಉದಾಹರಣೆಗೆ, ಮಾತನಾಡುವವನಿಗೆ ಧ್ವನಿ ಸಮಸ್ಯೆ ಇದ್ದರೆ, ತೊದಲುವ ಸಮಸ್ಯೆ ಇದ್ದರೆ ಅವನು ಹೇಳಿದ್ದು ಸರಿಯಾಗಿ ಕೇಳಿಸದು. ಹೇಳುವವ ಸರಿ ಇದ್ದರೂ ಕೇಳುವವನಿಗೆ ಕಿವಿ ಮಂದವಾಗಿದ್ದರೆ ಸಂವಹನ ತಲುಪದು. ನೀವು ಸಂತೆಯಲ್ಲಿ ನಿಂತು ಮೊಬೈಲಿನಿಂದ ಕರೆ ಮಾಡಲು ಪ್ರಯತ್ನಿಸಿ. ಆ ಕಡೆಯಿಂದ ಏನು ಹೇಳುವರೆಂದು ಕೇಳುವುದೇ ಇಲ್ಲ. ಅದು ರಿಸೀವರ್‌ನ ಸಮಸ್ಯೆ. ಹೇಳುವವರು ಕೇಳುವವರು ಇಬ್ಬರೂ ಸರಿಯಿದ್ದಾಗಲೂ ವಾಹಿನಿಯ ಸಮಸ್ಯೆ ಇರಬಹುದು. ಕೆಲವೊಮ್ಮೆ ಬೇಕಾದ ಸಮಯಕ್ಕೇ ಮೈಕು ಕೈಕೊಡುತ್ತದೆ ಅಥವಾ ಮೈಕಿನಿಂದ ಹೊರಡುವ ಕಿರ್ ಎಂಬ ಸದ್ದು ನಿಮ್ಮ ಸಂದೇಶವನ್ನೇ ಅಳಿಸಿಹಾಕಿಬಿಡುತ್ತದೆ. ಇವೆಲ್ಲವೂ ಸರಿಯಿದ್ದಾಗ ಸಂದೇಶವೇ ಪ್ರಧಾನ. ನೀವು ಹೇಳಲಿರುವ ವಿಷಯ ಕಬ್ಬಿಣದ ಕಡಲೆಯಾಗಿ ಕಾಣಬಹುದು. ಕೇಳುಗರಿಗೆ ಇಷ್ಟವಾಗಿರದ ಸಂಗತಿಯಾಗಿರಬಹುದು. ಅವರ ಭಾಷೆಯೇ ಬೇರೆಯಾಗಿದ್ದು ನಿಮ್ಮ ಸಂದೇಶ ಅರ್ಥವಾಗದಿರಬಹುದು. ಆಗೆಲ್ಲ ನಿಮ್ಮ ಸಂದೇಶಕ್ಕೆ ಸಿಗಬೇಕಾದ ಪ್ರತಿಕ್ರಿಯೆ ಸಿಗುವುದಿಲ್ಲ.

ಹೀಗೆ ಒಂದು ಯಶಸ್ವಿ ಸಂವಹನಕ್ಕೆ ಅನೇಕ ವಿಘ್ನಗಳು. ಆಗ ನಿಮ್ಮ ಬುದ್ಧಿವಂತಿಕೆ, ಪ್ರಜ್ಞಾವಂತಿಕೆ ಎಲ್ಲವೂ ಸರಿಯಾಗಿದ್ದೂ, ಸಂವಹನವನ್ನು ರೂಢಿಸಿಕೊಳ್ಳದ ಕಾರಣದಿಂದ ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದಂತೆ ಆಗುತ್ತದೆ. ಬರಹದಲ್ಲಾಗಲೀ ಮಾತಿನಲ್ಲಾಗಲೀ, ಪರೀಕ್ಷೆಯಾಗಲೀ ದೈನಂದಿನ ವ್ಯವಹಾರಗಳಲ್ಲಾಗಲೀ ಸಂವಹನ ಉಂಟುಮಾಡುವ ವ್ಯತ್ಯಾಸಗಳ ಬಗ್ಗೆ ಎಚ್ಚರಿಕೆಯಿಂದ ಇರುವುದು ಅಗತ್ಯ. ಪ್ರಜ್ಞಾಪೂರ್ವಕವಾಗಿ ನಮ್ಮ ಸಂವಹನವನ್ನು ಉತ್ತಮಪಡಿಸಿಕೊಳ್ಳಲು ನಿರಂತರ ಪ್ರಯತ್ನವೂ ಬೇಕು. ಉತ್ತರ ಪತ್ರಿಕೆಗಳಲ್ಲಾಗಲೀ ಸಂದರ್ಶನದಲ್ಲಾಗಲೀ ಸಂವಹನದ ಮೂಲಕ ಅಭ್ಯರ್ಥಿಯ ನೈಜ ದರ್ಶನವಾಗುತ್ತದೆ. ಬರೆದ ವ್ಯಕ್ತಿ ಎದುರಿಗೆ ಇರದ ಸಂದರ್ಭದಲ್ಲೂ ಅವನ ಉತ್ತರ ಅವನನ್ನು ಪರೀಕ್ಷಕನಿಗೆ ಪರಿಚಯಮಾಡಿಸಿಕೊಡುತ್ತದೆ. 'You are what you communicate' ಎನ್ನುತ್ತಾರೆ.

ನೀವು ಹೇಗೆ ಸಂವಹನ ಮಾಡುತ್ತೀರೋ ಆ ಮೂಲಕ ನಿಮ್ಮನ್ನು ಜಗತ್ತಿಗೆ ಪ್ರಕಟಪಡಿಸಿಕೊಳ್ಳುತ್ತೀರಿ. ಒಮ್ಮೆ ಒಂದು ಭಾವನೆ ಬಂದ ಮೇಲೆ ಅಥವಾ ಪೂರ್ವಾಗ್ರಹ ಬಂದುಬಿಟ್ಟರೆ ಅದನ್ನು ಅಳಿಸುವುದು ಕಷ್ಟ. ಆಗ ಮೊದಲಿಗಿಂತ ಪರಿಣಾಮಕಾರಿ ಸಂವಹನ, ಅದೂ ಪದೇ ಪದೇ ಭಿನ್ನ ಭಾವನೆಯನ್ನು ಹುಟ್ಟುಹಾಕಲು ಸಾಧ್ಯವಾಗಬೇಕು. ಪರೀಕ್ಷೆಗಳಲ್ಲಿ ಮೊದಲ ಪ್ರಶ್ನೆಗೇ ಉತ್ತರ ಅಸಂಬದ್ಧವಾಗಿದ್ದರೆ ಮುಂದೆ ಸರಿ ಉತ್ತರಗಳನ್ನು ಬರೆದರೂ ಮೊದಲ ಉತ್ತರದ ಪ್ರಭಾವ ಮುಂದಿನ ಸರಿಯುತ್ತರಗಳನ್ನೂ ಅನುಮಾನಿಸುವಂತೆ ಮಾಡುತ್ತದೆ. ನಿಮ್ಮ ಮೊದಲ ಉತ್ತರ ಸರಿಯಾಗಿರಬೇಕು ಹಾಗೂ ಅದರ ಸಕಾರಾತ್ಮಕ ಪರಿಣಾಮ ಮುಂದಿನ ಉತ್ತರಗಳ ಬಗ್ಗೆಯೂ ಸದಭಿಪ್ರಾಯ ಮೂಡಿಸಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

9) ಬ್ರಿಟಿಷ್‌ರ ವಿರುದ್ಧ ಧೋಂಡಿಯಾ ವಾಘ್‌ನ ಹೋರಾಟದ ಬಗ್ಗೆ ಬರೆಯಿರಿ

ಉತ್ತರ:- ಧೋಂಡಿಯಾ ವಾಘ್ ನನ್ನು ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷರು ಈತನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರು. ಇದಾದ ಬಳಿಕ ಇವನು ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು. ಆತನ ಸೈನ್ಯ ದೊಡ್ಡದಾಗಿರಲಿಲ್ಲ. ಅವನು ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು. ಧೋಂಡಿಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಲಾಯಿತು. ಧೋಂಡಿಯಾ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ಧೋಂಡಿಯಾ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನ ಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿದಾಗ ಧೋಂಡಿಯಾ ಮರಾಠರ ಪ್ರದೇಶಕ್ಕೆ ಓಡಿಹೋದನು. ಮರಾಠ ಸೈನ್ಯ ಅವನನ್ನು ಸೋಲಿಸಿ ಅವನ ಶಸ್ತ್ರಾಸ್ತ್ರಗಳು, ಒಂಟೆ ಮತ್ತು ಆನೆಗಳನ್ನು ವಶಪಡಿಸಿಕೊಂಡರೂ ಧೃತಿಗೆಡದ ಧೋಂಡಿಯಾ ತನ್ನ ಹೋರಾಟವನ್ನು ಮುಂದುವರಿಸಿದನು. ಅನೇಕ ಅತೃಪ್ತ ಪಾಳೆಯಗಾರರು ಧೋಂಡಿಯಾನಿಗೆ ಪ್ರೋತ್ಸಾಹಿಸಿದರು. ಮಲಬಾರಿನ ಮಾಹೆಯಲ್ಲಿದ್ದ ಫ್ರೆಂಚರು ಆತನಿಗೆ ಸಹಾಯ ಹಸ್ತವನ್ನು ನೀಡಿದರು. ಹರಿಹರ, ಚಿತ್ರದುರ್ಗ, ಶಿಕಾರಿಪುರ, ಸವಣೂರು, ರಾಣೆಬೆನ್ನೂರು, ಕಿತ್ತೂರು ಮತ್ತು ಲೋಂಡಾ ಹೀಗೆ ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು. ಶಿರಹಟ್ಟಿಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ಬ್ರಿಟಿಷ್ ಸೈನ್ಯ ಧೋಂಡಿಯಾನ ಸೈನ್ಯದ ಅನೇಕ ಸೈನಿಕರನ್ನು ಸಾಯಿಸಿತು. ಧೋಂಡಿಯಾ ವಾಘ್‌ನ ಅಂತ್ಯವನ್ನು ಹಾಡಲು ಲಾರ್ಡ್ ವೆಲ್ಲೆಸ್ಲಿ ನಿರ್ಧರಿಸಿ ದೇಶಿಯ ಸಂಸ್ಥಾನಗಳ ರಾಜರ ಸಹಾಯವನ್ನು ಕೋರಿನು. ಶಿಕಾರಿಪುರದ ಕೋಟೆಯನ್ನು ಪುನಃ ಗೆದ್ದುಕೊಂಡ ಧೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು. ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದ ವಿಶಾಲ ಭೂಪ್ರದೇಶದಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿದ್ದ ಧೋಂಡಿಯಾನ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು. ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು. ರಾಯಚೂರಿನಿಂದ ಹೊರಟ ಅವನನ್ನು ಹಿಂಬಾಲಿಸಲಾಯಿತು. ನಿಜಾಮ ಮತ್ತು ಮರಾಠರ ಸೈನ್ಯದ ನಡುವೆ ಸಿಲುಕಿದ ಧೋಂಡಿಯಾನ ನೇತೃತ್ವದಲ್ಲಿನ ಸೈನ್ಯದ ಮೇಲೆ ಬ್ರಿಟಿಷರು ಯಾಪಲಪೆರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋನ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು. ತಮ್ಮ ನಾಯಕನ ಹತ್ಯೆಯ ನಂತರ ಅಳಿದುಳಿದ ಸೈನಿಕರು ಚದುರಿದರು. ಬಂಡುಕೋರರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಬ್ರಿಟಿಷರು ವಶಪಡಿಸಿಕೊಂಡರು. ಆದರೆ ಈ ಘಟನೆಯು ಇಡಿ ದೇಶಕ್ಕೆ ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರಣೆ ನೀಡಿತು.

10) ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ

ಉತ್ತರ:- ಮಂದಗಾಮಿಗಳ ಮೃದು ಧೋರಣೆಯಿಂದ ಕಾಂಗ್ರೆಸಿಗರಲ್ಲೇ ಅಸಂತುಷ್ಟರಾಗಿದ್ದ ಗುಂಪು ಮಂದಗಾಮಿಗಳನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆದರು. ಮಂದಗಾಮಿಗಳ ಮೃದುಧೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಇತಿಹಾಸದಲ್ಲಿ ಗುರುತಿಸಲಾಗಿದೆ. ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್ ಮುಂತಾದವರು ಈ ಬಣದ ಪ್ರಮುಖರಾಗಿದ್ದರು.

ತೀವ್ರವಾದಿಗಳು ಉತ್ತಮ ಆಳ್ವಿಕೆಯು ಎಂದೂ ಕೂಡ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದರು. ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು. ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು. ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.

ಈ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು ತಿಲಕರು ಮರಾಠ ಮತ್ತು ಕೇಸರಿ ಪತ್ರಿಕೆಗಳ ಮೂಲಕ ಬ್ರಿಟಿಷರ ವಿರುದ್ಧ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು

ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು. ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು. ಇವರುಗಳು ರಹಸ್ಯ ಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದರು. 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ಇಂತಹ ರಹಸ್ಯ ಸಂಘಟನೆಗಳಲ್ಲಿ ಮುಖ್ಯವಾದವು. ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು. ಸರ್ಕಾರವು ಇವರನ್ನು ಹತ್ತಿಕ್ಕುವ ಸರ್ವ ಪ್ರಯತ್ನವನ್ನು ಮಾಡಿತು. ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು.

ವಿನಾಯಕ ದಾಮೋದರ ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಘೋಷ್, ಮೆಡಮ್ ಕಾಮ್, ಖುದಿರಾಮ್ ಬೋಸ್, ರಾಮಪ್ರಸಾದ್ ಬಿಸ್ಮಿಲ್,ಭಗತ್ ಸಿಂಗ್, ಚಂದ್ರಶೇಖರ ಅಜಾದ್ -ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ — ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತ ಶಾಸ್ತ್ರ

ಪಿಯುಸಿ

18) **$f(x) = 3 + |x|$, $x \in R$ ಉತ್ಪನ್ನದ, ಸ್ಥಳೀಯ ಕನಿಷ್ಠ ಬೆಲೆಯನ್ನು ಕಂಡುಹಿಡಿಯಿರಿ.**

ಉತ್ತರ:– ದತ್ತ ಉತ್ಪನ್ನವು, $x=0$ ಬಿಂದುವಿನಲ್ಲಿ ನಿಶ್ಪನ್ನವಾಗುವುದಿಲ್ಲ ಎಂಬುದನ್ನು ಗಮನಿಸಿದಾಗ. ಎರಡನೆಯ ನಿಶ್ಪನ್ನದ ಪರೀಕ್ಷೆ ವಿಫಲವಾಗುತ್ತದೆ. ಈಗ ಮೊದಲನೆಯ ನಿಶ್ಪನ್ನದ ಪರೀಕ್ಷೆಯನ್ನು ಪ್ರಯತ್ನಿಸಿದಾಗ. 0 ಬಿಂದುವು f ನ ನಿರ್ಣಾಯಕ ಬಿಂದುವಾಗಿದೆ.



0ನ ಎಡಕ್ಕೆ $f(x) = 3 - x$. ಆದರಿಂದ, $f'x = 1 - < 0$ ಮತ್ತು

0ನ ಬಲಕ್ಕೆ $fx = 3 + x$. ಆದ್ದರಿಂದ $f'x = 1 > 0$

ಆದ್ದರಿಂದ $x = 0$ ಬಿಂದುವು ಸ್ಥಳೀಯ ಕನಿಷ್ಠ ಬೆಲೆಯ ಬಿಂದುವಾಗಿದೆ ಮತ್ತು ಸ್ಥಳೀಯ ಕನಿಷ್ಠ ಬೆಲೆಯು $f(0) = 3$.

19) ಎರಡು ಧನಾತ್ಮಕ ಸಂಖ್ಯೆಗಳ ಮೊತ್ತ 15. ಅವುಗಳ ವರ್ಗಗಳ ಮೊತ್ತ ಕನಿಷ್ಠವಾಗಬೇಕಾದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಉತ್ತರ: ಆ ಸಂಖ್ಯೆಗಳ ಪೈಕಿ, ಒಂದು x ಇರಲಿ, ಮತ್ತೊಂದು ಸಂಖ್ಯೆ $15 - x$ ಆಗಿರುತ್ತದೆ.

ಅವುಗಳ ವರ್ಗಗಳ ಮೊತ್ತವು $S(x)$ ಆಗಿರಲಿ. ಆಗ

$$s(x) = x^2 + (15 - x)^2 = 2x^2 - 30x + 225$$

ಅಥವಾ $\begin{cases} s'(x) = 4x - 30 \\ s''(x) = 4 \end{cases}$

$s'(x) = 0$ ಆದಾಗ $x = \frac{15}{2}$, ಮತ್ತು $s''\left(\frac{15}{2}\right) = 4 > 0$

∴ಎರಡನೆಯ ನಿಶ್ಪನ್ನದ ಪರೀಕ್ಷೆಯಿಂದ, $x = \frac{15}{2}$ ಸ್ಥಳೀಯ ಕನಿಷ್ಠ ಬೆಲೆಯ ಬಿಂದುವಾಗಿರುತ್ತದೆ. ಆದ್ದರಿಂದ ಸಂಖ್ಯೆಗಳು, $\frac{15}{2}$ ಮತ್ತು $15 - \frac{15}{2} = \frac{15}{2}$ ಆದಾಗ, ವರ್ಗಗಳ ಮೊತ್ತವು ಕನಿಷ್ಠವಾಗಿರುತ್ತದೆ

20) A ಮತ್ತು B ಬಿಂದುಗಳಲ್ಲಿ, AP ಮತ್ತು BQ, ಎರಡು ಲಂಬ ಕಂಬಗಳಿದ್ದು, AP = 16ಮೀ, BQ = 22ಮೀ, ಮತ್ತು AB = 20ಮೀ R ಎಂಬುದು AB ಮೇಲಿನ ಒಂದು ಬಿಂದು. $RP^2 + RQ^2$ ಬೆಲೆಯು ಕನಿಷ್ಠವಾಗಬೇಕಾದರೆ, R ಬಿಂದುವಿನಿಂದ A ಬಿಂದುವಿಗೆ ಇರಬೇಕಾದ ದೂರವನ್ನು ಕಂಡುಹಿಡಿಯಿರಿ

ಉತ್ತರ:– R ಎಂಬುದು ABಯ ಮೇಲಿನ ಬಿಂದು ಮತ್ತು



$AR = x$ ಆಗಿರಲಿ. ಆದ್ದರಿಂದ $RB = (20 - x)$.

$RP^2 = AR^2 + AP^2$ ಮತ್ತು $RQ^2 = RB^2 + BQ^2$

ಆದ್ದರಿಂದ $RP^2 + RQ^2 = AR^2 + AP^2 + RB^2 + BQ^2$

$= x^2 + (16)^2 + (20 - x)^2 + (22)^2$

$= 2x^2 - 40x + 1140$

$S = S(x) = 2x^2 - 40x + 1140$ ಆಗಿರಲಿ

$\therefore S'(x) = 4x - 40 = -$ ಮತ್ತು $S''(x) = 4$

ಈಗ $S'(x) = 0 = -$ ಆದಾಗ $x = 10$ ಮತ್ತು $S'(10) = 4 > 0$

ಆದ್ದರಿಂದ ಎರಡನೆಯ ನಿಶ್ಪನ್ನದ ಪರೀಕ್ಷೆಯಿಂದ, $x = 10$ ಎಂಬುದು S ನ ಸ್ಥಳೀಯ ಕನಿಷ್ಠ ಬೆಲೆಯ ಬಿಂದು. ಆದ್ದರಿಂದ R ನಿಂದ A ಗೆ ಕನಿಷ್ಠ ದೂರವು $AR = x = 10$ಮೀ.

21) ಒಂದು ಅಪಾಚಿ ಹೆಲಿಕಾಪ್ಟರ್ ಹಾರುತ್ತಿರುವ ವಕ್ರ ರೇಖೆಯ ಸಮೀಕರಣವು $y = x^2 + 7$. (3, 7) ಬಿಂದುವಿನಲ್ಲಿ ಇರುವ ಒಬ್ಬ ಸಿಪಾಯಿಯು, ಹೆಲಿಕಾಪ್ಟರ್ ತನ್ನಿಂದ ಅತ್ಯಂತ ಹತ್ತಿರದಲ್ಲಿದ್ದಾಗ ಶೂಟ್ ಮಾಡಲು ಬಯಸುತ್ತಾನೆ. ಆ ಕನಿಷ್ಟ ದೂರವನ್ನು ಕಂಡುಹಿಡಿಯಿರಿ.

ಉತ್ತರ:– x ನ ಪ್ರತಿಯೊಂದು ಬೆಲೆಗೆ, ಹೆಲಿಕಾಪ್ಟರ್ ಇರುವ ಬಿಂದುವು $(x, x^2 + 7)$ ಆಗಿರುತ್ತದೆ. ಆದ್ದರಿಂದ ಸಿಪಾಯಿ ಹಾಗೂ ಹೆಲಿಕಾಪ್ಟರ್ ನಡುವೆ ಇರುವ ದೂರವು

$$\sqrt{(x-3)^2 + (x^2 + 7 - 7)^2} = \sqrt{(x-3)^2 + x^4}$$

$f'(x) = (x - 3)^2 + x^4$ ಆಗಿರಲಿ

ಅಥವಾ

$$f'(x) = 2(x - 3) + 4x^3 = 2(x - 1)(2x^2 + 2x + 3)$$

ಆದ್ದರಿಂದ

$f'(x) = 0$ ಆದಾಗ $x = 1$. ಏಕೆಂದರೆ $2x^2 + 2x + 3 = 0$ ಸಮೀಕರಣಕ್ಕೆ ವಾಸ್ತವ ಮೂಲಗಳಿರುವುದಿಲ್ಲ, ಹಾಗೂ ಅಂತರಾಳದ ಯಾವುದೇ ತುದಿ ಬಿಂದುಗಳಿರುವುದಿಲ್ಲ. ಆದ್ದರಿಂದ $x = 1$, ಏಕಮಾತ್ರ ನಿರ್ಣಾಯಕ ಬಿಂದು.

ಈ ಬಿಂದುವಿನಲ್ಲಿ $f(1) = (1 - 3)^2 + (1)^4 = 5$. ಆದ್ದರಿಂದ ಸಿಪಾಯಿ ಹಾಗೂ ಹೆಲಿಕಾಪ್ಟರ್ ನಡುವಿನ ದೂರವು $\sqrt{f(1)} = \sqrt{5}$

$\sqrt{5}$ ಗರಿಷ್ಟ ಅಥವಾ ಕನಿಷ್ಠ ಬೆಲೆ ಆಗಬಹುದು. ಆದರೆ

$$\sqrt{f(0)} = \sqrt{(0-3)^2 + 0^4} = 3 \rangle \sqrt{5}$$

ಆದ್ದರಿಂದ $\sqrt{5}$, $\sqrt{fx}$ ಕನಿಷ್ಠ ದೂರವಾಗಿರುತ್ತದೆ. ಆದ್ದರಿಂದ ಸಿಪಾಯಿ ಮತ್ತು ಹೆಲಿಕಾಪ್ಟರ್ ನಡುವಿನ ಕನಿಷ್ಟ ದೂರವು $\sqrt{5}$.

ಒಂದೇ ಬಡ್ತಿಗೆ ಎರಡು ಬಾರಿ ಸಂದರ್ಶನ • ಮೊದಲ ಅವಕಾಶಕ್ಕೂ ವಿಘ್ನ

ಸಹ ಪ್ರಾಧ್ಯಾಪಕರಿಗೆ ದಕ್ಕದ 'ಪ್ರೊಫೆಸರ್' ಗಿರಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಒಂದೇ ಬಡ್ತಿಗೆ ಎರಡು ಬಾರಿ ಸಂದರ್ಶನ ನಡೆಸಿದರೂ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಹ ಪ್ರಾಧ್ಯಾಪಕರಿಗೆ 'ಪ್ರೊಫೆಸರ್'ಗಳಾಗುವ (ಪ್ರಾಧ್ಯಾಪಕ) ಯೋಗ ಕೂಡಿಬಂದಿಲ್ಲ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳ ಅನ್ವಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಶೇ 10ರಷ್ಟು ಸಹ ಪ್ರಾಧ್ಯಾಪಕರನ್ನು ಪ್ರಾಧ್ಯಾಪಕರ ಹುದ್ದೆಗೆ ಪರಿಗಣಿಸಲು ಇದೇ ಮೊದಲ ಬಾರಿ ಸರ್ಕಾರ ಅವಕಾಶ ಕಲ್ಪಿಸಿತ್ತು.

2018ರಲ್ಲೇ ಬಡ್ತಿ ನೀಡುವ ಪ್ರಕ್ರಿಯೆ ಆರಂಭಿಸಲಾಗಿತ್ತು. ಅರ್ಹತೆ ಇರುವವರು ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರತಿಗಳನ್ನು ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿತ್ತು. ದಾಖಲೆ ಸಲ್ಲಿಸಿದ ನಂತರ ಗೂಗಲ್ ಫಾರಂನಲ್ಲಿ ಆನ್‌ಲೈನ್ ಮೂಲಕ ಭರ್ತಿ ಮಾಡುವಂತೆ ಮರು ಆದೇಶ ಹೊರಡಿಸಲಾಗಿತ್ತು.

ಎರಡು ಬಾರಿ ಸಂದರ್ಶನ: ಬಡ್ತಿ ನಿರೀಕ್ಷೆಯಲ್ಲಿದ್ದ ಸಹ ಪ್ರಾಧ್ಯಾಪಕರು ದಾಖಲೆಗಳ ಪರೀಶಿಲನೆಗಾಗಿ ವಿಷಯವಾರು ನಿಗದಿಪಡಿಸಿದ ದಿನಾಂಕಗಳಂದು ಬಂದು ಹೋಗಿದ್ದರು. ನಂತರ ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾದವರನ್ನು ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಸಂದರ್ಶನಕ್ಕೆ ಕರೆಯಲಾಗಿತ್ತು. ಹಲವು ವಾರಗಳ ನಡೆದ ಸಂದರ್ಶನ ಪೂರ್ಣಗೊಂಡ ನಂತರ ಯಾವುದೇ ಕಾರಣಗಳನ್ನು ನೀಡದೆ ಉನ್ನತ ಶಿಕ್ಷಣ ಇಲಾಖೆ ಪ್ರಕ್ರಿಯೆಯನ್ನೇ ರದ್ದುಪಡಿಸಿತ್ತು. ಒತ್ತಡ ಹೆಚ್ಚಾದ ನಂತರ ಎರಡು ತಿಂಗಳ ಹಿಂದೆ ಮತ್ತೆ ಅದೇ ಸಹ ಪ್ರಾಧ್ಯಾಪಕರಿಗೆ 2ನೇ ಬಾರಿ ಸಂದರ್ಶನ ನಡೆಸಲಾಗಿತ್ತು. ಆದರೂ, ಬಡ್ತಿ ಆದೇಶ ಹೊರಬಿದ್ದಿಲ್ಲ ಎಂದು ಸಹ ಪ್ರಾಧ್ಯಾಪಕರು ತಮ್ಮ ಅಳಲು ತೋಡಿಕೊಂಡಿದ್ದಾರೆ.

'ನಿಗದಿಪಡಿಸಿದ ಎಲ್ಲ ದಾಖಲೆಗಳನ್ನು ಸಲ್ಲಿಸಿದ್ದೇವೆ. ಒಂದು ಬಾರಿ ದಾಖಲೆಗಳ ಪರಿಶೀಲನೆ, ಎರಡು ಬಾರಿ ಸಂದರ್ಶನಕ್ಕೆ ಹೋಗಿದ್ದೇವು. ಸಂದರ್ಶನಕ್ಕೆ ನಿಯೋಜಿಸಿದ್ದ ಸಂಪನ್ಮೂಲ ವ್ಯಕ್ತಿಗಳೇ ಸರಿ ಇಲ್ಲ ಎಂದು ಆಯುಕ್ತರ ಕಚೇರಿಯಿಂದ ಮೌಖಿಕ ಸೂಚನೆ ನೀಡಲಾಯಿತು. ಮತ್ತೆ ಎರಡನೇ ಬಾರಿ ಸಂದರ್ಶನ ಮುಗಿದು ಎರಡು ತಿಂಗಳಾದರೂ ಮಾಹಿತಿ ಇಲ್ಲ' ಎಂದು ಸಹ ಪ್ರಾಧ್ಯಾಪಕರೊಬ್ಬರು ದೂರಿದರು.

> **ತಾಂತ್ರಿಕ ಕಾರಣಗಳಿಂದ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಲು ಎರಡನೇ ಬಾರಿ ಸಂದರ್ಶನ ನಡೆಸಲಾಗಿದೆ. ಬಡ್ತಿ ಪಟ್ಟಿ ಶೀಘ್ರ ಪ್ರಕಟಿಸಲಾಗುವುದು.**
> **ಪಿ.ಪ್ರದೀಪ್,** ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ

ಪ್ರಜಾವಾಣಿ ವಿಶೇಷ

ಲೇಖನ, ಐಎಸ್‌ಎಸ್‌ಎನ್ ನಂಬರ್‌ಗೂ ಹಣ

ಪ್ರಾಧ್ಯಾಪಕರಾಗಿ ಬಡ್ತಿ ಪಡೆಯಲು ನಿಗದಿ ಪಡಿಸಿರುವ ಅರ್ಹತೆಗಳಲ್ಲಿ ಪಿಎಚ್.ಡಿ ಪದವಿ ದಾಖಲೆಗಳು, ಯುಜಿಸಿಯಿಂದ ಅನುಮೋದಿತವಾದ ಪತ್ರಿಕೆಗಳಲ್ಲಿ ಪ್ರಕಟವಾದ ಐದು ಲೇಖನಗಳನ್ನು ಐಎಸ್‌ಎಸ್‌ಎನ್ (ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಸೀರಿಯಲ್ ನಂಬರ್) ಅಥವಾ ಐಎಸ್‌ಬಿಎನ್ ಸಂಖ್ಯೆ(ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಬುಕ್ ನಂಬರ್) ಸಹಿತ ಸಲ್ಲಿಸಬೇಕು.

ಬಹುತೇಕ ಸಹ ಪ್ರಾಧ್ಯಾಪಕರು ಹಣಕೊಟ್ಟು ತಮ್ಮ ಹೆಸರಿನಲ್ಲಿ ಲೇಖನ ಬರೆಸಿದ್ದಾರೆ. ಐಎಸ್‌ಎಸ್‌ಎನ್ ಸಂಖ್ಯೆ ಇರುವ ಪ್ರಮಾಣಪತ್ರ ಪಡೆದಿದ್ದಾರೆ. ಈ ರೀತಿ ಲೇಖನ ಬರೆಸಿಕೊಡುವ, ಐಎಸ್‌ಎಸ್‌ಎನ್ ಸಂಖ್ಯೆಯ ಪ್ರಮಾಣಪತ್ರ ಕೊಡಿಸುವ ದೊಡ್ಡ ಜಾಲವೇ ರಾಜ್ಯದಲ್ಲಿದೆ. ಕೆಲವು ಪ್ರಾಧ್ಯಾಪಕರು ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ಲೇಖನ ಪ್ರಕಟಗೊಳ್ಳಲು ₹ 10 ಸಾವಿರದಂತೆ ಐದು ಲೇಖನಗಳಿಗೆ ₹ 50 ಸಾವಿರ ಪಡೆಯಲಾಗುತ್ತಿದೆ ಎಂಬ ಆಕ್ಷೇಪಗಳಿವೆ. ಈ ಕುರಿತು ಕೆಲ ಸಹಪ್ರಾಧ್ಯಾಪಕರು ಮಧ್ಯವರ್ತಿಗಳ ಜತೆ ಸಂಭಾಷಣೆ ನಡೆಸಿರುವ ಆಡಿಯೊ ಸಂಭಾಷಣೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

'ಇದೇ ಮೊದಲ ಬಾರಿಗೆ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರಿಗೆ ಪ್ರೊಫೆಸರ್‌ಗಳಾಗುವ ಅವಕಾಶ ಸಿಕ್ಕಿದೆ. ಬಡ್ತಿಗಾಗಿ ಬಹುತೇಕ ಸಹೋದ್ಯೋಗಿಗಳು ಲಕ್ಷಗಟ್ಟಲೆ ಹಣಕೊಟ್ಟು ಪಿ.ಎಚ್‌ಡಿ ಪಡೆದಿದ್ದಾರೆ. ದಶಕಗಳಿಂದ ಒಂದು ಲೇಖನ ಬರೆಯಲು ಮನಸ್ಸು ಮಾಡದವರು ವಾಮಮಾರ್ಗದ ಮೂಲಕ ದಾಖಲೆ ಸಂಗ್ರಹಿಸಿದ್ದಾರೆ. ಶ್ರಮ ಪಡದೆ ಎಲ್ಲವನ್ನೂ ಪಡೆಯಲು ಬಯಸುತ್ತಾರೆ. ಮಧ್ಯವರ್ತಿಗಳಿಗೆ ಒಂದು ವರ್ಷದಿಂದ ಸಾಕಷ್ಟು ಹಣ ನೀಡಿದ್ದಾರೆ' ಎನ್ನುತ್ತಾರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜೊಂದರ ಹೆಸರು ಹೇಳಲು ಇಚ್ಛಿಸದ ಸಹ ಪ್ರಾಧ್ಯಾಪಕ.

ಅಂಕಿ-ಅಂಶಗಳು

430 ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳು

9,000 ಕಾಯಂ ಬೋಧಕ ಸಿಬ್ಬಂದಿ

3,690 ಸಹ ಪ್ರಾಧ್ಯಾಪಕರು

369 ಪ್ರಾಧ್ಯಾಪಕರಾಗುವ ನಿರೀಕ್ಷೆಯಲ್ಲಿ ಇರುವವರು

'ವೇದ' ಚಿತ್ರದ ಪ್ರಚಾರಕ್ಕಾಗಿ ಹುಬ್ಬಳ್ಳಿಗೆ ಬುಧವಾರ ಬಂದಿದ್ದ ನಟ ಶಿವರಾಜಕುಮಾರ್ ಮತ್ತು ಪತ್ನಿ ಗೀತಾ ಅವರು ಸಿದ್ಧಾರೂಢ ಮಠಕ್ಕೆ ಭೇಟಿ ನೀಡಿ ಗದ್ದುಗೆಯ ದರ್ಶನ ಪಡೆದರು – ಪ್ರಜಾವಾಣಿ ಚಿತ್ರ

'ಒಂದೇ ಪ್ರಶ್ನೆಪತ್ರಿಕೆ: 2 ಭಾಷೆಯಲ್ಲಿ ಉತ್ತರಿಸಿ'

ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆ • ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಒಂದು ವಿಷಯದ ಪ್ರಶ್ನೆಪತ್ರಿಕೆಗೆ ಉತ್ತರ ಬರೆಯುವಾಗ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳನ್ನೂ ಬಳಸುವ ಅವಕಾಶ ನೀಡಲು ಉನ್ನತ ಶಿಕ್ಷಣ ಪರಿಷತ್ ತೀರ್ಮಾನಿಸಿದೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಪರಿಷತ್ತಿನ 23ನೇ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಭೆ ಬಳಿಕ ಮಾತನಾಡಿದ ಸಚಿವ ಅಶ್ವತ್ಥನಾರಾಯಣ, 'ಉನ್ನತ ಶಿಕ್ಷಣದಲ್ಲಿ ಮಾತೃಭಾಷೆ ಕನ್ನಡದ ಬಳಕೆಯನ್ನು ಗರಿಷ್ಠ ಪ್ರಮಾಣದಲ್ಲಿ ಉತ್ತೇಜಿಸಲು ಇಂತಹ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದರು.

ಇಲ್ಲಿಯವರೆಗೆ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಯಾವುದೇ ವಿಷಯದ ಪರೀಕ್ಷೆ ಬರೆಯುವಾಗ, ಕನ್ನಡ ಅಥವಾ ಇಂಗ್ಲಿಷ್ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಪರೀಕ್ಷೆ ಬರೆಯುವಾಗ, ಯಾವ ಭಾಷೆಯಲ್ಲಿ ಬರೆದರೆ ಹೆಚ್ಚು ಸೂಕ್ತವೆನಿಸುತ್ತದೆಯೋ ಆ ಭಾಷೆಯಲ್ಲೇ ಉತ್ತರ ಬರೆಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲಾಗುವುದು. ಒಂದು ಪ್ರಶ್ನೆಗೆ ಕನ್ನಡದಲ್ಲಿ, ಮತ್ತೊಂದು ಪ್ರಶ್ನೆಗೆ ಇಂಗ್ಲಿಷ್‌ನಲ್ಲೂ ಉತ್ತರಿಸಬಹುದು. ಪಾಲಿಟೆಕ್ನಿಕ್ ಶಿಕ್ಷಣದಲ್ಲಿ ಈಗಾಗಲೇ ಈ ಸೌಲಭ್ಯ ನೀಡಲಾಗಿದೆ ಎಂದರು.

ಪ್ರಾದೇಶಿಕ ಭಾಷೆಗಳಲ್ಲಿ ಉನ್ನತ ಶಿಕ್ಷಣವನ್ನು ಕಲಿಸಬೇಕೆಂಬ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯವನ್ನು ಅನುಷ್ಠಾನಕ್ಕೆ ತರಲು ಎಲ್ಲ ವಿಷಯಗಳಿಗೆ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುವ ನಿರ್ಣಯ ಕೈಗೊಳ್ಳಲಾಗಿದೆ. ಈ ಕೆಲಸಕ್ಕೆ ಆಧುನಿಕ ತಂತ್ರಜ್ಞಾನದ ನೆರವು ಪಡೆಯುವ ಬಗ್ಗೆ ರೂಪುರೇಷೆ ಸಿದ್ಧಪಡಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದು ಹೇಳಿದರು.

'ಹೊಸದಾಗಿ ಬುಡಕಟ್ಟು ವಿಶ್ವವಿದ್ಯಾಲಯದ ಸ್ಥಾಪನೆಯ ಬದಲಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ಕರ್ನಾಟಕ ರಾಜ್ಯ ಜಾನಪದ ವಿ.ವಿ.ಯಲ್ಲೇ ಬುಡಕಟ್ಟು ಅಧ್ಯಯನಕ್ಕೂ ಸಮರ್ಪಕ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದರು.

ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಶಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ ಹಾಗೂ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬಿಲ್ಕಿಸ್ ಬಾನು ಪ್ರಕರಣ: ಹೊಸ ಪೀಠಕ್ಕೆ ನಕಾರ

ನವದೆಹಲಿ (ಪಿಟಿಐ): ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಆರೋಪಿಗಳ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಗೆ ಶೀಘ್ರವೇ ಹೊಸ ನ್ಯಾಯಪೀಠ ಸ್ಥಾಪಿಸುವಂತೆ ಬಿಲ್ಕಿಸ್ ಬಾನು ಮಾಡಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿದೆ.

'ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಲಾಗುವುದು. ದಯವಿಟ್ಟು ಪದೇ ಪದೇ ಇದೇ ವಿಚಾರ ಪ್ರಸ್ತಾಪಿಸ ಬೇಡಿ. ಅದು ಕಿರಿಕಿರಿ ಉಂಟುಮಾಡುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಅವರು ಬಿಲ್ಕಿಸ್ ಪರ ವಕೀಲೆ ಶೋಭಾ ಗುಪ್ತಾ ಅವರಿಗೆ ತಿಳಿಸಿದರು.

ಟಿಇಟಿ ಫಲಿತಾಂಶ ಪ್ರಕಟ

ಬೆಂಗಳೂರು: 2022ನೇ ಸಾಲಿನ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಫಲಿತಾಂಶವನ್ನು ಬುಧವಾರ ಪ್ರಕಟಿಸಲಾಗಿದೆ.

ಈ ಪರೀಕ್ಷೆಯ ಪತ್ರಿಕೆ–1ಕ್ಕೆ (1ರಿಂದ 5ನೇ ತರಗತಿ ಬೋಧಿಸುವ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ) 1.40 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇವರಲ್ಲಿ 20,070 ಅಭ್ಯರ್ಥಿಗಳು ಅರ್ಹರಾಗಿದ್ದಾರೆ.

ಪತ್ರಿಕೆ 2ಕ್ಕೆ (6ರಿಂದ 8ನೇ ತರಗತಿ ಬೋಧಿಸುವ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ) 1.92 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇವರಲ್ಲಿ 41,857 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಪತ್ರಿಕೆ–1 ಮತ್ತು 2ಕ್ಕೆ ಹಾಜರಾದ ಒಟ್ಟು 3,32,856 ಅಭ್ಯರ್ಥಿಗಳಲ್ಲಿ ಒಟ್ಟು 61,927 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ.

ಈ ಬಾರಿಯ ನ.6 ರಂದು ಎಲ್ಲ ಜಿಲ್ಲೆಗಳಲ್ಲಿ ಟಿಇಟಿ ನಡೆದಿತ್ತು. 39 ದಿನಗಳಲ್ಲಿ ಪರೀಕ್ಷಾ ನಂತರದ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಕೀ ಉತ್ತರಗಳನ್ನು ಆಧರಿಸಿ ಓಎಂಆರ್ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸಲಾಗಿದೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಪತ್ರಿಕೆಗಳಲ್ಲಿ ಶೇ60ರಷ್ಟು ಅರ್ಹತಾ ಅಂಕಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶೇ 55 ಅರ್ಹತಾ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸಲಾಗಿದೆ.

ಗಣಕೀಕೃತ ಅಂಕಪಟ್ಟಿ: ಕನಿಷ್ಠ ಅರ್ಹತಾ ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳಿಗೆ ಕ್ಯೂಆರ್ ಕೋಡ್ ದತ್ತಾಂಶವನ್ನು ಹೊಂದಿರುವ ಗಣಕೀಕೃತ ಅಂಕಪಟ್ಟಿ ವಿತರಿಸಲಾಗುವುದು. ಮುದ್ರಿತ ಅಂಕ ಪಟ್ಟಿ ನೀಡುವುದಿಲ್ಲ. ಅಭ್ಯರ್ಥಿಗಳು ಡಿ.26ರಿಂದ ಶಿಕ್ಷಣ ಇಲಾಖೆಯ http://schooleducation.kar.nic.in ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ ಮೂಲಕ ಪ್ರಮಾಣ ಪತ್ರ ಅಥವಾ ಅಂಕಪಟ್ಟಿ ಪಡೆದುಕೊಳ್ಳಬಹುದು.

310 ಪ್ರಾಂಶುಪಾಲರ ಹುದ್ದೆ ಭರ್ತಿಗೆ ನೇರ ನೇಮಕಾತಿ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೇಡ್‌–1 ಪ್ರಾಂಶುಪಾಲರ 310 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿಗಳನ್ನು ಆಹ್ವಾನಿಸಿದೆ.

45 ಹುದ್ದೆಗಳು ಕಲ್ಯಾಣ ಕರ್ನಾಟಕ ವೃಂದಕ್ಕೆ ಮೀಸಲಾಗಿವೆ. 265 ಹುದ್ದೆಗಳು ರಾಜ್ಯದ ಉಳಿದ ಭಾಗಗಳ ವೃಂದಕ್ಕೆ ಲಭಿಸಲಿವೆ. ಡಿಸೆಂಬರ್ 16ರಿಂದ (ಶುಕ್ರವಾರ) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, 2023ರ ಜನವರಿ 15 ಕೊನೆಯ ದಿನ. ಇ– ಅಂಚೆ ಕಚೇರಿಗಳ ಮೂಲಕ ಶುಲ್ಕ ಪಾವತಿಗೆ ಜ.17 ಕೊನೆಯ ದಿನ ಎಂದು ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಸಾಮಾನ್ಯ ವರ್ಗ, ಪ್ರವರ್ಗ 2–ಎ, 2–ಬಿ, 3–ಎ ಮತ್ತು 3–ಬಿ ಪ್ರವರ್ಗಗಳ ಅಭ್ಯರ್ಥಿಗಳಿಗೆ ₹ 5,000 ಅರ್ಜಿ ಶುಲ್ಕವಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹ 2,500 ಶುಲ್ಕವಿದೆ. ಹೆಚ್ಚಿನ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.inನಲ್ಲಿ ಪಡೆಯಬಹುದು ಎಂದು ಪ್ರಾಧಿಕಾರ ತಿಳಿಸಿದೆ.

ಬಹು ಆಯ್ಕೆಯ ಉತ್ತರಗಳುಳ್ಳ 100 ಪ್ರಶ್ನೆಗಳೊಂದಿಗೆ 100 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗುತ್ತದೆ. ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರ ಹುದ್ದೆಗಳ ನೇಮಕಾತಿ) (ಸ್ನಾತಕ ಶಿಕ್ಷಣ) (ವಿಶೇಷ) ನಿಯಮಗಳು–202ರ ನಿಯಮ 3ರಲ್ಲಿ ನಿಗದಿಪಡಿಸುವ ಅರ್ಹತೆ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ಇದೇ 19ರಿಂದ ಬೆಳಗಾವಿಯಲ್ಲಿ ಅಧಿವೇಶನ

ಹಲಾಲ್ ನಿಷೇಧ: ಖಾಸಗಿ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲಾಲ್' ಲೇಬಲ್ ಹಾಕಿದ ದಿನಸಿ, ಆಹಾರ ಪದಾರ್ಥಗಳ ಮಾರಾಟವನ್ನು ರಾಜ್ಯದಲ್ಲಿ ನಿಷೇಧಿಸಲು ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್, ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲ ಅಧಿವೇಶನದಲ್ಲಿ ಖಾಸಗಿ ಮಸೂದೆ ಮಂಡಿಸಲಿದ್ದಾರೆ.

ಈ ಸಂಬಂಧ ಅವರು ವಿಧಾನಪರಿಷತ್‌ನ ಹಂಗಾಮಿ ಸಭಾಪತಿಯವರಿಗೆ ಬುಧವಾರ ನೋಟಿಸ್ ನೀಡಿದ್ದಾರೆ. 'ಆಹಾರ ಪದಾರ್ಥಗಳ ಮೇಲೆ 'ಹಲಾಲ್' ಲೇಬಲ್ ಹಾಕಿ ಮಾರುವುದನ್ನು ನಿಷೇಧಿಸಬೇಕು. ಇದಕ್ಕಾಗಿ 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ'ಗೆ ಸೂಕ್ತ ತಿದ್ದುಪಡಿ ಅಗತ್ಯವಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಡೆಯಬೇಕಾಗಿದೆ' ಎಂದು ಹೇಳಿದ್ದಾರೆ.

'ಹಲಾಲ್ ಪ್ರಮಾಣಪತ್ರವನ್ನು ಮುಸ್ಲಿಂ ಧಾರ್ಮಿಕ ಸಂಸ್ಥೆಗಳು ನೀಡುತ್ತವೆ. ಇದಕ್ಕೆ ಸರ್ಕಾರದ ಅನುಮತಿ ಪಡೆದಿಲ್ಲ. ಹೀಗೇ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಯಾವುದೇ ಧಾರ್ಮಿಕ ಸಂಸ್ಥೆಗಳಿಗೂ ನೀಡಿಲ್ಲ. ಎಫ್‌ಎಸ್‌ಎಸ್‌ಎಐ ಹೊರತುಪಡಿಸಿ ಬೇರೆ ಯಾವುದೇ ಸಂಸ್ಥೆಗಳೂ ಪ್ರಮಾಣ ಪತ್ರ ನೀಡುವಂತಿಲ್ಲ' ಎಂದು ಅವರು ನೋಟಿಸ್‌ನಲ್ಲಿ ವಿವರಿಸಿದ್ದಾರೆ.

'ಚಾಕೋಲೆಟ್, ಅಕ್ಕಿ, ಬೇಳೆ ಸೇರಿದಂತೆ ಎಲ್ಲ ದಿನಸಿ ಪದಾರ್ಥಗಳ ಪ್ಯಾಕ್‌ಗಳ ಮೇಲೂ ಹಲಾಲ್ ಲೋಗೊ ಹಾಕುವ ಪರಿಪಾಟ ಹೆಚ್ಚಿದೆ. ಪ್ರಮಾಣಪತ್ರವನ್ನು ಅಂಟಿಸುವ ಧಾರ್ಮಿಕ ಸಂಸ್ಥೆಗಳು ಕಂಪನಿಗಳಿಂದ ಕೋಟಿಗಟ್ಟಲೆ ಹಣ ವಸೂಲಿ ಮಾಡುತ್ತವೆ, ಅದನ್ನು ಇಸ್ಲಾಂ ಧಾರ್ಮಿಕ ಉದ್ದೇಶಗಳಿಗೆ ಬಳಸುತ್ತಿವೆ. ಇದು ಕಾನೂನು ಬಾಹಿರ' ಎಂದು ರವಿಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಹಲಾಲ್ ಹಾವಳಿ ಯಾವ ಮಟ್ಟಕ್ಕೆ ಮೇರೆ ಮೀರಿದೆ ಎಂದರೆ, ನೆರೆ ರಾಜ್ಯಗಳಲ್ಲಿ ನರ್ಸಿಂಗ್ ಹೋಂಗಳು ಮತ್ತು ಖಾಸಗಿ ಆಸ್ಪತ್ರೆಗಳ ಮೇಲೂ ಹಲಾಲ್ ಬೋರ್ಡ್ ಹಾಕಿ, ಮುಸ್ಲಿಂ ರೋಗಿಗಳನ್ನು ಆಕರ್ಷಿಸಲಾಗುತ್ತಿದೆ. ಕೆಲ ಔಷಧ ಕಂಪನಿಗಳೂ ಹಲಾಲ್ ಲೇಬಲ್ ಹಾಕಿ ಔಷಧ ಮಾರುತ್ತಿರುವ ಉದಾಹರಣೆಗಳಿವೆ. ದೇಶದಲ್ಲಿ ತಮ್ಮ ಮಾರುಕಟ್ಟೆ ಕುಸಿಯಬಹುದು ಎಂಬ ಭೀತಿಯಿಂದ ದೇಶದೊಳಗೆ ಹಲಾಲ್ ಲೇಬಲ್ ಹಾಕುವುದಿಲ್ಲ. ರಫ್ತು ಮಾಡುವಾಗ ತಮ್ಮ ಎಲ್ಲ ಉತ್ಪನ್ನಗಳ ಮೇಲೂ ಹಲಾಲ್ ಲೇಬಲ್ ಹಾಕುತ್ತಿವೆ' ಎಂದು ದೂರಿದರು.

19ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಹೋರಾಟ ನಡೆಸಲು ಕಾರ್ಯತಂತ್ರ ರೂಪಿಸುವುದಕ್ಕಾಗಿ ಇದೇ 19ರಂದು (ಸೋಮವಾರ) ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ.

ಸೋಮವಾರ ಸಂಜೆ ಬೆಳಗಾವಿಯ ಸಂಕಂ ಹೋಟೆಲ್‌ನಲ್ಲಿ ನಡೆಯುವ ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಹಿಸಲಿದ್ದಾರೆ. ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಈ. ತುಕಾರಾಂ ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಎರಡೂ ಸದನಗಳ ವಿರೋಧ ಪಕ್ಷದ ಉಪ ನಾಯಕರು, ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಬೆಂಬಲಿತ ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಂಧಿತ ಮೂವರು ಶಿಕ್ಷಕರಿಗೆ ಜಾಮೀನು

ಬೆಂಗಳೂರು: ಪ್ರೌಢಶಾಲಾ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು ಡಿ.2ರಂದು ಕಾರ್ಯಾಚರಣೆ ನಡೆಸಿ ಬಂಧಿಸಿದ್ದ ನಾಲ್ವರು ಶಿಕ್ಷಕರಲ್ಲಿ ಮೂವರಿಗೆ ಬುಧವಾರ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ 2012–13 ಹಾಗೂ 2014–15ನೇ ಸಾಲಿನಲ್ಲಿ ನಡೆಸಿದ್ದ ಸಹ ಶಿಕ್ಷಕರ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ತಂಡ ನಡೆಸುತ್ತಿದೆ.

ಕೋಲಾರ ಜಿಲ್ಲೆ ಕೆಜಿಎಫ್‌ನ ಗೋಣಮಾಕನಹಳ್ಳಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಸೋಮನಗೌಡ ಗೋನಾಳ, ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಶಾಲೆಯ ವಿ.ಜಯಪ್ಪ, ಹೊಸಪೇಟೆಯ ಕೊರಟ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಟಿ.ಯೋಗೇಶಪ್ಪ ಅವರಿಗೆ ಜಾಮೀನು ದೊರೆತಿದೆ. ಇದೇ ಪ್ರಕರಣದಲ್ಲಿ ವಿಜಯಪುರದ ರಾಠೋಡ್ ಅವರನ್ನೂ ಬಂಧಿಸಲಾಗಿತ್ತು.

ಕೆಲವು ದಿನಗಳ ಹಿಂದೆ ಸೋಮನಗೌಡ ಅವರು ರಜೆ ಹಾಕಿ ತಲೆಮರೆಸಿಕೊಂಡಿದ್ದರು. ಕಾರ್ಯಾಚರಣೆ ನಡೆಸಿ ಬಂಧಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

'ಮುರುಘಾ ಮಠದ ಅವ್ಯವಹಾರ ತನಿಖೆಯಾಗಲಿ'

ಚಿತ್ರದುರ್ಗ: 'ಮುರುಘಾ ಮಠದಲಿ ಮೂರು ತಿಂಗಳಿಂದ ಅವ್ಯಾಹತವಾಗಿ ಹಣ ದುರುಪಯೋಗ, ಅವ್ಯವಹಾರ ನಡೆದಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಆದೇಶಿಸಬೇಕು. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು' ಎಂದು ಮಾಜಿ ಸಚಿವ ಎಚ್. ಏಕಾಂತಯ್ಯ ಆಗ್ರಹಿಸಿದರು.

'ಆ. 26ರಿಂದ ಮುರುಘಾ ಮಠದ ಆಡಳಿತ ಸಂಪೂರ್ಣ ಕುಸಿದಿದೆ. ಶಿವಮೂರ್ತಿ ಶರಣರು ಹಾಗೂ ಬಸವಪ್ರಭು ಸ್ವಾಮೀಜಿ ಉಸ್ತುವಾರಿಯಲ್ಲಿರುವ ದಾವಣಗೆರೆಯ ಶಾಖಾ ಮಠದಲ್ಲಿ ₹ 20 ಲಕ್ಷ ಹಣ ದುರುಪಯೋಗ ಆಗಿದೆ. ಇಷ್ಟು ಹಣವನ್ನು ಯಾರಿಂದ ಪಡೆಯಲಾಯಿತು ಹಾಗೂ ಯಾವ ಉದ್ದೇಶಕ್ಕೆ ಖರ್ಚು ಮಾಡಲಾಗಿದೆ ಎಂಬ ಮಾಹಿತಿ ಬಹಿರಂಗಗೊಂಡಿಲ್ಲ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ವಾರ್ಷಿಕ ನೂರಾರು ಕೋಟಿ ರೂಪಾಯಿ ವಹಿವಾಟು ಹೊಂದಿರುವ ಮಠ ಹಗೂ ಶೈಕ್ಷಣಿಕ ಸಂಸ್ಥೆಗಳ ಆಡಳಿತದಲ್ಲಿ ಪಾರದರ್ಶಕತೆ ಇಲ್ಲ ಎಂದು ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್ ದೂರಿದರು.

> **ಮಠದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯ ಎಂದಿನಂತೆ ಮುಂದುವರಿಯುತ್ತವೆ. ಸರ್ಕಾರ ನಿಯೋಜಿಸಿದ ಅಧಿಕಾರಿ ಆಡಳಿತಾತ್ಮಕ ನಿರ್ಧಾರ ಮಾತ್ರ ಕೈಗೊಳ್ಳಲಿದ್ದಾರೆ.**
> **ಕೆ.ಎಸ್. ನವೀನ್,** ವಿಧಾನ ಪರಿಷತ್ ಸದಸ್ಯ

ಹುನಗುಂದ ಕ್ಷೇತ್ರ: ವಿಜಯಾನಂದ ಕಾಶಪ್ಪನವರ ಕಾಂಗ್ರೆಸ್ ಅಭ್ಯರ್ಥಿ

ಹುನಗುಂದ (ಬಾಗಲಕೋಟೆ ಜಿಲ್ಲೆ): 'ಹುನಗುಂದ ಕ್ಷೇತ್ರದಿಂದ ವಿಜಯಾನಂದ ಕಾಶಪ್ಪನವರ ವಿಧಾನಸಭೆಗೆ ಸ್ಪರ್ಧಿಸಲಿದ್ದು, ಅವರನ್ನು ಗೆಲ್ಲಿಸಿ ಕಳುಹಿಸಿ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು.

ತಾಲ್ಲೂಕಿನ ಬೆಳಗಲ್‌ನಲ್ಲಿ ಎಸ್.ಆರ್.ಕೆ. ಸಕ್ಕರೆ ಕಾರ್ಖಾನೆಗೆ ಭೂಮಿಪೂಜೆ ನೆರವೇರಿಸಿದ ನಂತರ ಮಾತನಾಡಿದ ಅವರು, 'ಕಾಶಪ್ಪನವರ ಅವರನ್ನು ಕಾಂಗ್ರೆಸ್‌ನಿಂದ ಕಣಕ್ಕೆ ಇಳಿಸಬೇಕಲ್ಲವೇ' ಎಂದು ಜನರನ್ನು ಪ್ರಶ್ನಿಸಿದರು.

'ಕಣಕ್ಕಿಳಿಸಬೇಕು' ಎಂದು ಜನರು ಕೂಗಿದರು. ಕಳೆದ ಬಾರಿಯೂ ಸ್ಪರ್ಧಿಸಿದ್ದ ಕಾಶಪ್ಪನವರ, ಬಿಜೆಪಿ ಅಭ್ಯರ್ಥಿ ವಿರುದ್ಧ ಪರಾಭವಗೊಂಡಿದ್ದರು.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಪಂಪನ ಮನಿಯಂಗಳದಿಂದ..
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಸಂಗೀತ ನಿರ್ದೇಶಕ ಮನೋರಂಜನ್ ಪ್ರಭಾಕರ್ ನಿಧನ

ಬೆಂಗಳೂರು: ಖ್ಯಾತ ಸಂಗೀತ ನಿರ್ದೇಶಕ ಮನೋರಂಜನ್ ಪ್ರಭಾಕರ್ ಅವರು ಬುಧವಾರ ನಿಧನರಾದರು. ಅವರು ಕೆಲಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಅವರಿಗೆ ಪತ್ನಿ, ಒಬ್ಬ ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗುರುವಾರ (ಡಿ.15)ನಡೆಯಲಿದೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

ಸಂಗೀತ ಪರಂಪರೆಯ ಕುಟುಂಬದಲ್ಲಿ ಜನಿಸಿದ್ದ (ತಂದೆ ಪಂಡಿತ್ ಬಿ.ಎನ್. ಪಾರ್ಥಸಾರಥಿ ನಾಯ್ಡು, ತಾಯಿ ಗೋವಿಂದಮ್ಮ) ಅವರು 70ರ ದಶಕದ ಆರಂಭದಲ್ಲಿ ಸಂಗೀತ ಕ್ಷೇತ್ರಕ್ಕೆ ಕಾಲಿಟ್ಟರು. ಮನೋರಂಜನ್ ಮತ್ತು ತಂಡ ಹೆಸರಿನಲ್ಲಿ ಕಾರ್ಯಕ್ರಮ ನೀಡುತ್ತಿದ್ದರು. 1980ರ ಅವಧಿಯಲ್ಲಿ ಇದು ಹೆಸರಾಂತ ತಂಡವಾಗಿತ್ತು. ಅವರು ಸುಮಾರು 800ಕ್ಕೂ ಹೆಚ್ಚು ಸಂಗೀತ ಆಲ್ಬಂ ಹೊರತಂದಿದ್ದಾರೆ.

90ರ ದಶಕದಲ್ಲಿ ಅವರು ಕೆಲಕಾಲ ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಶಿಕ್ಷಕರಾಗಿದ್ದರು. 2003ರಲ್ಲಿ ತಮ್ಮದೇ ಆದ ಶ್ರುತಿಲಯ ಕಲ್ಚರಲ್ ಅಕಾಡೆಮಿ, ಶ್ರುತಿಲಯ ಇನ್‌ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಮೂಲಕ ಸಂಗೀತಾಸಕ್ತರಿಗೆ ತರಬೇತಿ ನೀಡುತ್ತಿದ್ದರು.

ಪ್ರತ್ಯೇಕ ಅಪಘಾತ: ಏಳು ಮಂದಿ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯಲ್ಲಿ ಬುಧವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಒಟ್ಟು ಏಳು ಮಂದಿ ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಗುಬ್ಬಿ ತಾಲ್ಲೂಕಿನ ಕೊಂಡ್ಲಿ ಕ್ರಾಸ್ ಬಳಿ ಕ್ಯಾಂಟರ್ ಹಾಗೂ ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ನಡುವನಹಳ್ಳಿಯ ರಾಮಣ್ಣ (58), ಸಹೋದರ ನಾರಾಯಣಪ್ಪ (54), ಪತ್ನಿ ನಾಗರತ್ನ (40), ಪುತ್ರ ಸಾಗರ್ (23) ಮೃತಪಟ್ಟಿದ್ದಾರೆ.

ಮೂವರು ಯುವಕರು ಸಾವು: ಶಿರಾ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ-48ರ ಜೋಗಿಹಳ್ಳಿ ಸಮೀಪ ಸಂಜೆ ಚಾಲಕನ ನಿಯಂತ್ರಣ ತಪ್ಪಿದ ಕಾರು ಸೇತುವೆಯಿಂದ ಕೆಳಗೆ ಬಿದ್ದು, ಬೆಂಗಳೂರಿನ ಶರಣ್ (23), ಕಿರಣ್ (22) ಮತ್ತು ಅನಿಲ್ (25) ಮೃತಪಟ್ಟಿದ್ದಾರೆ. ಭರತ್, ಶಿವರಾಜು ಶಿರಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಟಿ ಅಭಿನಯಗೆ ಜೈಲು

ಬೆಂಗಳೂರು: ವರದಕ್ಷಿಣೆ ಆರೋಪಕ್ಕೆ ಸಂಬಂಧಿಸಿದಂತೆ 20 ವರ್ಷಗಳ ಹಿಂದಿನ ಕ್ರಿಮಿನಲ್ ಪ್ರಕರಣದಲ್ಲಿ ಕನ್ನಡ ಚಲನಚಿತ್ರ ನಟಿ ಅಭಿನಯ, ಅವರ ತಾಯಿ ಜಯಮ್ಮ ಹಾಗೂ ಅಣ್ಣ ಚೆಲುವರಾಜ್‌ಗೆ ಜೈಲು ಶಿಕ್ಷೆ ವಿಧಿಸಿ ಹೈಕೋರ್ಟ್ ತೀರ್ಪು ನೀಡಿದೆ.

'ಅತ್ತಿಗೆ ಲಕ್ಷ್ಮೀದೇವಿ ಅವರಿಗೆ ವರದಕ್ಷಿಣೆ ಕಿರುಕುಳ ನೀಡಿದ ಪ್ರಕರಣದಲ್ಲಿ ಅಭಿನಯ ಸೇರಿದಂತೆ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಫಿರ್ಯಾದುದಾರರಾದ ಲಕ್ಷ್ಮೀದೇವಿ ಸಹ ಸೆಷನ್ಸ್ ಕೋರ್ಟ್ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್. ಬಿ.ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಒದಗಿಸಿರುವ ಸಾಕ್ಷ್ಯಾಧಾರಗಳು ಆರೋಪಿಗಳು ಕೃತ್ಯ ಎಸಗಿರುವುದನ್ನು ಸಾಬೀತುಪಡಿಸುತ್ತಿವೆ' ಎಂದು ಹೇಳಿದ್ದು, ಸೆಷನ್ಸ್ ನ್ಯಾಯಾಲಯ 2012ರ ಮಾರ್ಚ್ 9ರಂದು ನೀಡಿದ್ದ ಆದೇಶವನ್ನು ರದ್ದುಪಡಿಸಿತು.

ಪ್ರಕರಣದಲ್ಲಿ ಅಭಿನಯ ಮತ್ತವರ ಕುಟುಂಬ ಸದಸ್ಯರನ್ನು ದೋಷಿಗಳೆಂದು ತೀರ್ಮಾನಿಸಿ 2010ರ ಜ. 5ರಂದು ಬೆಂಗಳೂರಿನ 8ನೇ ಎಸಿಎಂಎಂ ಕೋರ್ಟ್ ಹೊರಡಿಸಿದ್ದ ಆದೇಶವನ್ನು ಎತ್ತಿ ಹಿಡಿದಿದೆ. ಹೈಕೋರ್ಟ್‌ನಲ್ಲಿ ಪ್ರಾಸಿಕ್ಯೂಷನ್ ಪರ ವಿ.ಎಸ್. ವಿನಾಯಕ ವಾದ ಮಂಡಿಸಿದ್ದರು.

ರಾಜ್ಯ ಸರ್ಕಾರಕ್ಕೆ ₹ 5 ಲಕ್ಷ ದಂಡ

ಒಂದನೇ ಪುಟದಿಂದ...

ಈ ಎರಡು ಮಧ್ಯಂತರ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಪರ ಹಾಜರಾಗಿದ್ದ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್, 'ಕ್ಷೇತ್ರ ಮರುವಿಂಗಡಣೆಯ ಕರಡು ಅಧಿಸೂಚನೆ ಪ್ರಕಟಿಸಬೇಕಿದೆ. ಅದಕ್ಕೆ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಿ, ವಿಲೇವಾರಿ ಮಾಡಿ ಅಂತಿಮ ಅಧಿಸೂಚನೆ ಹೊರಡಿಸಬೇಕಿದೆ. ಇದಕ್ಕಾಗಿ ಮೂರು ತಿಂಗಳು ಕಾಲಾವಕಾಶ ಬೇಕು' ಎಂದು ಕೋರಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಈ ವಿಷಯದಲ್ಲಿ ಈಗಾಗಲೇ ಆರು ತಿಂಗಳ ಸುದೀರ್ಘ ಕಾಲಾವಕಾಶ ನೀಡಿದ್ದರೂ ಈ ಪ್ರಕ್ರಿಯೆಯಲ್ಲಿ ಒಂದಿಂಚೂ ಪ್ರಗತಿಯಾಗಿಲ್ಲ' ಎಂದು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿತು.

ಅಂಗೀಕಾರ: ಸೀಮಾ ನಿರ್ಣಯ ಆಯೋಗ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಪೀಠ ಇದೇ ವೇಳೆ ಅಂಗೀಕರಿಸಿತು. ಆದರೆ, ಕ್ಷೇತ್ರಗಳ ಗಡಿ, ಮೀಸಲಾತಿ ನಿಗದಿ ಪ್ರಕ್ರಿಯೆ ಪೂರ್ಣಗೊಳಿಸಲು ಮೂರು ತಿಂಗಳು ಸಮಯ ಕೋರಿದ್ದ ಮನವಿಯನ್ನು ತಳ್ಳಿ ಹಾಕಿತು.

ಕಾಲಾವಕಾಶದ ಮೇಲೆ ಕಾಲಾವಕಾಶ: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮರು ವಿಂಗಡಣೆ ಹಾಗೂ ಮೀಸಲಾತಿ ನಿಗದಿಗೊಳಿಸಲು ಸರ್ಕಾರ ಈ ಮೊದಲು 12 ವಾರ ಕಾಲಾವಕಾಶ ಕೇಳಿತ್ತು. 2022ರ ಸೆಪ್ಟೆಂಬರ್ 23ರಂದು ಅರ್ಜಿ ವಿಚಾರಣೆ ಬಂದಾಗ ಸೀಮಾ ನಿರ್ಣಯ ಆಯೋಗದ ಪತ್ರ ಆಧರಿಸಿ ಪುನಃ 12 ವಾರ ಕಾಲಾವಕಾಶ ಕೋರಿತ್ತು. ಅಂದು ವಿಚಾರಣೆಯಲ್ಲಿ ಅಡ್ವೊಕೇಟ್ ಜನರಲ್, 12 ವಾರಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಹೈಕೋರ್ಟ್‌ಗೆ ಭರವಸೆ ಕೊಟ್ಟಿದ್ದರು. ಈ ಗಡುವು ಇದೇ 16ಕ್ಕೆ ಮುಕ್ತಾಯವಾಗುತ್ತಿದೆ.

ಬಿಬಿಎಂಪಿ ಚುನಾವಣೆ: ವಿಚಾರಣೆ ಮುಂದೂಡಿಕೆ

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಚುನಾವಣೆ ನಡೆಸಲು ನಿರ್ದೇಶನ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೇವೆ. ಏತನ್ಮಧ್ಯೆ ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರವು ಕಾಲಾವಕಾಶ ಕೋರಿ ಮತ್ತೊಂದು ಅರ್ಜಿ ಸಲ್ಲಿಸಿದೆ. ಈ ಅರ್ಜಿ ಇದೇ 15 ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ನಿರೀಕ್ಷೆ ಇದೆ' ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ನ್ಯಾಯಪೀಠಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತಂತೆ ನ್ಯಾಯಪೀಠಕ್ಕೆ ಮಾಹಿತಿ ನೀಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ 2023ರ ಜನವರಿ 9ಕ್ಕೆ ವಿಚಾರಣೆ ಮುಂದೂಡಿತು.

ಗಡಿ ವಿವಾದ: 6 ಸಚಿವರ ಸಮಿತಿ

ಒಂದನೇ ಪುಟದಿಂದ...

ಎರಡೂ ರಾಜ್ಯಗಳ ನಡುವೆ ಇನ್ನೂ ಕೆಲವು ಸಣ್ಣಪುಟ್ಟ ವಿವಾದಗಳಿವೆ. ಅದು ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿ ಇರುತ್ತದೆ. ಈ ವಿವಾದದ ಬಗ್ಗೆಯೂ ಸಮಿತಿ ಚರ್ಚಿಸಲಿದೆ' ಎಂದು ಅವರು ಹೇಳಿದರು.

'ಮುಂದಿನ ದಿನಗಳಲ್ಲಿ ಎರಡೂ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿರಲಿದೆ. ಇತರ ಭಾಷೆಯ ಪ್ರವಾಸಿಗರು, ವ್ಯಾಪಾರಿಗಳು ಅಥವಾ ಜನರಿಗೆ ಯಾವುದೇ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಹಿರಿಯ ಐಪಿಎಸ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಇದು ಸಂವಿಧಾನಬದ್ಧವಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಯತ್ನಿಸಲಿದೆ' ಎಂದು ಶಾ ತಿಳಿಸಿದರು.

ಎರಡು ರಾಜ್ಯಗಳ ನಡುವೆ ವಿವಾದ ಭುಗಿಲೇಳಲು ನಕಲಿ ಟ್ವಿಟರ್ ಖಾತೆಗಳು ಬಹುದೊಡ್ಡ ಪಾತ್ರ ವಹಿಸಿವೆ ಎಂಬುದು ಗೊತ್ತಾಗಿದೆ. ಕೆಲವು ನಾಯಕರ ಹೆಸರಿನಲ್ಲಿ ಟ್ವಿಟರ್ ಖಾತೆ ಸೃಷ್ಟಿಸಿ ತಪ್ಪು ಸಂದೇಶಗಳನ್ನು ರವಾನಿಸಲಾಗಿದೆ. ಅಂತಹ ಖಾತೆಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು. ಜತೆಗೆ, ಅದರ ಹಿಂದಿರುವ ವ್ಯಕ್ತಿಗಳನ್ನು ಜನರ ಮುಂದೆ ಬಹಿರಂಗಪಡಿಸಲಾಗುವುದು ಎಂದು ಅವರು ಹೇಳಿದರು.

'ಎರಡೂ ರಾಜ್ಯಗಳ ವಿರೋಧ ಪಕ್ಷಗಳು ಇದನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳಬಾರದು. ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇರಲಿ, ರಾಜ್ಯದ ಜನರ ಹಿತದಲ್ಲಿ ಹಾಗೂ ರಾಜ್ಯದ ಗಡಿ ಭಾಗದಲ್ಲಿರುವ ಬೇರೆ ರಾಜ್ಯದ ಭಾಷಿಕರ ಹಿತದೃಷ್ಟಿಯಿಂದ ಇದನ್ನು ರಾಜಕೀಯದ ವಿಷಯವನ್ನಾಗಿಸಬೇಡಿ. ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್, ಎನ್‌ಸಿಪಿ ಹಾಗೂ ಉದ್ಧವ್ ಠಾಕ್ರೆಯ ಪಕ್ಷದವರು ಸಹ ಇದನ್ನು ರಾಜಕೀಯ ವಿಷಯವನ್ನಾಗಿಸಬಾರದು ಎಂಬುದನ್ನು ಒಪ್ಪುತ್ತಾರೆ ಎಂದು ನನಗೆ ನಂಬಿಕೆಯಿದೆ' ಎಂದ ಅವರು, 'ಈ ಸಮಿತಿಯ ಚರ್ಚೆಯ ಫಲಿತಾಂಶ ಹಾಗೂ ಸುಪ್ರೀಂಕೋರ್ಟ್ ತೀರ್ಪನ್ನು ಕಾಯ್ದು ನೋಡಲಾಗುವುದು.' ಎಂದರು. ಸಭೆಯಲ್ಲಿ ಕರ್ನಾಟಕದ ಗೃಹ ಸಚಿವ ಆರಗ ಜ್ಞಾನೇಂದ್ರ, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಾದದ ಮೂಲ

ಭಾಷಾವಾರು ಪ್ರಾಂತ್ಯ ರಚನೆಗೆ 1953ರಲ್ಲಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಸಮಿತಿ ರಚನೆಯಾಯಿತು. ಈ ಸಮಿತಿ ನೀಡಿದ ವರದಿಯ ಪ್ರಕಾರ; ಮುಂಬೈ ಪ್ರಾಂತ್ಯದಲ್ಲಿದ್ದ 865 ಗ್ರಾಮಗಳು (ಬೆಳಗಾವಿಯೂ ಸೇರಿ) ಆಗಿನ ಮೈಸೂರು ರಾಜ್ಯಕ್ಕೆ ಸೇರಿದವು. ಇದಕ್ಕೆ ಮಹಾರಾಷ್ಟ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತು.

ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಕೇಂದ್ರ ಸರ್ಕಾರ 1966ರಲ್ಲಿ ನ್ಯಾ.ಮೆಹರ್‌ಚಂದ್ ಮಹಾಜನ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿತು. ಬೆಳಗಾವಿ ಸೇರಿ 865 ಪ್ರದೇಶಗಳು ಕರ್ನಾಟಕಕ್ಕೆ ಸೇರಿದ್ದು ಎಂದು ಮಹಾಜನ ಸಮಿತಿ ಕೂಡ ವರದಿ ಸಲ್ಲಿಸಿತು. ಈ ವರದಿಯನ್ನೂ ಒಪ್ಪದ ಮಹಾರಾಷ್ಟ್ರ ಸರ್ಕಾರ 2004ರಲ್ಲಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತು.

'ಮಹಾರಾಷ್ಟ್ರ ಗಡಿ ವಿವಾದವೇ ಮುಗಿದು ಹೋಗಿದೆ. ಗ್ರಾಮ ಪಂಚಾಯತಿಗಳ ನಿರ್ಣಯ ಹಾಗೂ ಪೂರಕ ವರದಿಗಳೆಲ್ಲವೂ ಕರ್ನಾಟಕದ ಪರವಾಗಿಯೇ ಇವೆ. ಹಾಗಿದ್ದರೂ, ಮಹಾರಾಷ್ಟ್ರದವರು ಅನಗತ್ಯವಾಗಿ ವಿವಾದ ಎಬ್ಬಿಸಿದ್ದಾರೆ ಎಂಬುದು ಕರ್ನಾಟಕದ ವಾದ.

ಬೇಸರ ಶಮನ: ಕೊಪ್ಪಳ ಸಭೆಗೆ ತೆರಳಲು ಬಿ.ಎಸ್‌.ವೈ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಬೇಸರವನ್ನು ಶಮನ ಮಾಡಿರುವುದರಿಂದ ಕೊಪ್ಪಳದಲ್ಲಿ ಗುರುವಾರ ನಡೆಯುವ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ವಿವಿಧ ಜಿಲ್ಲಾ ಬಿಜೆಪಿ ಕಚೇರಿಗಳ ಉದ್ಘಾಟನೆಯನ್ನು ವರ್ಚುವಲ್ ಆಗಿ ನೆರವೇರಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಮೊದಲು ಯಡಿಯೂರಪ್ಪ ಅವರಿಗೆ ಆಹ್ವಾನ ನೀಡಿರಲಿಲ್ಲ. ಅಲ್ಲದೇ, ಜನಸಂಕಲ್ಪ ಯಾತ್ರೆಗೆ ಕರೆಯದೇ ನಿರ್ಲಕ್ಷಿಸುತ್ತಿದೆ ಎಂದು ಯಡಿಯೂರಪ್ಪ ಅವರು ಮುನಿಸಿಕೊಂಡಿದ್ದರು.

ಈ ವಿಷಯ ಬಹಿರಂಗವಾಗುತ್ತಿದ್ದಂತೆ ಅವರ ಮನವೊಲಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಅವರಿಗೆ ವರಿಷ್ಠರು ಸೂಚಿಸಿದರು.

ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ ರವಿಕುಮಾರ್ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಬೇಸರ ಶಮನ ಮಾಡುವ ಪ್ರಯತ್ನ ನಡೆಸಿದರು ಎಂದು ಮೂಲಗಳು ತಿಳಿಸಿವೆ.



❦ ಸುಭಾಷಿತ ❦
ಮನುಷ್ಯ ಇತರರ ಒಳ್ಳೆಯದಕ್ಕಾಗಿ ಎಷ್ಟು ದುಡಿಯುತ್ತಾನೋ ಅಷ್ಟೇ ದೊಡ್ಡವನಾಗುತ್ತಾನೆ.
-ಮಹಾತ್ಮ ಗಾಂಧಿ

ತವಾಂಗ್‌ನಲ್ಲಿ ಬಿಕ್ಕಟ್ಟು: ಚೀನಾಕ್ಕೆ ರವಾನೆಯಾಗಲಿ ಸ್ಪಷ್ಟ ಸಂದೇಶ

ಚೀನಾ ಸೈನಿಕರು ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಇದೇ 9ರಂದು ಭಾರತದ ಗಡಿಯೊಳಕ್ಕೆ ನುಸುಳಲು ಮುಂದಾಗಿದ್ದು ಕಳವಳ ಮೂಡಿಸುವ ಸಂಗತಿ. ವಿವಾದಿತ ಗಡಿ ಪ್ರದೇಶದ ಪೂರ್ವ ಭಾಗದಲ್ಲಿ ಚೀನೀಯರು ಭಾರತದ ಜೊತೆ ಮತ್ತೊಂದು ತಗಾದೆ ತೆಗೆಯಲು ಯತ್ನಿಸುತ್ತಿರಬಹುದು ಎಂಬ ಸೂಚನೆಯನ್ನು ಇದು ನೀಡುತ್ತಿದೆ. ಚೀನಾ ಮತ್ತು ಭಾರತದ ನಡುವಿನ ಗಡಿ ಪ್ರದೇಶದ ಪಶ್ಚಿಮ ಭಾಗದಲ್ಲಿನ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಲಡಾಖ್‌ನಲ್ಲಿ ಸಂಘರ್ಷಕ್ಕೆ ಕಾರಣವಾದ ವಿಚಾರಗಳು ಇನ್ನೂ ಬಗೆಹರಿದಿಲ್ಲ. ಇಂತಹ ಸಂದರ್ಭದಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಸೈನಿಕರು ತೀರಾ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ಪಿಎಲ್‌ಎ ಸೈನಿಕರು ಬಿಕ್ಕಟ್ಟನ್ನು ಪೂರ್ವ ಭಾಗಕ್ಕೂ ವಿಸ್ತರಿಸುವ ಪ್ರಯತ್ನ ನಡೆಸಿದ್ದಾರೆ. ಲಡಾಖ್‌ನಲ್ಲಿನ ಗಡಿಯ ವಿಚಾರವಾಗಿ ಭಾರತವು ತನ್ನ ನಿಲುವನ್ನು ಇನ್ನಷ್ಟು ಸಡಿಲಗೊಳಿಸಲು ಒತ್ತಡ ತರುವ ಉದ್ದೇಶದಿಂದ ಚೀನೀ ಸೈನಿಕರು ಒಳನುಸುಳಲು ಯತ್ನಿಸಿರುವ ಸಾಧ್ಯತೆ ಇದೆ. ಚೀನಾ ದೇಶವು ಅರುಣಾಚಲ ಪ್ರದೇಶದಲ್ಲಿ ಯಥಾಸ್ಥಿತಿಯನ್ನು ಬದಲಾಯಿಸಲು ಏಕಪಕ್ಷೀಯವಾಗಿ ಯತ್ನಿಸುತ್ತಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಲೋಕಸಭೆಯಲ್ಲಿ ಮಂಗಳವಾರ ಹೇಳಿದ್ದಾರೆ. ಡಿಸೆಂಬರ್ 9ರ ಘಟನೆಗೆ ಭಾರತವು ಬಲವಾದ ಪ್ರತಿಕ್ರಿಯೆಯನ್ನು ನೀಡಬೇಕಿದೆ. 2020ರಲ್ಲಿ ಗಾಲ್ವನ್ ಕಣಿವೆಯಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ಸಂಘರ್ಷ ನಡೆದ ನಂತರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಎಡವಟ್ಟು ಹೆಜ್ಜೆ ಇರಿಸಿತು. ಚೀನಾ ಸೈನಿಕರು ಭಾರತದ ಗಡಿಯೊಳಗೆ ಇದ್ದರು ಎಂಬುದನ್ನು ಮೋದಿ ಅವರು ರಾಷ್ಟ್ರೀಯ ವಾಹಿನಿಗಳ ಮೂಲಕ ನಿರಾಕರಿಸಿದರು. ಇದು ಮಾತುಕತೆಗಳ ಸಂದರ್ಭದಲ್ಲಿ ಚೀನೀಯರಿಗೆ ಇಂಬು ಕೊಟ್ಟಿತು. ಆಗಿನ ಈ ನಡೆಯು ಭಾರತವನ್ನು ಈಗಲೂ ಕಾಡುತ್ತಿದೆ. ವಾಸ್ತವ ಗಡಿ ನಿಯಂತ್ರಣ ರೇಖೆಯ ಈಚೆಗಿನ ನೆಲವನ್ನು (ಭಾರತದ ನೆಲ) ಚೀನಾ ಆಕ್ರಮಿಸಿಕೊಂಡಾಗ ಅದನ್ನು ನಿಭಾಯಿಸುವ ವಿಚಾರದಲ್ಲಿ ಭಾರತವು ದುರ್ಬಲ ಹೆಜ್ಜೆಗಳನ್ನು ಇರಿಸುತ್ತಿರುವಂತೆ ಕಂಡುಬಂತು. ಇದರಿಂದಾಗಿ ಚೀನೀಯರಿಗೆ ಹಟಮಾರಿ ಧೋರಣೆ ತಳೆಯಲು ಉತ್ತೇಜನ ಸಿಕ್ಕಿತು. ಈ ಬಾರಿ ಭಾರತವು ತವಾಂಗ್‌ನಲ್ಲಿ ಚೀನೀಯರ ಆಕ್ರಮಣಕಾರಿ ವರ್ತನೆಯನ್ನು ಬಹಿರಂಗಪಡಿಸಲು ಹಿಂದೆ ಮುಂದೆ ಆಲೋಚಿಸಬಾರದು.

ಗಡಿಯಲ್ಲಿ ಭಾರತವನ್ನು ಮತ್ತೆ ಮತ್ತೆ ಕೆಣಕುವುದಕ್ಕೆ ತೆರಬೇಕಾಗುವ ಬೆಲೆ ದೊಡ್ಡದು ಎಂಬುದನ್ನು ಚೀನಾಕ್ಕೆ ಭಾರತವು ತೋರಿಸಬೇಕು

ಆದರೆ ಮೋದಿ ನೇತೃತ್ವದ ಸರ್ಕಾರವು ಹಿಂದಿನ ತಪ್ಪುಗಳನ್ನು ಮತ್ತೆ ಮಾಡುತ್ತಿರುವ ಸೂಚನೆಗಳು ಇವೆ. ಭಾರತದ ಕಡೆ ಪ್ರಾಣಹಾನಿ ಆಗಿಲ್ಲ, ಯಾರಿಗೂ ಗಂಭೀರ ಗಾಯಗಳು ಆಗಿಲ್ಲ ಎಂದು ರಕ್ಷಣಾ ಸಚಿವರು ಹೇಳಿದ್ದಾರೆ. ಆದರೆ ಗಂಭೀರ ಗಾಯಗಳಾಗಿರಬಹುದು ಎಂದು ರಕ್ಷಣಾ ತಜ್ಞರು ಹೇಳುತ್ತಿದ್ದಾರೆ. ನಿರಾಕರಣೆಯ ಧೋರಣೆಯಿಂದ ಭಾರತಕ್ಕೆ ಬಿಕ್ಕಟ್ಟನ್ನು ಗಂಭೀರವಾಗಿ ನಿಭಾಯಿಸಲು ಆಗುವುದಿಲ್ಲ. ಸಿಂಗ್ ಅವರು ಲೋಕಸಭೆಯಲ್ಲಿ ನೀಡಿದ ಹೇಳಿಕೆಯು ಐದು ನಿಮಿಷಗಳಿಗೂ ಕಡಿಮೆ ಅವಧಿಯದ್ದಾಗಿತ್ತು. ಬಿಕ್ಕಟ್ಟಿನ ಬಗ್ಗೆ ಚರ್ಚೆ ಇರಲಿಲ್ಲ. ಸಂಘರ್ಷದ ಬಗ್ಗೆ ಚರ್ಚೆಯಾಗಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದರೂ ಅದಕ್ಕೆ ಅವಕಾಶ ಸಿಗಲಿಲ್ಲ.

ಬಹುಕಾಲದಿಂದ ಉಳಿದುಕೊಂಡು ಬಂದಿರುವ ಗಡಿ ಸಮಸ್ಯೆ, ರಾಷ್ಟ್ರದ ಭದ್ರತೆಗೆ ಸಂಬಂಧಿಸಿದ ವಿಚಾರಗಳನ್ನು ನಿಭಾಯಿಸುವಾಗ ನೀಡುವ ಪ್ರತಿಕ್ರಿಯೆಗಳು ಗಟ್ಟಿಯಾಗಿರಬೇಕು. ಅದರಲ್ಲೂ ಬಲಿಷ್ಠ ನೆರೆ ರಾಷ್ಟ್ರದ ಜೊತೆ ವ್ಯವಹರಿಸುವಾಗ ಇಂತಹ ಪ್ರತಿಕ್ರಿಯೆಗಳು ಬೇಕು. ಇಂತಹ ಸಂದರ್ಭಗಳಲ್ಲಿ ತೀರ್ಮಾನಗಳನ್ನು ಬೆರಳೆಣಿಕೆಯಷ್ಟು ಮಂದಿ ರಾಜಕಾರಣಿಗಳು ಮಾತ್ರ ಕೈಗೊಳ್ಳಬಾರದು. ಎಲ್ಲ ಪಕ್ಷಗಳು, ಹಲವು ಸಂಸ್ಥೆಗಳ ತಜ್ಞರು ಇದರಲ್ಲಿ ಭಾಗಿಯಾಗಬೇಕು. ಚೀನಾಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ವಿರೋಧ ಪಕ್ಷಗಳನ್ನು ಹೊರಗೆ ಇರಿಸುವ ಮೂಲಕ ಮೋದಿ ನೇತೃತ್ವದ ಸರ್ಕಾರವು ರಾಜಕೀಯ ಒಗ್ಗಟ್ಟಿನ ಪ್ರಯೋಜನ ದೇಶಕ್ಕೆ ಸಿಗದಂತೆ ಮಾಡುತ್ತಿದೆ. ಚೀನಾ ದೇಶವು ಆಕ್ರಮಣಕಾರಿ ಧೋರಣೆಯನ್ನು ತಳೆಯಲು ಹಿಂದೆ ಮುಂದೆ ನೋಡುವಂತಹ ಪರಿಸ್ಥಿತಿಯನ್ನು ಭಾರತ ಸೃಷ್ಟಿಸಬೇಕು. ಗಡಿಯಲ್ಲಿ ಭಾರತವನ್ನು ಮತ್ತೆ ಮತ್ತೆ ಕೆಣಕುವುದಕ್ಕೆ ತೆರಬೇಕಾಗುವ ಬೆಲೆ ದೊಡ್ಡದು ಎಂಬುದನ್ನು ಸರ್ಕಾರವು ತೋರಿಸಬೇಕು. ಲಡಾಖ್‌ನಲ್ಲಿ ನಿಯೋಜನೆಗೊಂಡಿರುವ ಭಾರತದ ಯೋಧರು ಈಗ ಸತತ ಮೂರನೆಯ ವರ್ಷವೂ ಕೊರೆಯುವ ಚಳಿಯಲ್ಲಿ ಅಲ್ಲಿರಬೇಕಾಗಿದೆ. ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕಿದೆ.

ದಿನದ ಟ್ವೀಟ್

ಇಂಥ ಪ್ರವೃತ್ತಿಯೇಕೆ?

ಒಂದು ಸಂಗತಿಯನ್ನು ನಾನು ಗಮನಿಸಿದ್ದೇನೆ. ಪ್ರಮುಖ ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಸಿಎಕ್ಸ್‌ಒಗಳಾಗದ (ಚೀಫ್ ಎಕ್ಸ್‌ಪೀರಿಯನ್ಸ್ ಆಫೀಸರ್) ಐಐಟಿ ವಿದ್ಯಾರ್ಥಿಗಳು ಧರ್ಮದ ಗೀಳಿನಲ್ಲಿ ಸಿಲುಕುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ... ವಿಜ್ಞಾನ ಮತ್ತು ನಂಬಿಕೆಯ ನಡುವಿನ ಮೂಲಭೂತ ವ್ಯತ್ಯಾಸವೇ ಅವರಿಗೆ ತಿಳಿದಿರುವುದಿಲ್ಲ. ವಿಜ್ಞಾನ = ಪ್ರತಿಯೊಬ್ಬರನ್ನೂ ಪರೀಕ್ಷಕ ದೃಷ್ಟಿಯಿಂದ ನೋಡುತ್ತದೆ, ನಂಬಿಕೆ = ಅಧಿಕಾರದ ಮೇಲೆ ವಿಶ್ವಾಸ ಹೊಂದಿರುತ್ತದೆ.

ದೇವದತ್ತ ಪಟ್ಟನಾಯಕ್, ಲೇಖಕ

ಕಿಡಿನುಡಿ

ಆ್ಯಸಿಡ್ ಎರಚುವವರಿಗೆ ಶಿಕ್ಷೆಯ ಪ್ರಮಾಣವನ್ನು ಸೆಕ್ಷನ್ 326ಎ (ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ) ಸೇರಿಸುವ ಮೂಲಕ ಹೆಚ್ಚಿಸಲಾಗಿದೆ. ಇಷ್ಟಾದರೂ ಕೆಲವರು ಅಮಾಯಕರ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಇಂಥವರು ಮಾನವ ಜಾತಿಗೆ ಸೇರಿದವರು ಎಂದು ಕರೆಸಿಕೊಳ್ಳಲು ಅನರ್ಹರು.

ಇಷ್ಕರಣ್ ಸಿಂಗ್ ಭಂಡಾರಿ, ವಕೀಲ

25 ವರ್ಷಗಳ ಹಿಂದೆ

ಸೋಮವಾರ, 15-12-1997

- **ಬಿಹಾರದಿಂದ ಸ್ಪರ್ಧಿಸಲು ಗುಜ್ರಾಲ್‌ಗೆ ಆಹ್ವಾನ- ಉಚ್ಚಾಟನೆ: ಹೆಗಡೆ ಕ್ಷಮೆ ಕೋರಿದ ಲಾಲೂ**

ನವದೆಹಲಿ, ಡಿ. 14- ರಾಮಕೃಷ್ಣ ಹೆಗಡೆ ಅವರನ್ನು ಜನತಾ ದಳದಿಂದ ಉಚ್ಚಾಟಿಸಲು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅವರೇ ಕಾರಣ ಎಂದು ಅಂದು ಜನತಾ ದಳದ ಅಧ್ಯಕ್ಷರಾಗಿದ್ದ ರಾಷ್ಟ್ರೀಯ ಜನತಾ ದಳದ ನಾಯಕ ಲಾಲೂ ಪ್ರಸಾದ್ ಯಾದವ್ ಅವರು ಹೇಳಿದ್ದಾರೆ.

ಚುನಾವಣಾ ಹೊಂದಾಣಿಕೆಗೆ ಸಂಬಂಧಿಸಿ ಪ್ರಧಾನಿ ಐ.ಕೆ. ಗುಜ್ರಾಲ್ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದಕ್ಕಾಗಿ ತಾವು ಹೆಗಡೆ ಅವರ ಕ್ಷಮೆ ಕೋರುವುದಾಗಿ ಹೇಳಿದರು.

- **ಕಾರಂತರ ನೆನಪಿನಲ್ಲಿ ಸಮ್ಮೇಳನಕ್ಕೆ ಅಂತಿಮ ತೆರೆ**

ಅಬ್ಬಕ್ಕರಾಣಿ ನಗರ, ಮಂಗಳ ಕ್ರೀಡಾಂಗಣ, ಮಂಗಳೂರು, ಡಿ. 14- ಕ್ಷಣಕ್ಷಣಕ್ಕೂ ಕಾಡಿದ ಶಿವರಾಮ ಕಾರಂತರ ಗಾಢವಾದ ನೆನಪಿನ ಭಾವುಕ ವಾತಾವರಣದ ನಡುವೆ ಇಂದು ಸಂಜೆ ನಡೆದ ಸಮಾರೋಪ ಸಮಾರಂಭದೊಂದಿಗೆ, ಮೂರು ದಿನಗಳ ಹಿಂದೆ ಆರಂಭವಾದ 66ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಂತಿಮ ತೆರೆ ಬಿತ್ತು.

ಸಮಾರೋಪ ಭಾಷಣವನ್ನು ಮಾಡಬೇಕಿದ್ದ ಕಾರಂತರ ನಿಧನದಿಂದ ತೆರವಾದ ಸ್ಥಾನದಲ್ಲಿ ಅವರ ತೈಲಚಿತ್ರವನ್ನು ಇಟ್ಟು, ಅವರ ಧ್ವನಿಸುರುಳಿಯೊಂದನ್ನು ಅವರ ಭಾಷಣದ ಕಾಲಕ್ಕೆ ಇಡೀ ಸಭಾಂಗಣದ ತುಂಬಾ ಪ್ರತಿಧ್ವನಿಸುವಂತೆ ಮಾಡಲಾಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 15-12-1972

- **ಎಚ್‌.ಎ.ಎಲ್‌ಗೆ ಇನ್ನೊಂದು ಕೀರ್ತಿ ಕಳಶ: 'ಬಸಂತ್' ಕೃಷಿ ವಿಮಾನ**

ಬೆಂಗಳೂರು, ಡಿ. 14- ಆಳು ಕೈ ಎತ್ತರದಲ್ಲಿ ಸಂಚರಿಸಿದ ಹೊಸ ಕೃಷಿಕ ವಿಮಾನ, ಬಣ್ಣದ ದ್ರಾವಣವನ್ನು ಕ್ರಮಬದ್ಧವಾಗಿ ಎರಚಿ ಎಚ್‌.ಎ.ಎಲ್‌ನ ಕೀರ್ತಿಗೆ ಇನ್ನೊಂದು ಕಳಶ ಜೋಡಿಸಿತು.

ಬೃಹತ್ ಪ್ರಮಾಣದಲ್ಲಿ ಬೆಳೆಗಳಿಗೆ ಕ್ರಿಮಿನಾಶಕ, ಕೀಟನಾಶಕಗಳನ್ನು ಎರಚಲು ರೂಪಿಸಿರುವ ಅದು ಇಂದು ಎಚ್‌ಎಎಲ್ ನಿಲ್ದಾಣದಲ್ಲಿ ತನ್ನ ಪ್ರಥಮ ಪ್ರಯೋಗ- ಪ್ರದರ್ಶನ ನೀಡಿತು. ಹಾರಾಟದ ನಂತರ ನಡೆದ ಸಮಾರಂಭದಲ್ಲಿ ರಕ್ಷಣಾ ಸಚಿವ ಶ್ರೀ ಜಗಜೀವನ ರಾಂ ಅವರು ಅದಕ್ಕೆ 'ಬಸಂತ್' ಎಂದು ನಾಮಕರಣ ಮಾಡಿ, 'ಹಸಿರು ಕ್ರಾಂತಿ'ಗೆ ನೆರವಾಗಲೆಂದು ಆಶಿಸಿದರು.

- **ರಾಷ್ಟ್ರೀಯ ಯೋಜನೆಯಾಗಿ ಕೃಷ್ಣಾ ಮೇಲ್ದಂಡೆ: ಕೇಂದ್ರಕ್ಕೆ ರಾಜ್ಯದ ಕೋರಿಕೆ**

ಬೆಂಗಳೂರು, ಡಿ. 14- ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ತೆಗೆದುಕೊಳ್ಳಬೇಕೆಂದು ಮೈಸೂರು ಸರ್ಕಾರವು ಕೇಂದ್ರವನ್ನು ಪ್ರಾರ್ಥಿಸಲಿದೆ.

ಈ ವಿಚಾರವನ್ನು ಇಂದು ವಿಧಾನ ಸಭೆಯಲ್ಲಿ ತಿಳಿಸಿದ ಭಾರಿ ನೀರಾವರಿ ರಾಜ್ಯ ಸಚಿವ ಶ್ರೀ ಎಚ್‌.ಎನ್. ನಂಜೇಗೌಡ ಅವರು, ಕೇಂದ್ರ ಸರ್ಕಾರ ರಾಷ್ಟ್ರೀಯ ಯೋಜನೆಯಾಗಿ ತೆಗೆದುಕೊಳ್ಳಲು ಯಾವುದಾದರೊಂದು ನಿರ್ದಿಷ್ಟ ಯೋಜನೆಯನ್ನು ಸೂಚಿಸಬೇಕೆಂಬ ಸಲಹೆ ಮಾಡಿತ್ತೆಂದೂ ಸರ್ಕಾರವು ಕೃಷ್ಣ ಮೇಲ್ದಂಡೆ ಯೋಜನೆಯನ್ನು ಸೂಚಿಸಲು ನಿರ್ಧರಿಸಿದೆ ಎಂದೂ ವಿವರಿಸಿದರು.

'ಭಾರತ್ ಜೋಡೊ' ಇತಿಹಾಸ ಹಾಗೂ ವರ್ತಮಾನದ ಒಂದು ಜೋಡಣೆ

ಜೋಡಿಸುವ ದಾರಿ ಸಾಗುವುದೆಂತೋ...

ವಿಶ್ಲೇಷಣೆ

ರಾಜಾರಾಮ ತೋಳ್ಪಾಡಿ
ನಿತ್ಯಾನಂದ ಬಿ. ಶೆಟ್ಟಿ

ರಾಹುಲ್ ಗಾಂಧಿಯವರ ಮುತ್ತಜ್ಜ ಪಂಡಿತ್ ಜವಾಹರಲಾಲ್ ನೆಹರೂ ಅವರು ನಲವತ್ತರ ದಶಕದಲ್ಲಿ ತಮ್ಮ 'ಡಿಸ್ಕವರಿ ಆಫ್ ಇಂಡಿಯಾ' (1946) ಎಂಬ ಕೃತಿಯಲ್ಲಿ ಭಾರತದ ಚರಿತ್ರೆಯ ಅನ್ವೇಷಣೆಯನ್ನು ನಡೆಸಿದ್ದರು. ಆ ಪುಸ್ತಕ ನೆಹರೂ ನಡೆಸಿದ 'ಭಾರತಾನ್ವೇಷಣೆ'ಯ ಶೋಧಸಾರ. ವೃತ್ತಿಪರ ಇತಿಹಾಸಕಾರರಲ್ಲದ ನೆಹರೂ ದೇಶದ ಸ್ವಾತಂತ್ರ್ಯಕ್ಕಾಗಿ ತಾವು ನಡೆಸುತ್ತಿದ್ದ ದಟ್ಟ ರಾಜಕೀಯ ಚಟುವಟಿಕೆಗಳ ನಡುವೆಯೇ ಭಾರತದ ಚರಿತ್ರೆ ಮತ್ತು ಸಂಸ್ಕೃತಿಗಳ ಕುರಿತು ಆಳವಾದ ಜಿಜ್ಞಾಸೆಯನ್ನು ಇಲ್ಲಿ ನಡೆಸಿದ್ದರು. ಭಾರತದ ಚರಿತ್ರೆಯ ಕುರಿತ ಈ ಹಿನ್ನೋಟದಲ್ಲಿ ತಮ್ಮ ಕುತೂಹಲವನ್ನು ಕೆರಳಿಸಿದ, ತಮ್ಮನ್ನು ಸಂದಿಗ್ಧಕ್ಕೆ ತಳ್ಳಿದ ಮತ್ತು ತಮ್ಮನ್ನು ಆಳವಾಗಿ ಪ್ರಭಾವಿಸಿದ ಅನೇಕ ವಿಷಯಗಳ ಕುರಿತು ನೆಹರೂ ತಮ್ಮದೇ ಆದ ನಿರೂಪಣೆಯನ್ನು ನೀಡಿದ್ದಾರೆ. ಒಂದರ್ಥದಲ್ಲಿ ನೆಹರೂ ಅವರ ಈ 'ಭಾರತಾನ್ವೇಷಣೆ' ಅವರ ಆಯ್ಕೆಯ ಭಾರತವೂ ಹೌದು.

ಇದಾದ 76 ವರ್ಷಗಳ ಬಳಿಕ ಅವರ ಮರಿಮಗ ರಾಹುಲ್ ಗಾಂಧಿ ಭಾರತವನ್ನು ಜೋಡಿಸುವ ಹೊಸ ರಾಜಕಾರಣವನ್ನು ನಿರ್ವಹಿಸುತ್ತಿರುವುದು ನಮ್ಮ ಕಣ್ಣ ಮುಂದಿದೆ. ನೆಹರೂ ಕಾಲದ 20ನೆಯ ಶತಮಾನ ಮತ್ತು ರಾಹುಲ್ ಕಾಲದ 21ನೆಯ ಶತಮಾನದ ಭಾರತದ ರಾಜಕಾರಣಗಳ ನಡುವೆ ಅಜಗಜಾಂತರ ಇರುವುದು ಹೌದಾದರೂ ಬಹುಮುಖ್ಯವಾದ ಕೆಲವು ಕಾರಣಗಳಿಗಾಗಿ ಇವೆರಡನ್ನೂ ಜೋಡಿಸಿ ನೋಡುವ ಅಗತ್ಯ ಈಗ ಇದೆ.

ರಾಹುಲ್ ಅವರ 'ಭಾರತ್ ಜೋಡೊ' ಮೊದಲನೆಯದಾಗಿ, ನೆಹರೂ ಕಾಲದ ಮೌಲಿಕ ರಾಜಕಾರಣವನ್ನು ತನ್ನ ಕಾಲದ ರಾಜಕಾರಣದೊಂದಿಗೆ ಜೋಡಿಸಿಕೊಳ್ಳುವಂತಹ ಒಂದು ಪ್ರಯತ್ನ. ಈ ಅರ್ಥದಲ್ಲಿ 'ಭಾರತ್ ಜೋಡೊ' ಇತಿಹಾಸ ಹಾಗೂ ವರ್ತಮಾನದ ಒಂದು ಜೋಡಣೆ. ಇತಿಹಾಸದ ಬೆಳಕಿನಲ್ಲಿ ವರ್ತಮಾನವನ್ನು ಅರಿಯುವ ಮತ್ತು ವರ್ತಮಾನದ ಅರಿವಿನಲ್ಲಿ ಭವಿಷ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಕ್ರಿಯಾಚರಣೆ. ಹೀಗೆ ಒಂದು ನೆಲೆಯಲ್ಲಿ, ಭಾರತದ ಭೂತ-ವರ್ತಮಾನಗಳ ಜೋಡಣೆಯಲ್ಲಿ ಭವಿಷ್ಯವನ್ನು ಕನಸುವ ವಿನೂತನ ರಾಜಕಾರಣವಾಗಿ ಮಾರ್ಪಾಟುಗೊಳ್ಳುವ ಭರವಸೆಯನ್ನು 'ಭಾರತ್ ಜೋಡೊ' ನೀಡುತ್ತಿದೆ.

ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶವನ್ನು ದಾಟಿ, ಸದ್ಯ ರಾಜಸ್ಥಾನದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ' ಯಾವುದನ್ನು ಯಾವುದರ ಜೊತೆ ಜೋಡಿಸುತ್ತಿದೆ, ರಾಜಕಾರಣದ ಯಾವ ಸಾಧ್ಯತೆಗಳ ಕುರಿತು ಚಿಂತನೆ ನಡೆಸುವಂತೆ ನಮ್ಮನ್ನು ಒತ್ತಾಯಿಸುತ್ತಿದೆ, 'ಭಾರತ್ ಜೋಡೊ' ರಾಜಕಾರಣಕ್ಕೂ ಕಾಂಗ್ರೆಸ್‌ಗೂ ಏನು ಸಂಬಂಧ ಹಾಗೂ ಈ ರಾಜಕಾರಣದಲ್ಲಿ ನಮ್ಮ-ನಿಮ್ಮಂತಹವರ ಪಾತ್ರವೇನು ಎಂಬಂಥ ಪ್ರಶ್ನೆಗಳನ್ನು ಹಾಕಿಕೊಳ್ಳುವ ಮೂಲಕ 'ಭಾರತ್ ಜೋಡೊ'ಗೆ ಹೊಸ ಅರ್ಥವನ್ನು ನೀಡಬಹುದು. ಅಂತೆಯೇ, ಈ ಅಭಿಯಾನದ ಕಾರ್ಯಸೂಚಿಯನ್ನು ಗುಣಾತ್ಮಕವಾಗಿ ವಿಸ್ತರಿಸಬಹುದು. ಈ ಯಾತ್ರೆ ಇದೇ 16ಕ್ಕೆ ನೂರು ದಿನ ಪೂರೈಸಲಿದೆ.

ವೈಚಾರಿಕವಾಗಿ ಸಂಪೂರ್ಣವಾಗಿ ಸ್ತಬ್ಧಗೊಂಡ ಭಾರತದ ಸದ್ಯದ ರಾಜಕಾರಣದಲ್ಲಿ ಮತ್ತು ಭ್ರಷ್ಟಗೊಂಡಿರುವ ನಮ್ಮ ಸಾರ್ವಜನಿಕ ಜೀವನದಲ್ಲಿ ಬತ್ತಿಹೋದ ಪ್ರಜಾತಾಂತ್ರಿಕ ಆಶಯಗಳನ್ನು ಮುನ್ನೆಲೆಗೆ ತರುವ ರಾಜಕಾರಣವನ್ನು ರಾಹುಲ್ ಈ ಅಭಿಯಾನದ ಮೂಲಕ ಮುನ್ನಡೆಸುತ್ತಿದ್ದಾರೆ. ಹಾಗಾಗಿಯೇ ಈ ವಿಶಿಷ್ಟ ಬಗೆಯ ರಾಜಕಾರಣಕ್ಕೆ ದೇಶದ ಅಸಂಖ್ಯಾತ ಜನರು ತಮ್ಮ ಬೆಂಬಲವನ್ನು ನೀಡುತ್ತಿದ್ದಾರೆ. ಯಾತ್ರೆ ಹೋದೆಡೆಯಲ್ಲೆಲ್ಲ ಜನಸಾಮಾನ್ಯರು, ಕಲಾವಿದರು, ಚಿಂತಕರು ಮತ್ತು ಸಮಾಜಸೇವಾಸಕ್ತರು ಯಾತ್ರಿಕರನ್ನು ಸ್ವಾಗತಿಸಿದ್ದಾರೆ, ಸಮಾಲೋಚನೆ ನಡೆಸಿದ್ದಾರೆ ಹಾಗೂ ತಮ್ಮ ಅಹವಾಲುಗಳನ್ನು ಮುಂದಿಟ್ಟಿದ್ದಾರೆ. ಜನರ ಮಾತುಗಳನ್ನು ಕೇಳಿಸಿಕೊಳ್ಳುವ, ಅವರ ಸಮಸ್ಯೆಗಳನ್ನು ಅರಿಯುವ ಹಾಗೂ ಅವರ ಜೊತೆ ಬೆರೆಯುವ ಪ್ರಜಾತಾಂತ್ರಿಕ ರಾಜಕಾರಣದ ಈ ದೃಶ್ಯ ನಮ್ಮಲ್ಲಿ ಆಸಕ್ತಿ ಮತ್ತು ಭರವಸೆಗಳನ್ನು ಮೂಡಿಸುವಂತಹುದು.

ಹಿಂದಿನ ಅನೇಕ ವರ್ಷಗಳ ಭಾರತದ ರಾಜಕಾರಣದಲ್ಲಿ ಇಲ್ಲಿಯ ಸಮುದಾಯಗಳನ್ನು ಬೇರೆಬೇರೆ ನೆಲೆಗಳಲ್ಲಿ ಮತ್ತೆಮತ್ತೆ ವಿಭಜಿಸಲಾಗಿದೆ. ಜನರು ಪರಸ್ಪರ ಬೆರೆಯದಂತೆ, ಕೂಡಿಕೊಳ್ಳದಂತೆ ಅವರಲ್ಲಿ ಭಾವಾವೇಶವನ್ನು ತುಂಬಿ, ಅವರನ್ನು ಯಾವತ್ತೂ ಉದ್ರಿಕ್ತ ಸ್ಥಿತಿಯಲ್ಲೇ ಇಡಲಾಗಿದೆ. ಹಾಗೆಯೇ ಚುನಾವಣೆಯ ಸಂದರ್ಭದಲ್ಲಿ ಜನರ ಮತವನ್ನು ಸಗಟು ದರದಲ್ಲಿ ಖರೀದಿಸುವ, ಕೈಮೀರಿದರೆ ಶಾಸಕರನ್ನೇ ಖರೀದಿಸುವ ಅಧಿಕಾರ ದಾಹಿ ಅಡ್ಡಾದಿಡ್ಡಿ ರಾಜಕಾರಣವನ್ನೂ ನಮ್ಮಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಈ ಯಾತ್ರೆಯಲ್ಲಿ ರಾಹುಲ್ ಸರಳ ಹಾಗೂ ನಿಷ್ಕಳಂಕ ರಾಜಕಾರಣವನ್ನು ನಡೆಸುವವರಂತೆ, ಹಟದಿಂದ ಸೆಟೆದು ನಿಂತ ಸಮುದಾಯಗಳನ್ನು ಪ್ರೀತಿಯಿಂದ ಬಾಗಿಸಿ ಜೋಡಿಸುವವರಂತೆಯೂ ಕಂಡುಬರುತ್ತಿದ್ದಾರೆ. ರಾಹುಲ್ ಕಾಂಗ್ರೆಸ್ಸಿನ ಪ್ರಮುಖ ನಾಯಕರಲ್ಲಿ ಒಬ್ಬರು ಎನ್ನುವುದು ಒಂದು ಆಕಸ್ಮಿಕ ಅಷ್ಟೇ. ಹಾಗಾಗಿ, ಒಂದು ಪಕ್ಷವಾಗಿ ಕಾಂಗ್ರೆಸ್ ತನ್ನನ್ನು ನಿರ್ವಹಿಸಿಕೊಳ್ಳುತ್ತಿರುವ ರೀತಿಗೆ ರಾಹುಲ್ ಜವಾಬ್ದಾರರಾಗಬೇಕಿಲ್ಲ. ಅಂದರೆ ಅಧಿಕಾರಸ್ಥ ಪಕ್ಷವಾಗಿ ಕಾಂಗ್ರೆಸ್ ನಡೆಸಿರಬಹುದಾದ ಸು-ಶಾಸನ ಅಥವಾ ಕು-ಶಾಸನಗಳ ಚಾರಿತ್ರಿಕ ಭಾರವನ್ನು ಹೊರಬೇಕಾಗಿಲ್ಲ. ಅಧಿಕಾರ ರಾಜಕಾರಣ ಮತ್ತು ಚುನಾವಣಾ ಲೆಕ್ಕಾಚಾರಗಳ ಆಚೆಗೆ ಇರುವ ಪ್ರಜಾತಾಂತ್ರಿಕ ಪರಿವರ್ತನಾ ರಾಜಕಾರಣವನ್ನು ನಡೆಸುವಂತೆ ರಾಹುಲ್ ಕಂಡುಬರುತ್ತಿದ್ದಾರೆ. ಸಾರ್ವಜನಿಕ ಪ್ರಜಾತಾಂತ್ರಿಕ ಮರುಸಂಘಟನೆಯ ಮೌಲಿಕ ರಾಜಕಾರಣವೇ ನಿಜವಾದ ಅರ್ಥದ ರಾಜಕಾರಣವಲ್ಲವೇ?



ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಮತ್ತು ರಾಜಕೀಯ ಧುರೀಣನಾಗಿ ರಾಹುಲ್ ನಡುವೆ ಇರುವ ಪ್ರಮುಖ ವ್ಯತ್ಯಾಸವೊಂದನ್ನು ಇಲ್ಲಿ ಗುರುತಿಸಬೇಕು. ರಾಷ್ಟ್ರೀಯ ಕಾಂಗ್ರೆಸ್ ಇತರ ಎಲ್ಲ ರಾಜಕೀಯ ಪಕ್ಷಗಳಂತೆಯೇ ಚುನಾವಣಾ ಲೆಕ್ಕಾಚಾರ ಮತ್ತು ಅಧಿಕಾರಗ್ರಹಣದ ರಾಜಕಾರಣದಲ್ಲಿ ಮುಳುಗಿದೆ. ಹಾಗಾಗಿ ಅದರೊಳಗೆ ಇತರ ಎಲ್ಲ ಪಕ್ಷಗಳಲ್ಲಿಯೂ ಕಾಣಿಸುವ ಭ್ರಷ್ಟತೆ, ಒಳಜಗಳ, ಗುಂಪುಗಾರಿಕೆ ನಿಚ್ಚಳವಾಗಿ ಕಾಣಿಸುತ್ತಿವೆ. ರಾಹುಲ್ ಈ ರಾಜಕೀಯ ಪಕ್ಷದ ಅತ್ಯಂತ ಪ್ರಮುಖ ನಾಯಕರೆನ್ನುವುದು ನಿಜ. ಆದರೆ ದೂರದೃಷ್ಟಿಯ ಓರ್ವ ಧುರೀಣನಾಗಿ ಅವರು ತಮ್ಮ ಈ ಯಾತ್ರೆಯ ಮೂಲಕ ತಮ್ಮ ಪಕ್ಷದ ಜೊತೆಗಾರರಿಗೆ, ರಾಜಕಾರಣವೆನ್ನುವುದು ಮತ ಯಾಚಿಸುವ, ಚುನಾವಣೆಗಳನ್ನು ಗೆಲ್ಲುವ ಮತ್ತು ಅಧಿಕಾರ ಹಿಡಿಯುವ ಅಖಾಡ ಮಾತ್ರವಲ್ಲ, ಅದು ಜನರ ಆಸೆ-ಆಕಾಂಕ್ಷೆಗಳನ್ನು ಪ್ರತಿನಿಧಿಸುವ, ಅವರ ಆಶೋತ್ತರಗಳನ್ನು ಪೂರೈಸುವ ಹಾಗೂ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಜನರನ್ನೂ ಒಳಗೊಳ್ಳುವ ಒಂದು ಪರಿವರ್ತನಶೀಲ ಪ್ರಜಾತಾಂತ್ರಿಕ ವೇದಿಕೆಯೂ ಹೌದು ಎನ್ನುವುದನ್ನು ತಿಳಿಹೇಳಲು ಯತ್ನಿಸುತ್ತಿದ್ದಾರೆ. ರಾಜಕಾರಣದ ಈ ಪ್ರಾಥಮಿಕ ಪಾಠವನ್ನು ಮಾಡುವುದಕ್ಕಾಗಿ, ಗುಂಪುಗಾರಿಕೆಯಿಂದ ಛಿದ್ರಗೊಂಡ ಕಾಂಗ್ರೆಸ್‌ನ ಪ್ರಾದೇಶಿಕ ನಾಯಕರನ್ನು ಪರಸ್ಪರ ಜೋಡಿಸುವ ಕೆಲಸವನ್ನೂ ಅವರು ನಡೆಸುತ್ತಿದ್ದಾರೆ.

ರಾಜಕೀಯ ಪಕ್ಷಗಳು, ಅವು ನಡೆಸುವ ಸಮಾವೇಶಗಳು, ಚುನಾವಣೆಯ ತಯಾರಿ ಮತ್ತು ಶಾಸಕಾಂಗದ ಕಾರ್ಯಕಲಾಪಗಳನ್ನು ಮಾತ್ರ ರಾಜಕಾರಣವೆಂದು ಸಂಕುಚಿತವಾಗಿ ಗ್ರಹಿಸಿಕೊಂಡಿರುವ ನಮ್ಮೆಲ್ಲರಿಗೂ 'ಭಾರತ್ ಜೋಡೊ', ರಾಜಕಾರಣಕ್ಕೆ ವಿಭಿನ್ನ ಅರ್ಥ ಮತ್ತು ವ್ಯಾಖ್ಯಾನಗಳಿವೆ ಎನ್ನುವುದನ್ನು ತಿಳಿಸುವಂತಹ ಯಾತ್ರೆಯೂ ಆಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಕಾರಣದಿಂದ, ಆಧುನಿಕ ಭಾರತದ ಸೈದ್ಧಾಂತಿಕ ರಾಜಕಾರಣದಲ್ಲಿ ಕಂಡುಬರುವ ಎಲ್ಲ ಆಶಯಗಳನ್ನು, ಆಕಾಂಕ್ಷೆಗಳನ್ನು ಮತ್ತು ಪ್ರತಿಭಟನೆಯ ಸ್ವರಗಳನ್ನು ಜೋಡಿಸುವ ಒಂದು ಚಾರಿತ್ರಿಕ ಪ್ರಯತ್ನವಾಗಿ 'ಭಾರತ್ ಜೋಡೊ' ಕಾಣಿಸುತ್ತದೆ. ಚಿಂತಕ ಯೋಗೇಂದ್ರ ಯಾದವ್ ಸರಿಯಾಗಿಯೇ ಗುರುತಿಸಿರುವಂತೆ 'ಭಾರತ್ ಜೋಡೊ' ಎಂಬ ಈ ಅಭಿಯಾನವು ಪ್ರಜೆಗಳನ್ನು ಪ್ರಭುತ್ವದೊಂದಿಗೆ, ಗಣವನ್ನು ರಾಜ್ಯದೊಂದಿಗೆ, ಧರ್ಮವನ್ನು ಮರ್ಮದೊಂದಿಗೆ ಜೋಡಿಸುವ ಒಂದು ಚಲನಶೀಲ ರಾಜಕೀಯ ಪ್ರಕ್ರಿಯೆಯೂ ಹೌದು.

ಚುರುಮುರಿ



ಟೂರ್ ಟೈಂಟೇಬಲ್!

• ತುರುವೇಕೆರೆ ಪ್ರಸಾದ್

ಪರ್ಮೇಶಿ ಹರಟೆಕಟ್ಟೇಲಿ ಹ್ಯಾಪ್ ಮೋರೆ ಹಾಕ್ಕಂಡು 'ಖರ್ಚಿನ ಮೇಲೆ ಖರ್ಚು ಕಣ್ರೋ, ಹೇಗೆ ದುಡ್ ಹೊಂದಿಸೋದು ಅಂತಾನೇ ಗೊತ್ತಾಗ್ತಿಲ್ಲ' ಅಂತ ತಲೆ ಕೆರೆದುಕೊಂಡ.

'ಅಲ್ರೋ, ಇದು ಶೂನ್ಯಮಾಸ, ಮದುವೆ ಮುಂಜಿ ಅಂತ ಓಡಾಟ ಇಲ್ಲ, ಸರ, ನೆಕ್ಲೇಸ್ ಕೊಡ್ಸೋ ಹಾಗಿಲ್ಲ. ಮತ್ತೇನ್ ಖರ್ಚೋ ನಿಂಗೆ?'

'ಅದೇ ನೋಡು ಎಡವಟ್ಟಾಗಿರೋದು! ಈಗ ಏನೂ ಇಲ್ಲ ಅಂತ ಎಲ್ಲಾದ್ರೂ ಕರ್ಕೊಂಡ್ ಹೋಗಿ ಅಂತ ನನ್ ಹೆಂಡ್ತಿ ತಲೆ ಮೇಲೆ ಕೂತಿದಾಳೆ'.

'ಹೆಂಡ್ತಿ ಕೇಳುದ್ರೆ ಇಲ್ಲ ಅನ್ನಕ್ಕಾಗುತ್ತಾ? ಎಲ್ಲಾದ್ರೂ ಕರ್ಕೊಂಡ್ ಹೋಗೋ...'

'ಎಲ್ಲೆಲ್ಲಿ ಅಂತ ಕರ್ಕೊಂಡ್ ಹೋಗೋದು? ಮಕ್ಕಳ ಜೊತೆ ಸೇರ್ಕೊಂಡು ಒಂದು ಟೂರ್ ಟೈಂಟೇಬಲ್ಲೇ ಹಾಕಿದಾಳೆ. ಅದರ ಪ್ರಕಾರ, ಫಸ್ಟ್ ವೀಕೆಂಡಲ್ಲಿ ದೇವಸ್ಥಾನಗಳು, ಎರಡನೇ ವೀಕೆಂಡಲ್ಲಿ ಬೀಚ್‌ಗಳು, ಮೂರನೇ ವೀಕೆಂಡಲ್ಲಿ ಹಿಲ್‌ಸ್ಟೇಷನ್ನು, ನಾಲ್ಕನೇ ವೀಕೆಂಡಲ್ಲಿ ನದಿ, ಜೋಗ್‌ಫಾಲ್ಸು...'

'ಸಾಯೋತನಕ ಸಂಸಾರದಲ್ಲಿ ಗಂಡಾಗುಂಡಿ ಇದ್ದದ್ದೇ... ಕರ್ಕೊಂಡ್ ಹೋಗ್ಲೇಬೇಕು ಕಣೋ'.

'ಇಷ್ಟೇ ಆಗಿದ್ರೆ ಪರವಾಗಿರ್ಲಿಲ್ಲ ಕಣ್ರೋ, ಇಯರ್ ಎಂಡ್‌ಗೆ ನಾರ್ತ್ ಇಂಡಿಯಾ ಟೂರಂತೆ, ಆಗ್ರಾ, ಜೈಪುರ್, ಡಾರ್ಜಿಲಿಂಗ್‌ಗೆ ಹೋಗ್ ಬಂದ್‌ಬಿಡೋಣ ಡಾರ್ಲಿಂಗ್ ಅಂತಿದಾಳೆ, ಎಲ್ಲಾ ಎಂಡ್‌ಗಳೂ ದಂಡೆತ್ತಿ ಬಂದಿವೆ. ದುಡ್ಡು ಎಲ್ಲಿಂದ ಹೊಂಚೋದು ಅಂತ ಗೊತ್ತಾಗ್ತಿಲ್ಲ'.

'ನೋಡಪ್ಪ, ನಾವೇ ಅಷ್ಟೋ ಇಷ್ಟೋ ಕೊಡ್ತೀವಿ. ಆದರೆ ಈ ಟೂರ್ ಟೈಂಟೇಬಲ್ ನಮ್ ಹೆಂಡ್ತೀರಿಗೆ ಸಿಗದ ಹಾಗೆ ನೋಡ್ಕೊಬೇಕು ಸರಿನಾ?' ಎಂದು ಕಂಡೀಷನ್ ಹಾಕಿದ ಕಲ್ಲೇಶಿ.

'ಈಗ ನಿಮ್ ದುಡ್ಡು ಬೇಡ ಕಣ್ರೋ, ಹೊಸ ವರುಷಕ್ಕೆ ಒಬ್ನೇ ಎಲ್ಲಾದ್ರೂ ಹೋಗ್ಬೇಕು ಅಂತಿದೀನಿ, ಆವಾಗ ಕೊಡುವ್ರಂತೆ'.

'ಅಲ್ರೋ ಇಷ್ಟೆಲ್ಲಾ ಸುತ್ತಿ ಮತ್ತೆ ಜನವರೀಲಿ ನಿಂದು ಟೂರಾ?'

'ಟೂರಲ್ಲಲೇ! ಬ್ಯಾಂಕ್ ಮ್ಯಾನೇಜರ್ರು, ಟೂರ್‌ಗೆ ಸಾಲ ಕೊಟ್ಟಿರೋರು ಹುಡುಕ್ತಾರಲ್ಲ, ಅವರಿಂದ ತಲೆ ಮರೆಸ್ಕೊಂಡ್ ಎಲ್ಲಾದ್ರೂ ಹೋಗ್ಬೇಕಲ್ಲ, ಕಾಶಿಗೋ ರಾಮೇಶ್ವರಕ್ಕೋ ಹೋಗ್ತೀನಿ' ಪರ್ಮೇಶಿ ಮುಖ ಹಿಂಡಿ ಮೇಲೆದ್ದ.

ಸಂಗತ

ಉರ್ದುವಿಗಿಂತ ಕನ್ನಡ ಮಾಧ್ಯಮವೇ ಸರಿ!

ಉರ್ದು ಮಾಧ್ಯಮದಲ್ಲಿ ಓದಿದ ಹೆಚ್ಚಿನ ಮಕ್ಕಳು ಅರ್ಧಕ್ಕೇ ಶಾಲೆಯನ್ನು ಬಿಡುತ್ತಾರೆ ಎಂಬ ವಾಸ್ತವವು ಒಂದು ಸಮುದಾಯದ ಸ್ಥಿತಿಯನ್ನೂ ಬಿಂಬಿಸುತ್ತದೆ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ರಾಜ್ಯದಲ್ಲಿನ ಉರ್ದು ಶಿಕ್ಷಣದ ದಾರುಣ ಸ್ಥಿತಿಯನ್ನು ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಡಿ. 13) ಅನಾವರಣಗೊಳಿಸಿದೆ. ನಮ್ಮ ರಾಜ್ಯದಲ್ಲಿ ಉರ್ದು ಎಂದರೆ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಉರ್ದು ಮಾಧ್ಯಮದಲ್ಲಿ ಓದಿದ 'ಹೆಚ್ಚಿನ ಮಕ್ಕಳು ಐದನೇ ತರಗತಿಯ ನಂತರ ಶಾಲೆಯನ್ನು ಬಿಟ್ಟುಬಿಡುತ್ತಾರೆ' ಎಂಬ ವಾಸ್ತವವು ಒಂದು ಸಮುದಾಯದ ಸ್ಥಿತಿಯನ್ನೂ ಬಿಂಬಿಸುತ್ತದೆ ಎಂಬುದು ಆತಂಕದ ವಿಚಾರ.

ಪ್ರಾಥಮಿಕ ಶಿಕ್ಷಣವನ್ನು ಮಗುವಿನ ಮನೆಭಾಷೆಯಲ್ಲಿ ನೀಡಿದರೆ ಅತ್ಯುತ್ತಮ ಎಂದು ಎಲ್ಲರೂ ಹೇಳುತ್ತೇವೆ. ಆದರೆ, ಈ ನಡುವೆ ಕೆಲವು ವಾಸ್ತವಗಳನ್ನು ನಾವು ಅರ್ಥ ಮಾಡಿಕೊಳ್ಳುವುದಿಲ್ಲ. ಉರ್ದುವನ್ನೇ ಉದಾಹರಣೆಯಾಗಿ ಇಟ್ಟುಕೊಂಡು ಹೇಳುವುದಾದರೆ, ರಾಜ್ಯದಲ್ಲಿ ಮುಸ್ಲಿಂ ಸಮುದಾಯದವರು ಮನೆಯಲ್ಲಿ ಬಳಸುವ ಮಾತನ್ನು 'ಉರ್ದು' ಎನ್ನುತ್ತೇವೆ. ಹೀಗೆಂದ ಕೂಡಲೇ ನೀವು ಸಿನಿಮಾಗಳಲ್ಲಿ ಶಾಯರಿಗಳಲ್ಲಿ ಕೇಳಿಸಿಕೊಳ್ಳಬಹುದಾದ ಉರ್ದು ಎಂದು ಭಾವಿಸಬೇಡಿ. ಅಲ್ಲದೆ ಈ ಮನೆಮಾತಿನ ಉರ್ದು ಭಾಷೆಯು ಕುಟುಂಬ, ಸಮುದಾಯ, ಧಾರ್ಮಿಕ ಆಚರಣೆಗಳಂತಹ ಅಗತ್ಯವನ್ನು ಪೂರೈಸುವಷ್ಟೇ ಸಮರ್ಥವಾಗಿರುತ್ತದೆ. ಆದರೆ, ಉರ್ದು ಮಾಧ್ಯಮದ ಪ್ರಾಥಮಿಕ ಶಿಕ್ಷಣದಲ್ಲಿ, ಪಠ್ಯ-ಪುಸ್ತಕಗಳಲ್ಲಿ ಬಳಕೆಯಾಗುವ ಶಾಲಾ ಉರ್ದು ಈ ಗ್ರಾಮ್ಯ ರೀತಿಯ ಉರ್ದುವಿಗಿಂತ ಬಹಳ ಭಿನ್ನ.

ಉರ್ದು ಭಾಷೆಯ ಇನ್ನೊಂದು ವೈಶಿಷ್ಟ್ಯವೆಂದರೆ ಅದರ ಲಿಪಿ ವ್ಯವಸ್ಥೆ. ಉರ್ದು ಭಾಷೆಯನ್ನು ಪರ್ಶಿಯೋ-ಅರೇಬಿಕ್ ಲಿಪಿಯಲ್ಲಿ ಬಲಗಡೆಯಿಂದ ಎಡಗಡೆಗೆ ಬರೆಯಲಾಗುತ್ತದೆ. ಇದು ಆಲ್ಫಬೆಟಿಕ್ ಲಿಪಿ ವ್ಯವಸ್ಥೆಯಾದ್ದರಿಂದ ಕೇವಲ 36 ಮೂಲಾಕ್ಷರಗಳಿದ್ದರೂ, ಇದನ್ನು ಕಲಿಯುವುದು ಕನ್ನಡಕ್ಕಿಂತ ಕಷ್ಟ. ಇನ್ನು ಇದನ್ನು ಕಲಿಸಲು ಉರ್ದುವಿನಲ್ಲಿ ಶಿಕ್ಷಣ ಪಡೆದ ಶಿಕ್ಷಕರ ಕೊರತೆ, ಒಟ್ಟಾರೆ ಶಿಕ್ಷಕರ ಕೊರತೆ ಇಂಥ ಸಮಸ್ಯೆಗಳಿಂದಾಗಿಯೂ ಉರ್ದು ಮಾಧ್ಯಮದಲ್ಲಿ ಓದುವ ಮಕ್ಕಳು ಉಳಿದವರೊಂದಿಗಿನ ತುಲನೆಯಲ್ಲಿ ಹಿಂದುಳಿಯುತ್ತಾರೆ. ಐದನೇ ತರಗತಿಯವರೆಗೆ ಉರ್ದು ಮಾಧ್ಯಮದಲ್ಲಿ ಓದಿ, ಒಂದು ಭಾಷೆಯಾಗಿ ಕನ್ನಡವನ್ನು ಹಾಗೋ ಹೀಗೋ ಕಲಿತಿದ್ದರೂ ಈ ಮಕ್ಕಳಿಗೆ ಮುಂದೆ ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮಕ್ಕೆ ಹೊರಳಿಕೊಳ್ಳಲು ಹೆಚ್ಚು ಕಷ್ಟವಾಗುತ್ತದೆ. ಆದರೂ, ಮುಸ್ಲಿಂ ಪೋಷಕರು ತಮ್ಮ ಮಕ್ಕಳನ್ನು ಉರ್ದು ಮಾಧ್ಯಮದ ಶಾಲೆಗೆ ಏಕೆ ಕಳಿಸುತ್ತಾರೆ?

ಭಾರತ ಸಂವಿಧಾನದ ವಿಧಿ 350ಎ, ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡುವುದು ಸರ್ಕಾರದ ಜವಾಬ್ದಾರಿ ಎಂದಿದೆ. ಮಗು ಮನೆಯಲ್ಲಿ ಮೊದಲು ಕರಗತ ಮಾಡಿಕೊಳ್ಳುವ ಭಾಷೆಯೇ 'ಮಾತೃಭಾಷೆ'. ಆದರೆ, ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸಿದ ಆದೇಶದ ವಿರುದ್ಧ ಖಾಸಗಿ ಶಾಲಾ ಸಂಸ್ಥೆಗಳು ಸುಪ್ರೀಂ ಕೋರ್ಟ್‌ನಲ್ಲಿ ಹೂಡಿದ ವ್ಯಾಜ್ಯದಲ್ಲಿ, ನ್ಯಾಯಾಲಯವು ಭಾಷಾ ಅಲ್ಪಸಂಖ್ಯಾತರ ಹಿತವನ್ನು ಕಾಪಾಡುವ ನೆಪದಲ್ಲಿ ವಿಧಿ 350 ಎ-ಯನ್ನು ಆಧಾರವಾಗಿಟ್ಟುಕೊಂಡು 2014ರ ಮೇ 6ರಂದು ನೀಡಿದ ಒಂದು ಮಹತ್ವದ ತೀರ್ಪಿನಲ್ಲಿ, ಮಾತೃಭಾಷೆ ಕನ್ನಡವಲ್ಲದ ಮಕ್ಕಳು ತಮ್ಮ ತಮ್ಮ ಮಾತೃಭಾಷೆಯ ಮಾಧ್ಯಮದಲ್ಲಿ ಓದಬಹುದು ಎಂದು ಹೇಳಿತು. 'ವೈಯಕ್ತಿಕ ಪ್ರಕರಣಗಳಲ್ಲಿ ಮಗುವಿನ ಆ ಭಾಷೆ ಯಾವುದು ಎಂಬುದನ್ನು ಪೋಷಕರು ತೀರ್ಮಾನಿಸುತ್ತಾರೆ' ಎಂಬ ಮಾತನ್ನೂ ಸೇರಿಸಿತು. ಇದು ವಾಸ್ತವವಾಗಿ ಅನುಕೂಲಕರವಾಗಿ ಪರಿಣಮಿಸಿದ್ದು ಕನ್ನಡೇತರ ಭಾರತೀಯ ಭಾಷಾ ಮಾಧ್ಯಮದ ಶಾಲೆಗಳಿಗಲ್ಲ, ಬದಲಿಗೆ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ನಡೆಸುತ್ತಿರುವ ಶೈಕ್ಷಣಿಕ ವ್ಯಾಪಾರಿಗಳಿಗೆ. ಕನ್ನಡೇತರ ಭಾಷಿಕ ಮಕ್ಕಳಷ್ಟೇ ಅಲ್ಲ, ಕನ್ನಡ ಅಭಿಮಾನದ ಬಗ್ಗೆ ಮೈಯುಬ್ಬಿಸಿಕೊಂಡು ಏರುಧ್ವನಿಯಲ್ಲಿ ಮಾತಾಡುವ ಕನ್ನಡ ಕಲಿಗಳೂ ತಮ್ಮ ಮಕ್ಕಳನ್ನು ಸೇರಿಸುವುದು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ.

ಇವರೆಲ್ಲರೂ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಪೋಷಕರು. ಆದರೆ, ತೀರಾ ಬಡ ಪೋಷಕರಿಗೆ ಈ ತರಹದ ಆಯ್ಕೆಯ ಭಾಗ್ಯವಿರುವುದಿಲ್ಲ. ಅವರು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಿಗೆ ಕಳಿಸುತ್ತಾರೆ. ಆದರೆ ಉರ್ದು ಮಾಧ್ಯಮ ಶಾಲೆಗಳಿಗೆ ಸೇರುವ ಮಕ್ಕಳ ಸನ್ನಿವೇಶವೇ ಬೇರೆ. ಇರುವ ಶಾಲೆಗಳಲ್ಲಿ ಹಾಜರಾತಿ ಉಳಿಸಿಕೊಳ್ಳಬೇಕು, ಅಲ್ಲಿರುವ ಶಿಕ್ಷಕರಿಗೆ ಕೆಲಸ ಬೇಕು ಎಂಬ ಕಾರಣಕ್ಕೆ, ಬೇರೆಬೇರೆ ಕನ್ನಡ ಮಾಧ್ಯಮ ಶಾಲೆಗಳಿಗೆ ಹೋಗಬಹುದಾಗಿದ್ದ ಮಕ್ಕಳು ಈ ಶಾಲೆಗಳಿಗೆ ಸೇರುತ್ತಾರೆ. ಜೊತೆಗೆ ಉರ್ದು ಎನ್ನುವುದು ಕುರಾನಿನ (ಅರೇಬಿಕ್) ಭಾಷೆಗೆ ಹತ್ತಿರವಾದ್ದರಿಂದ ಅದು 'ನಮ್ಮ ಭಾಷೆ' ಎಂಬ ಧಾರ್ಮಿಕ ಭಾವನೆಯೂ ಇಲ್ಲಿ ಕೆಲಸ ಮಾಡುತ್ತದೆ.

ನಮ್ಮ ಮನೆಮಾತು ಉರ್ದು ಆಗಿದ್ದರೂ ನಮ್ಮ ಮಕ್ಕಳು ಏಳನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಓದಿದರು. ನಮ್ಮ ಮಕ್ಕಳು, ಮನೆಮಾತು ಉರ್ದುವಿನ ಜೊತೆ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಚೆನ್ನಾಗಿ ಕಲಿತಿದ್ದರು. ಇದರ ಪ್ರಯೋಜನವನ್ನು ಪಡೆಯುವ ಸಲುವಾಗಿಯೇ ಮಾಡಿದ ತಾರ್ಕಿಕ ನಿರ್ಣಯ ಇದಾಗಿತ್ತು. ರಾಜ್ಯದ ಹೆಚ್ಚಿನ ಉರ್ದು ಭಾಷೀಯರು ಸಹಜವಾಗಿಯೇ ಕನ್ನಡದಲ್ಲಿ ಸಮರ್ಥ ದ್ವಿಭಾಷಿಗಳು. ಇದರ ಪ್ರಯೋಜನವನ್ನು ಪಡೆದು ಮುಸ್ಲಿಂ ಮಕ್ಕಳನ್ನೂ ಮೊದಲಿಂದಲೇ ಕನ್ನಡ ಮಾಧ್ಯಮದಲ್ಲಿ ಓದಿಸುವುದು ಹೆಚ್ಚು ಒಳ್ಳೆಯದು. ಉರ್ದುವನ್ನು ಬೇಕಾದರೆ ಒಂದು ಭಾಷೆಯಾಗಿ ಕಲಿಯಬಹುದು.

ವಾಚಕರ ವಾಣಿ

ವೈದ್ಯರ ಅಲಭ್ಯತೆ ಗಮನಿಸಿ

ಕರ್ನಾಟಕ ಸರ್ಕಾರವು ಏಕಕಾಲಕ್ಕೆ 100 'ನಮ್ಮ ಕ್ಲಿನಿಕ್'ಗಳಿಗೆ ಚಾಲನೆ ನೀಡಿರುವುದು ಸ್ವಾಗತಾರ್ಹ. ಆದರೆ ಈಗಾಗಲೇ ಇರುವ ಹಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಲಭ್ಯತೆ ಇಲ್ಲದಿರುವುದನ್ನು ಗಮನಿಸದಿರುವುದು ದುರದೃಷ್ಟಕರ. ಕೆಲವೆಡೆ ವೈದ್ಯರಿದ್ದರೂ ಅವರು ತಮ್ಮದೇ ಆದ ಖಾಸಗಿ ಕ್ಲಿನಿಕ್‌ಗೆ ಹಾಜರಾಗುವಷ್ಟು ನಿಷ್ಠರಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಜರಾಗದಿರುವುದು ನಮ್ಮ ದುರ್ದೈವ. ಇಷ್ಟೇ ಅಲ್ಲದೆ, ಹಲವು ಬಾರಿ ವೈದ್ಯರನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಭೆಗಳಲ್ಲಿ ಭಾಗವಹಿಸಲು ಪದೇಪದೇ ಕರೆಯುವುದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಅಲಭ್ಯತೆ ಹೆಚ್ಚಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವ ದಿಸೆಯಲ್ಲಿ ಆಗಬೇಕಿರುವ ಕೆಲಸಗಳತ್ತ ರಾಜ್ಯ ಸರ್ಕಾರ ಗಮನಹರಿಸುವುದು ತುರ್ತು ಅಗತ್ಯ.

ಸುನೀಲ ಟಿ.ಪಿ., ತಳಗವಾದಿ, ಮಳವಳ್ಳಿ

ಗ್ರಾಮಸ್ಥರ ಆಗ್ರಹಕ್ಕೆ ಅರ್ಥ ಇದೆ

ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಇತ್ತೀಚೆಗೆ ಚಿರತೆಯೊಂದು ಅರಣ್ಯ ಇಲಾಖೆಯವರು ಇಟ್ಟ ಬೋನಿಗೆ ಬಿದ್ದಿದ್ದು, ಊರಿನವರಿಗೆಲ್ಲ ನೆಮ್ಮದಿಯನ್ನು ನೀಡಿದ ಸಂಗತಿಯಾಗಿದೆ. ಆದರೆ ಅದಕ್ಕಿಂತಲೂ ಹೆಚ್ಚಿನದಾದ ವಿಷಯವೆಂದರೆ, ಆ ಗ್ರಾಮಸ್ಥರು ನಡೆಸಿದ ಧರಣಿ! ಸೆರೆ ಹಿಡಿದ ಚಿರತೆಯನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡು ಹೋಗುವ ಮೊದಲು, ಆ ಚಿರತೆಯಿಂದ ಸಾವನ್ನಪ್ಪಿದವರ ಕುಟುಂಬದವರಿಗೆ ಪರಿಹಾರ ವಿತರಿಸಬೇಕೆಂದು ಆಗ್ರಹಿಸಿ ಈ ಧರಣಿ ನಡೆಯಿತು.

ಆಶ್ವಾಸನೆ ನೀಡುವುದು ಈಗ ಸುಲಭದ ಕೆಲಸವಾಗಿ ಪರಿಣಮಿಸಿದೆ. ಒಂದೆಡೆ ಅಧಿಕಾರಿಗಳು ಆಶ್ವಾಸನೆ ನೀಡಿ ಜಾರಿಕೊಳ್ಳುತ್ತಾರೆ. ಮತ್ತೊಂದೆಡೆ ಜನಪ್ರತಿನಿಧಿಗಳು ಹಾಗೂ ರಾಜಕೀಯ ಮುಖಂಡರು ಭರವಸೆ ನೀಡಿ, ಅಷ್ಟೇ ಬೇಗ ಮಾತನ್ನು ಮರೆಯುತ್ತಾರೆ. ಈ ನೆಲೆಯಲ್ಲಿ ಆ ಗ್ರಾಮಸ್ಥರ ಆಗ್ರಹ ಸರಿಯಾಗಿಯೇ ಇದೆ.

ಕುಮಾರ ಚಲವಾದಿ, ಹಾಸನ

ಬ್ರಿಟಿಷರಿಗಿಂತ ಈಗಿನವರಿಗೇ ಟಿಪ್ಪು ಹೆಚ್ಚು ಸಿಂಹಸ್ವಪ್ನ?!

ಟಿಪ್ಪು ಸುಲ್ತಾನ್, ಬ್ರಿಟಿಷ್ ದಾಳಿಕೋರರಿಗೆ ಹುಲಿಯಾಗಿ ಕಾಡಿದ್ದಕ್ಕಿಂತ, ಪ್ರಸಕ್ತ ಆಡಳಿತಾರೂಢ ಪಕ್ಷಕ್ಕೆ ಹೆಚ್ಚು ಸಿಂಹಸ್ವಪ್ನವಾಗಿ ಕಾಣಿಸುತ್ತಿದ್ದಾನೋ ಏನೋ! ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿನ ಕೆಲವು ಪೂಜಾವಿಧಿಗಳಲ್ಲಿರುವ 'ಸಲಾಂ' ಹೆಸರನ್ನು ಬದಲಿಸಹೊರಟಿರುವ ರಾಜ್ಯ ಸರ್ಕಾರದ ಯತ್ನವನ್ನು, ಸಂಪಾದಕೀಯದಲ್ಲಿ (ಪ್ರ.ವಾ., ಡಿ. 14) 'ಕುಚೋದ್ಯ' ಎಂದು ಕರೆದಿರುವುದು ಸರಿಯಾಗಿದೆ. ಟಿಪ್ಪು ಸುಲ್ತಾನ್ ಎಂಬ ದೊರೆ ಇಟ್ಟಿದ್ದೆಂಬ ಗುಮಾನಿಯಿಂದಾಗಿ 'ಸಲಾಂ' ಹೆಸರನ್ನು ತೆಗೆದುಹಾಕಿದರೆ ಎಷ್ಟು ಮಹಾ ಭಕ್ತಗಣ ತುಷ್ಟಗೊಂಡೀತು? ಅದಷ್ಟೇ ಮಾರ್ಜಿನ್ ಬಹುಮತ ಮಾತ್ರದಿಂದಲೇ ಅಧಿಕಾರ ಗಿಟ್ಟಿಸುವುದು ಸಾಧ್ಯವಾದರೆ, ಅದು ಪ್ರಜಾಪ್ರಭುತ್ವದ ಅವನತಿಯೇ ಸರಿ!

ಕೊಲ್ಲೂರು, ಮೇಲುಕೋಟೆಯಂಥ ಊರುಗಳಲ್ಲಿನ, ಸರ್ಕಾರಿ ಆಧಿಪತ್ಯದ ಕೆಲವು ದೇವಾಲಯಗಳಲ್ಲೇನೋ 'ಸಲಾಂ ಆರತಿ', 'ಸಲಾಂ ಮಂಗಳಾರತಿ'ಯು ಟಿಪ್ಪು ಪ್ರೇರಣೆಯಿಂದ ಬಂದಿದ್ದಿರಬಹುದು. ಆದರೆ 'ದೀವಟಿಗೆ ಸಲಾಂ' ಎಂಬ ಆಚರಣೆಯು ವ್ಯಾಸರಾಜರ ಹೆಸರಿನ ಖಾಸಗಿ ಮಠದಲ್ಲೂ ಜಾರಿಯಲ್ಲಿದೆ. ಇಲ್ಲಿ ಸಂಜೆ ನಡೆಯುವ 'ದರ್ಬಾರ್' ಸಂದರ್ಭದಲ್ಲಿ, ಸ್ವಾಮಿಗಳು ಹಸಿರು ಛತ್ರಿಯಡಿಯ ಪೀಠದಲ್ಲಿ ಹಸಿರು ಪೇಟ ಮತ್ತು ಹಸಿರು ಶಾಲು ಧರಿಸಿ ಕುಳಿತಿರುತ್ತಾರೆ. ಆ ಸಮಯದಲ್ಲಿ ದೀವಟಿಗೆಧಾರಿಗಳಿಬ್ಬರು ಪೀಠಕ್ಕೆ ಮೂರು ಬಾರಿ ಅರಬ್ಬಿ ಶೈಲಿಯಲ್ಲಿ ಸಲಾಂ ಸಲ್ಲಿಸುತ್ತಾರೆ ಮತ್ತು ವಂದಿಮಾಗಧರು ನಿಯಮಿತ ನುಡಿಗಟ್ಟಿನಲ್ಲಿ ಪೀಠದ ಮಹತ್ವ ಸಾರುತ್ತಾರೆ. ಇದರಲ್ಲಿ ಟಿಪ್ಪು ಉಲ್ಲೇಖ ಎಲ್ಲೂ ಇರುವುದಿಲ್ಲ. ಇದು, ವಿಜಯನಗರ ಕಾಲದಲ್ಲಿ, ಅಂದಿನ ಬಿಜಾಪುರದ ಇಬ್ರಾಹಿಂ ಆದಿಲ್ ಶಾಹನು ವ್ಯಾಸರಾಜರಿಗೆ ಗೌರವ ತೋರಿದ ಕುರುಹು ಎಂಬುದು ಐತಿಹ್ಯ.

ಇಂತಹ ಆಚರಣೆಗಳು ಐತಿಹಾಸಿಕ ಸತ್ಯಾಸತ್ಯತೆಗಿಂತ ಹೆಚ್ಚಾಗಿ, ದೇಶದ ಪ್ರಜಾಸಮುದಾಯದ ಭಾವೈಕ್ಯಕ್ಕೆ ಇಂಬು ನೀಡುವಂಥವು. ಕಚ್ಚಾಡುವವರನ್ನು ಒಂದು ಗುರಿಯತ್ತ ಕೊಂಡೊಯ್ಯುವಲ್ಲಿ ಪ್ರಜಾಸತ್ತೆಯ ಸೆಲೆಯಿರುತ್ತದೆಯೇ ವಿನಾ ಒಂದಾಗಿರುವವರನ್ನು ಕಿತ್ತು ಎರಚಾಡುವುದರಲ್ಲಿ ಅಲ್ಲ!

ಆರ್‌.ಕೆ.ದಿವಾಕರ, ಬೆಂಗಳೂರು

ಶಿಕ್ಷಕನೇ ಅಡ್ಡದಾರಿ ಹಿಡಿದರೆ...

ಬ್ಯಾಡಗಿ ತಾಲ್ಲೂಕಿನ ಗಾಳಪೂಜಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂದಿ ಶಿಕ್ಷಕರೊಬ್ಬರು ದೇವಸ್ಥಾನಗಳಲ್ಲಿ ಕಳವು ಮಾಡುತ್ತಿದ್ದರು ಎಂಬ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಸುದ್ದಿ (ಪ್ರ.ವಾ., ಡಿ. 14) ಓದಿ ಗಾಬರಿಗೆ ಒಳಗಾದೆ. ಮಕ್ಕಳಿಗೆ ಸನ್ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಬೇಕಾಗಿದ್ದ ಶಿಕ್ಷಕರೇ ಹೀಗೆ ಅಡ್ಡದಾರಿ ಹಿಡಿದಿರುವುದು ದುರಂತದ ಸಂಗತಿ. ಐಷಾರಾಮಿ ಬದುಕಿನ ಹಂಬಲ ಎಂಥವರನ್ನೂ ಹಾದಿ ತಪ್ಪಿಸಬಹುದು ಎಂಬುದಕ್ಕೆ ಇದೊಂದು ನಿದರ್ಶನ.

ಸರ್ಕಾರಿ ನೌಕರಿ. ತಕ್ಕಮಟ್ಟಿಗೆ ಸಂಬಳದ ಜೊತೆ ಸೇವಾ ಭದ್ರತೆ ಇರುವಂಥ ಉದ್ಯೋಗ. ಗ್ರಾಮದಲ್ಲಿ ವಾಸ. ಸಮಾಜದಲ್ಲಿ ಗೌರವ. ಮಕ್ಕಳಿಗೆ ಪಾಠ ಹೇಳಿಕೊಂಡು ನೆಮ್ಮದಿಯಿಂದ ಜೀವನ ನಡೆಸಲು ಇದಕ್ಕಿಂತ ಇನ್ನೇನು ಬೇಕು? ಶಿಕ್ಷಕ ವೃತ್ತಿಗೆ ಕಳಂಕ ತಂದಿರುವ ಇಂಥವರಿಗೆ ತ್ವರಿತವಾಗಿ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು.

ಸೌಜನ್ಯ ಟಿ., ದೊಡ್ಡಬಳ್ಳಾಪುರ

ದಿಟ್ಟ ಉತ್ತರ ನೀಡಬೇಕಾಗಿದೆ

ಅರುಣಾಚಲ ಪ್ರದೇಶದ ತವಾಂಗ್ ವಲಯದಲ್ಲಿ ಚೀನಾ ಸೇನೆಯು ಭಾರತದ ನೆಲದೊಳಗೆ ನುಸುಳಲು ಯತ್ನಿಸಿರುವುದು ಉದ್ಧಟತನದ ವರ್ತನೆ. ಚೀನಾ ಪದೇ ಪದೇ ಸಂಘರ್ಷಕ್ಕೆ ಮುಂದಾಗುತ್ತಿದೆ. ಈ ಆಕ್ರಮಣಕಾರಿ ನಡೆಗೆ ಗಟ್ಟಿಯಾಗಿ ಪ್ರತಿಕ್ರಿಯೆ ನೀಡಬೇಕು. ಬಹಳ ಕಾಲದಿಂದ ನನೆಗುದಿಗೆ ಬಿದ್ದಿರುವ ಇಂತಹ ಗಡಿ ಸಮಸ್ಯೆಗಳನ್ನು ನಿಭಾಯಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತಜ್ಞರ ಜತೆ ಚರ್ಚಿಸಬೇಕು. ಮುಚ್ಚಿಡುವುದರಿಂದ ನಮಗೇ ನಷ್ಟ. ದಿಟ್ಟವಾಗಿ ಉತ್ತರ ಕೊಡಬೇಕು.

ಮಂಜುನಾಥ್ ಬಿ., ಶ್ರೀನಿವಾಸಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇಂದ್ರ ಸರ್ಕಾರದ 9.95 ಲಕ್ಷ ಹುದ್ದೆಗಳು ಖಾಲಿ

ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ ಎಂದು 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದರು. ಆನಂತರದ ವರ್ಷಗಳಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಎಂಬುದರ ಅಧಿಕೃತ ದಾಖಲೆ ಇಲ್ಲ. ಆದರೆ, ಮಂಜೂರಾಗಿರುವ ಸರ್ಕಾರಿ ಹುದ್ದೆಗಳೂ ಖಾಲಿಯಾಗುತ್ತಿವೆ. ಹೀಗೆ ಖಾಲಿಯಾದ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿಲ್ಲ ಎಂಬುದನ್ನು ಸರ್ಕಾರದ್ದೇ ದಾಖಲೆಗಳು ಹೇಳುತ್ತವೆ. ಈಗ ಕೇಂದ್ರ ಸರ್ಕಾರದ ಒಟ್ಟು 9.95 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ಸರ್ಕಾರವೇ ಲೋಕಸಭೆಗೆ ಹೇಳಿದೆ

ಖಾಲಿ ಹುದ್ದೆಗಳು ಶೇ 136ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರದ ವಿವಿಧ ಇಲಾಖೆ ಮತ್ತು ಸಚಿವಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. 2014ರ ಮಾರ್ಚ್‌ನಲ್ಲಿ ಇಂತಹ ಒಟ್ಟು 4.21 ಲಕ್ಷ ಹುದ್ದೆಗಳು ಖಾಲಿ ಇದ್ದವು. 2021ರ ಮಾರ್ಚ್ ವೇಳೆಗೆ ಖಾಲಿ ಇರುವ ಹುದ್ದೆಗಳ ಸಂಖ್ಯೆ 9.95 ಲಕ್ಷಕ್ಕೆ ಏರಿಕೆಯಾಗಿದೆ.



- 2014ರಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ಹೋಲಿಸಿದರೆ, 2021ರ ಖಾಲಿ ಇರುವ ಹುದ್ದೆಗಳ ಸಂಖ್ಯೆಯಲ್ಲಿ ಶೇ 136ರಷ್ಟು ಏರಿಕೆಯಾಗಿದೆ. ಈ ಅವಧಿಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯಲ್ಲಿ 5.74 ಲಕ್ಷದಷ್ಟು ಏರಿಕೆಯಾಗಿದೆ
- 2018ಕ್ಕೆ ಹೋಲಿಸಿದರೆ, 2019ರಲ್ಲಿ ಖಾಲಿ ಇದ್ದ ಸಂಖ್ಯೆಗಳಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ. ಒಂದೇ ವರ್ಷದಲ್ಲಿ 2.36 ಲಕ್ಷದಷ್ಟು ಹುದ್ದೆಗಳು ಖಾಲಿ ಆಗಿವೆ
- 2020ರ ಮಾರ್ಚ್‌ನಿಂದ 2021ರ ಮಾರ್ಚ್ ನಡುವೆ ಖಾಲಿ ಇರುವ ಹುದ್ದೆಗಳ ಸಂಖ್ಯೆಯಲ್ಲಿ 1.09 ಲಕ್ಷದಷ್ಟು ಏರಿಕೆಯಾಗಿದೆ

'ಸಿ' ವೃಂದಕ್ಕೆ ನೇಮಕಾತಿ ಕಡೆಗಣನೆ



- ಎ ವೃಂದದ ಹುದ್ದೆಗಳಲ್ಲಿ 23,936 ಹುದ್ದೆಗಳು ಖಾಲಿ ಇವೆ. ಮಂಜೂರಾದ ಒಟ್ಟು ಹುದ್ದೆಗಳಿಗೆ ಹೋಲಿಸಿದರೆ, ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 17ರಷ್ಟಾಗುತ್ತದೆ
- ಬಿ ವೃಂದಕ್ಕೆ ಒಟ್ಟು 4.22 ಲಕ್ಷ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಇವುಗಳಲ್ಲಿ 3 ಲಕ್ಷ ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 29ರಷ್ಟು
- ಸಿ ವೃಂದದದಲ್ಲಿ ಒಟ್ಟು 8.49 ಲಕ್ಷ ಹುದ್ದೆಗಳು ಖಾಲಿ ಇವೆ. ಈ ವೃಂದಕ್ಕೆ ಮಂಜೂರಾದ ಹುದ್ದೆಗಳಿಗೆ ಹೋಲಿಸಿದರೆ, ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 23.92ರಷ್ಟು
- ಕೇಂದ್ರ ಸರ್ಕಾರದಲ್ಲಿ ಖಾಲಿ ಇರುವ 9.95 ಲಕ್ಷ ಹುದ್ದೆಗಳಿಗೆ ಹೋಲಿಸಿದರೆ, ಸಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 85ರಷ್ಟಾಗುತ್ತದೆ

ಶೇ 24.22ರಷ್ಟು ಹುದ್ದೆಗಳು ಖಾಲಿ

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಸಚಿವಾಲಯಗಳಲ್ಲಿ 9.95 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ಲೋಕಸಭೆಗೆ ಮಾಹಿತಿ ನೀಡಿದೆ. ಯಾವ ಇಲಾಖೆ ಮತ್ತು ಸಚಿವಾಲಯಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿಯನ್ನು ಸಚಿವಾಲಯವು ಲೋಕಸಭೆಗೆ ನೀಡಿಲ್ಲ. ಆದರೆ, ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚ ಸಂಶೋಧನಾ ವಿಭಾಗವು ಈ ಮಾಹಿತಿಯನ್ನು ತನ್ನ ವಾರ್ಷಿಕ ವರದಿಯಲ್ಲಿ ನೀಡಿದೆ.

ಕೇಂದ್ರ ಸರ್ಕಾರವು ಈಗ ನೀಡಿರುವ ಈ ಮಾಹಿತಿಯು ಈವರೆಗಿನ ಸ್ಥಿತಿಗತಿಯನ್ನು ತೋರಿಸುವುದಿಲ್ಲ. ಬದಲಿಗೆ ಈಗ ನೀಡಿರುವ ಮಾಹಿತಿಯು 2021ರ ಮಾರ್ಚ್ 1ರವರೆಗೆ ಮಾತ್ರ ಅನ್ವಯವಾಗುತ್ತದೆ. ಹೀಗಾಗಿ ಈಗ ಖಾಲಿ ಇರುವ ಹುದ್ದೆಗಳಿಗೆ ಸಂಬಂಧಿಸಿದ ನಿಖರ ಮಾಹಿತಿ ಲಭ್ಯವಿಲ್ಲ. ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲೂ ಇದನ್ನೇ ಹೇಳಿದೆ. ಅಂದರೆ ದೇಶದಲ್ಲಿ ಈಗ ಖಾಲಿ ಇರುವ ಸರ್ಕಾರಿ ಹುದ್ದೆಗಳ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ಸರ್ಕಾರದ ಬಳಿಯೇ ಮಾಹಿತಿ ಇಲ್ಲ. ವೆಚ್ಚ ಸಂಶೋಧನಾ ವಿಭಾಗದ ವಾರ್ಷಿಕ ವರದಿಯ ಪ್ರಕಾರ 2021ರ ಮಾರ್ಚ್ 1ರ ವೇಳೆಗೆ ಕೇಂದ್ರ ಸರ್ಕಾರದಲ್ಲಿ ಒಟ್ಟು 41,11,146 ಹುದ್ದೆಗಳು ಮಂಜೂರಾಗಿವೆ. ಇವುಗಳಲ್ಲಿ ಮಾರ್ಚ್ 1ರವರೆಗೆ ಒಟ್ಟು 31,15,343 ಹುದ್ದೆಗಳು ಭರ್ತಿಯಾಗಿದ್ದವು. ಅದೇ ವೇಳೆಗೆ 9,95,803 ಹುದ್ದೆಗಳು ಖಾಲಿ ಇದ್ದವು. ಹೀಗೆ ಮಂಜೂರಾದ ಕೇಂದ್ರ ಸರ್ಕಾರದ ಒಟ್ಟು ಹುದ್ದೆಗಳಲ್ಲಿ ಶೇ 24.22ರಷ್ಟು ಹುದ್ದೆಗಳು ಖಾಲಿ ಇವೆ.



ರೈಲ್ವೆ, ಭದ್ರತಾ ಇಲಾಖೆಯಲ್ಲಿ ನೇಮಕಾತಿ ಬಾಕಿ

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ರೈಲ್ವೆ ಇಲಾಖೆ ಮತ್ತು ರಕ್ಷಣಾ ಸಚಿವಾಲಯಗಳಲ್ಲೇ ಹೆಚ್ಚು ಹುದ್ದೆಗಳು ಖಾಲಿ ಇವೆ. ರೈಲ್ವೆ ಇಲಾಖೆಯು ದೇಶದಲ್ಲಿ ಅತಿಹೆಚ್ಚು ಉದ್ಯೋಗ ನೀಡಿರುವ ಇಲಾಖೆಯಾಗಿದೆ. ಈ ಇಲಾಖೆಗೆ 15.14 ಲಕ್ಷ ಹುದ್ದೆಗಳ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದ್ದು, ಅಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮತಿ ನೀಡಿದೆ. ಹೀಗೆ ಮಂಜೂರಾಗಿರುವ ಹುದ್ದೆಗಳನ್ನೂ ಕೇಂದ್ರ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿಲ್ಲ. ರೈಲ್ವೆ ಇಲಾಖೆಯಲ್ಲಿ 2.93 ಲಕ್ಷ ಹುದ್ದೆಗಳು ಖಾಲಿ ಇವೆ. ಮಂಜೂರಾದ ಒಟ್ಟು ಹುದ್ದೆಗಳಿಗೆ ಹೋಲಿಸಿದರೆ ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 19.35ರಷ್ಟಿದೆ. ಎಲ್ಲಾ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೋಲಿಸಿದರೆ ರೈಲ್ವೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 29.4ರಷ್ಟಾಗುತ್ತದೆ.

ದೇಶದ ಆಂತರಿಕ ಭದ್ರತೆಯಲ್ಲಿ ಅರೆಸೇನಾ ಪಡೆಗಳದ್ದು ಮಹತ್ವದ ಪಾತ್ರ. ಇವು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಬರುತ್ತವೆ-ಯಾದರೂ, ಆರ್ಥಿಕ ಇಲಾಖೆಯು ಇದನ್ನು ನಾಗರಿಕ ರಕ್ಷಣೆ ಎಂದು ಪ್ರತ್ಯೇಕವಾಗಿ ವರ್ಗೀಕರಿಸಿದೆ. ಆದರೆ, ದೇಶದ ಭದ್ರತೆಗೆ ಅಗತ್ಯವಿರುವ ಈ ಹುದ್ದೆಗಳನ್ನೂ ಕೇಂದ್ರ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿಲ್ಲ. ಆಂತರಿಕ ಭದ್ರತೆಗೆಂದು ಆರ್ಥಿಕ ಇಲಾಖೆಯು ಎಲ್ಲಾ ವೃಂದದ ಒಟ್ಟು 6.46 ಲಕ್ಷ ಹುದ್ದೆಗಳನ್ನು ಮಂಜೂರು ಮಾಡಿದೆ. ಆದರೆ, ಇದರಲ್ಲಿ 3.81 ಲಕ್ಷ ಹುದ್ದೆಗಳಷ್ಟೇ ಭರ್ತಿಯಾಗಿವೆ. ಇನ್ನೂ 2.64 ಲಕ್ಷ ಹುದ್ದೆಗಳು ಖಾಲಿ ಇವೆ. ಈ ಭದ್ರತಾ ಸಂಸ್ಥೆಗಳಿಗೆ ಮಂಜೂರಾದ ಒಟ್ಟು ಹುದ್ದೆಗಳಿಗೆ ಹೋಲಿಸಿದರೆ, ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 40.85ರಷ್ಟು. ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳಿಗೆ ಹೋಲಿಸಿದರೆ, ಈ ಭದ್ರತಾ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 26.53ರಷ್ಟು.



ಸಿಬಿಐ: ಶೇ 23ರಷ್ಟು ಸಿಬ್ಬಂದಿ ಕೊರತೆ

ಅಪರಾಧ ಪ್ರಕರಣಗಳನ್ನು ತನಿಖೆಗೆ ಒಳಪಡಿಸುವ ದೇಶದ ಮಹತ್ವದ 'ಕೇಂದ್ರೀಯ ತನಿಖಾ ಸಂಸ್ಥೆ'ಯಲ್ಲಿ (ಸಿಬಿಐ) ಶೇ 23ರಷ್ಟು ಹುದ್ದೆಗಳು ಖಾಲಿಯಿವೆ ಎಂದು ಕೇಂದ್ರ ಸರ್ಕಾರದ ದತ್ತಾಂಶಗಳು ಹೇಳುತ್ತವೆ. ಸಿಬ್ಬಂದಿ ಕೊರತೆಯ ಕಾರಣಕ್ಕೆ, ಮಹತ್ವದ ಪ್ರಕರಣಗಳ ತನಿಖೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಂಸ್ಥೆಗೆ ಸಾಧ್ಯವಾಗುತ್ತಿಲ್ಲ.

ಇದೇ ನವೆಂಬರ್ 30ರವರೆಗಿನ ಮಾಹಿತಿ ಪ್ರಕಾರ, ಸಿಬಿಐನ ಎಲ್ಲ ದರ್ಜೆಗಳೂ ಸೇರಿದಂತೆ 7,295 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ ಭರ್ತಿಯಾಗಿರುವುದು 5,622 ಮಾತ್ರ. 1,673 ಹುದ್ದೆಗಳು ಖಾಲಿಯಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಜೂನ್‌ನಲ್ಲಿ ಆದೇಶ ಹೊರಡಿಸಲಾದ 128 ಹೆಚ್ಚುವರಿ ಹುದ್ದೆಗಳೂ ಇದರಲ್ಲಿ ಸೇರಿವೆ.

ನೇಮಕಾತಿ ಕುರಿತು ಸರ್ಕಾರ ಹೇಳುವುದೇನು?:

- ಹುದ್ದೆಗಳು ತೆರವಾಗುವುದು, ನೇಮಕಾತಿ ಮಾಡಿಕೊಳ್ಳುವುದು ನಿರಂತರ ಪ್ರಕ್ರಿಯೆ; ಎಲ್ಲ ವರ್ಗದ ಹುದ್ದೆಗಳನ್ನೂ ತ್ವರಿತವಾಗಿ ತುಂಬಲು ಕ್ರಮ ತೆಗೆದುಕೊಳ್ಳಲಾಗಿದೆ
- ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳ ನೇಮಕಾತಿ ಸಂಬಂಧ ಸುತ್ತೋಲೆಗಳು, ಜಾಹೀರಾತುಗಳನ್ನು ಪ್ರಕಟಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುತ್ತಿದೆ
- ಸಂಸ್ಥೆಯ ತಾಂತ್ರಿಕ ವಿಭಾಗದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಡುವಂತೆ ಯುಪಿಎಸ್‌ಸಿಗೂ ಪ್ರಸ್ತಾವ ಸಲ್ಲಿಸಲಾಗಿದೆ



ಆಧಾರ: ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚ ಸಂಶೋಧನಾ ವಿಭಾಗದ ವಾರ್ಷಿಕ ವರದಿಗಳು, ಲೋಕಸಭೆಯಲ್ಲಿ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ನೀಡಿರುವ ಲಿಖಿತ ಉತ್ತರಗಳು, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ಗೆ ಅರ್ಜೆಂಟೀನಾ ಪ್ರವೇಶಿಸಿದೆ. ಕಪ್ ಗೆಲ್ಲುವಲ್ಲಿ ಲಿಯೊನೆಲ್ ಮೆಸ್ಸಿ ಯಶಸ್ವಿಯಾಗುವರೆ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಅಖಿಲ ಭಾರತ ಸೇವೆಗಳಲ್ಲೂ ಅಧಿಕಾರಿಗಳ ಕೊರತೆ



ಅಖಿಲ ಭಾರತ ಸೇವೆಯ ಹುದ್ದೆಗಳು ಸಹ ಅಗತ್ಯಕ್ಕೆ ತಕ್ಕಂತೆ ಭರ್ತಿಯಾಗುತ್ತಿಲ್ಲ ಎಂದು ಸರ್ಕಾರದ ದತ್ತಾಂಶಗಳೇ ಹೇಳುತ್ತವೆ. ಐಎಎಸ್, ಐಪಿಎಸ್ ಹಾಗೂ ಐಎಫ್ ಸೇರಿದಂತೆ 14,964 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ 11,571 ಮಾತ್ರ ಭರ್ತಿಯಾಗಿದ್ದು, ಉಳಿದ 3,373 ಹುದ್ದೆಗಳು ಖಾಲಿ ಇವೆ. ಮಂಜೂರಾದ ಹುದ್ದೆಗಳಿಗೆ ಹೋಲಿಸಿದರೆ, ಶೇ 22.5ರಷ್ಟು ಹುದ್ದೆಗಳಿಗೆ ಇನ್ನಷ್ಟೇ ನೇಮಕಾತಿ ಆಗಬೇಕಿದೆ. ಕೇಂದ್ರ ಹಾಗೂ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಡಳಿತಾತ್ಮಕ ಕೆಲಸಗಳನ್ನು ನಿಭಾಯಿಸುವ ಮಹತ್ವದ ಹುದ್ದೆಗಳು ಖಾಲಿಯಿರುವುದಕ್ಕೆ ಪ್ರತಿಪಕ್ಷಗಳೂ ಆಕ್ಷೇಪ ವ್ಯಕ್ತಪಡಿಸಿವೆ.

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು, ಇಲಾಖೆಗಳು, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಈ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಹುದ್ದೆಗೆ ನೇಮಕ ಆದವರನ್ನು ಅವರವರ ಸೇವಾವಧಿ ಆಧಾರದ ಮೇಲೆ ಡೆಪ್ಯುಟಿ ಸೆಕ್ರೆಟರಿ, ನಿರ್ದೇಶಕ, ಜಂಟಿ ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿ, ಕಾರ್ಯದರ್ಶಿ ಹುದ್ದೆಗಳಿಗೆ ನಿಯೋಜಿಸಲಾಗುತ್ತದೆ. ಒಂದಿಡೀ ಇಲಾಖೆಯ ಜವಾಬ್ದಾರಿಯನ್ನು ಭಾರತೀಯ ಆಡಳಿತ ಸೇವೆಯ ಒಬ್ಬ ಅಧಿಕಾರಿಗೆ ನೀಡಲಾಗಿರುತ್ತದೆ. ಇಲಾಖೆಯೊಂದರ ಮುಖ್ಯಸ್ಥ ಹುದ್ದೆಗೆ ಯಾರೂ ನೇಮಕವಾಗದಿದ್ದಲ್ಲಿ, ಇಡೀ ಇಲಾಖೆಯ ಕಾರ್ಯಚಟುವಟಿಕೆಗಳಿಗೆ ಹಿನ್ನಡೆಯಾಗುತ್ತದೆ. ಅದು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಜಾರಿ ಹಾಗೂ ಅನುಷ್ಠಾನ ವಿಳಂಬಕ್ಕೆ ನೇರವಾಗಿ ಕಾರಣವಾಗುತ್ತದೆ.

ಭಾರತೀಯ ಆಡಳಿತ ಸೇವೆಯಲ್ಲಿ (ಐಎಎಸ್) ಶೇಕಡ 21.6 ಹುದ್ದೆಗಳು, ಭಾರತೀಯ ಪೊಲೀಸ್ ಸೇವೆಯಲ್ಲಿ (ಐಪಿಎಸ್) ಶೇ 17.3 ಹುದ್ದೆಗಳು ಹಾಗೂ ಭಾರತೀಯ ವಿದೇಶಾಂಗ ಸೇವೆಯಲ್ಲಿ (ಐಎಫ್‌ಎಸ್) ಶೇ 33.1 ಹುದ್ದೆಗಳ ಖಾಲಿ ಉಳಿದಿವೆ. ಈ ಪೈಕಿ ವಿದೇಶಾಂಗ ಸೇವೆಯಲ್ಲಿ ಅತಿಹೆಚ್ಚು ಹುದ್ದೆಗಳು ಖಾಲಿಯಿವೆ.

ಹುದ್ದೆ ಹೆಚ್ಚಳಕ್ಕೆ ಸಮಿತಿ: ಭಾರತೀಯ ಆಡಳಿತ ಸೇವೆಯ ವಿವಿಧ ಹುದ್ದೆಗಳನ್ನು ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮೂಲಕ ಪ್ರತೀ ವರ್ಷ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಐಎಎಸ್, ಐಪಿಎಸ್, ಐಎಫ್‌ಎಸ್ ವರ್ಗದಡಿ ಪ್ರತೀ ವರ್ಷ ಎಷ್ಟು ಅಧಿಕಾರಿಗಳನ್ನು ತುಂಬಿಕೊಳ್ಳಬೇಕು ಎಂದು ನಿರ್ಧಾರವಾಗಿರುತ್ತದೆ. ಈ ಪ್ರಕಾರ, ಯುಪಿಎಸ್‌ಸಿ ನೇಮಕಾತಿ ನಡೆಸುತ್ತದೆ.

ಪ್ರತೀ ವರ್ಷ ನೇಮಕಾತಿ ನಡೆದರೂ, ಹುದ್ದೆಗಳು ಖಾಲಿ ಉಳಿಯುತ್ತವೆ. ಕೇಂದ್ರ ಸೇವೆಯಿಂದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸೇವೆಗೆ ನಿಯೋಜನೆ, ವರ್ಗಾವಣೆ, ನಿಧನ, ಬಡ್ತಿ, ನಿವೃತ್ತಿ ಮೊದಲಾದ ಕಾರಣಕ್ಕೆ, ಹುದ್ದೆಗಳು ತೆರವಾಗುತ್ತಿವೆ. ಅಂದರೆ ನೇಮಕವಾಗುವವರ ಸಂಖ್ಯೆ ಬೇಡಿಕೆಗೆ ತಕ್ಕಷ್ಟು ಇಲ್ಲ ಎಂದರ್ಥ. ಹೀಗಾಗಿ, ನೇಮಕಾತಿ ಮಾಡಿಕೊಳ್ಳಲು ಇರುವ ಮಿತಿಯನ್ನು ಹೆಚ್ಚಿಸುವ ಯತ್ನವೂ ನಡೆದಿದೆ.

ಐಎಎಸ್ ಅಧಿಕಾರಿ ಹುದ್ದೆಗಳ ಸಂಖ್ಯೆಯನ್ನು 2021ರಲ್ಲಿ 180ಕ್ಕೆ ಹೆಚ್ಚಿಸಲಾಗಿದೆ. ಐಪಿಎಸ್ ಅಧಿಕಾರಿಗಳ ಹುದ್ದೆಗಳ ಸಂಖ್ಯೆಯನ್ನು 2020ರಲ್ಲಿ 200ಕ್ಕೆ ಹೆಚ್ಚಿಸಲಾಗಿತ್ತು. ಐಎಫ್‌ಎಸ್ ಅಧಿಕಾರಿ ಹುದ್ದೆಗಳನ್ನು 2022ರಲ್ಲಿ 150ಕ್ಕೆ ಏರಿಸಲಾಗಿದೆ. ಈ ಕ್ರಮಗಳಿಂದ ಹೆಚ್ಚುವರಿ ಸಂಖ್ಯೆಯ ಅಧಿಕಾರಿಗಳು ಸರ್ಕಾರಿ ಸೇವೆಗೆ ಸೇರ್ಪಡೆಯಾಗುತ್ತಾರೆ.

2022ರಿಂದ 2030ರವರೆಗೆ ಪ್ರತೀ ವರ್ಷ ನಡೆಯಬೇಕಿರುವ ನೇಮಕಾತಿ ವೇಳೆ, ಎಷ್ಟು ಮಂದಿ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕು ಎಂದು ಶಿಫಾರಸು ಮಾಡಲು ಸಮಿತಿಯೊಂದರನ್ನು ರಚಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿನ ಕುಶಲಸಾಧನಗಳು

ವಿಷಯಭೋಗವಿರಕ್ತಿ, ವಿಶ್ವಲೀಲಾಸಕ್ತಿ |
ಕೃಷಿಗೆ ಸಂತತ ದೀಕ್ಷೆ, ವಿಫಲತೆಗೆ ತಿತಿಕ್ಷೆ ||
ವಿಷಮದಲಿ ಸಮದೃಷ್ಟಿ, ವಿವಿಧಾತ್ಮ ಸಂಸೃಷ್ಟಿ |
ಕುಶಲಸಾಧನಗಳಿವು - ಮಂಕುತಿಮ್ಮ || 778||

ಪದ-ಅರ್ಥ: ವಿಷಯಭೋಗವಿರಕ್ತಿ = ವಿಷಯ + -ಭೋಗ + ವಿರಕ್ತಿ, ವಿಶ್ವಲೀಲಾಸಕ್ತಿ = ವಿಶ್ವ + ಲೀಲೆ- + ಆಸಕ್ತಿ; ಸಂತತ = ಸತತವಾದ, ತಿತಿಕ್ಷೆ = ಸಹನೆ, ವಿವಿಧಾತ್ಮ = ವಿವಿಧ + ಆತ್ಮ, ಸಂಸೃಷ್ಟಿ = ಸಮದೃಷ್ಟಿ.

ವಾಚ್ಯಾರ್ಥ: ವಿಷಯ ಭೋಗಗಳಲ್ಲಿ ನಿರಾಸಕ್ತಿ, ವಿಶ್ವಲೀಲೆಯಲ್ಲಿ ಆಸಕ್ತಿ, ಕರ್ತವ್ಯಕ್ಕೆ ಸತತ ದೀಕ್ಷೆ, ಸೋಲಿನಲ್ಲಿ ಸಹನೆ, ವಿಷಮತೆಗಳಲ್ಲಿ ಸಮದೃಷ್ಟಿ, ಸರ್ವ ಆತ್ಮಗಳಲ್ಲಿ ಸಮಾನತೆಯ ದೃಷ್ಟಿ, ಇವು ಬದುಕಿನ ಕುಶಲ ಸಾಧನಗಳು.

ವಿವರಣೆ: ವಿರಕ್ತಿ ಎನ್ನುವುದು ತ್ಯಾಗ. ಮನಸ್ಸು ಎಲ್ಲವನ್ನು ಕಳಚಿಬಿಟ್ಟು ನಿರಾಭಾರಿಯಾಗುವುದು ವಿರಕ್ತಿ. ಆ ವಿರಕ್ತಿ ಇರಬೇಕಾದದ್ದು ವಿಷಯ ಭೋಗಗಳಲ್ಲಿ. ಇದು ಕಷ್ಟ. ಪ್ರಪಂಚದ ಹಲವು ಆಕರ್ಷಣೆಗಳಿಗೆ ಮನ ಸೋಲುತ್ತದೆ. ಜೀವನದ ಕೈ ಹಿಡಿತ ತಪ್ಪುತ್ತದೆ, ಅತೃಪ್ತಿಯೇ ಬಾಳಿನ ನಡೆಯಾಗುತ್ತದೆ. ವಿಷಯದ ಆಕರ್ಷಣೆಗೆ ಸೋಲದ ಮನಸ್ಸನ್ನು ಬೆಳೆಸಿಕೊಳ್ಳುವುದು ವೈರಾಗ್ಯ. ಅದು ಸಂಪತ್ತು. ಅದಕ್ಕೆ ಸಮನಾದ ಐಶ್ವರ್ಯವೇ ಇಲ್ಲ. ವಿರಕ್ತಿ ಎಂದರೆ ಎಲ್ಲವನ್ನೂ ತ್ಯಾಗಮಾಡುವುದಲ್ಲ. ನಾನು ವಿಶ್ವದಲ್ಲಿ ಇದ್ದೇನೆ. ಅದರ ಭಾಗವಾಗಿದ್ದೇನೆ. ಅದರಲ್ಲಿ ನನಗೊಂದು ಸ್ಥಾನವಿದೆ. ಇದು ಭಗವಂತನ ಲೀಲೆ. ಅದರಲ್ಲಿ ಆಸಕ್ತಿಯಿಂದ ಭಾಗವಹಿಸಬೇಕು ಎಂಬ ಭಾವ. ಭಗವಂತನ ಲೀಲೆಯಲ್ಲಿ ನಿರಾಸಕ್ತಿಯೆಂದರೆ ಭಗವಂತನ ಬಗ್ಗೆಯೇ ನಿರಾಸಕ್ತಿಯಿದ್ದಂತೆ. ಇದರೊಂದಿಗೆ ನನಗೆ ಒಪ್ಪಿ ಬಂದ ಕಾರ್ಯವನ್ನು ಸಕಲ ಶ್ರಮದಿಂದ, ಶ್ರದ್ಧೆಯಿಂದ ಮಾಡಲೇಬೇಕು. ಆದರೆ ಬಸವಣ್ಣನವರು ಹೇಳಿದಂತೆ, ಮಾಡಿದೆನು ಎಂಬುದನ್ನು ಅಹಂಕಾರದಿಂದ ನೋಡದೆ ಮಾಡಬೇಕು. ಮಾಡಿದೆನೆಂಬುದು ಮನದಲ್ಲಿ ಹೊಳೆದರೆಏಡಿಸಿ ಕಾಡಿತ್ತು, ಶಿವ ಡಂಗುರ !

ಅಹಂಕಾರ ಮೊಳೆತರೆ ಶಿವನೊಲಿಯಲಾರ. ಹೀಗೆ ಕಾರ್ಯಮಾಡುವಾಗ ಆಗಾಗ ವಿಫಲತೆ ಬಂದೀತು. ಅದೂ ಲೀಲೆಯ ಒಂದು ಭಾಗವೇ ಎಂದು ತಿಳಿದು ತಾಳ್ಮೆಯಿಂದಿರಬೇಕು. ಕೆಲವೊಮ್ಮೆ ವಿಷಮ ಪರಿಸ್ಥಿತಿಗಳು ಏರ್ಪಡಬಹುದು. ಸಂದರ್ಭ ಯಾವಾಗಲೂ ಹೀಗೆಯೇ ಇರುವುದಿಲ್ಲ, ಮುಂದೊಮ್ಮೆ ಅತ್ಯಂತ ಸೂಕ್ತ ಪರಿಸ್ಥಿತಿ ಬಂದೀತು ಎಂಬ ಸಮದೃಷ್ಟಿ ಅತ್ಯಂತ ಅವಶ್ಯ. ಇವೆಲ್ಲವುಗಳಿಗಿಂತ ಎತ್ತರದ ಅಧ್ಯಾತ್ಮಿಕ ನೆಲೆಯೊಂದಿದೆ. ಅದು ಪ್ರತಿಯೊಂದು ಆತ್ಮವೂ ಬ್ರಹ್ಮವಸ್ತುವಿನ ರೂಪವೇ ಎಂಬುದನ್ನು ಅರಿಯುವುದು, ಹಾಗೆಯೇ ಭಾವಿಸಿ ನಡೆಯುವುದು. ಹೀಗಾದಾಗ ಎಲ್ಲ ಕಡೆಗೂ ವ್ಯಕ್ತಿ ಬ್ರಹ್ಮವನ್ನೇ ಕಾಣುತ್ತಾನೆ. ವಿಷಯಗಳಲ್ಲಿ ವಿರಕ್ತಿ, ವಿಶ್ವ ಕರ್ತವ್ಯಗಳಲ್ಲಿ ಆಸಕ್ತಿ, ಕರ್ತವ್ಯ ತತ್ಪರತೆ, ಸೋಲಿನಲ್ಲಿ ತಾಳ್ಮೆ, ವಿಷಮ ಸ್ಥಿತಿಯಲ್ಲಿ ಸಮತ್ವ, ಎಲ್ಲರ ಆತ್ಮಗಳಲ್ಲಿ ಬ್ರಹ್ಮವನ್ನೇ ಕಾಣುವ ಆ ಆರು ಗುಣಗಳನ್ನು ಕಗ್ಗ ಕುಶಲಸಾಧನಗಳು ಎಂದು ಗುರುತಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಸಪ್ತಮಿ ಗಂ. 25-40 ನಕ್ಷತ್ರ: ಪೂರ್ವಫಲ್ಗುನಿ ಅಹೋರಾತ್ರ ಯೋಗ: ವಿಷ್ಕಂಭ ಗಂ. 07-30 ಕರಣ: ವಿಷ್ಟಿ ಗಂ. 12-45, ವೃಶ್ಚಿಕ ಮಾಸದ 28 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 –03-00
ಸೂರ್ಯೋದಯ : 06-49 ಸೂರ್ಯಾಸ್ತ : 06-02
ಮುಸ್ಲಿಂ ದಿನಾಂಕ : 20 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 2, 5

ಮೇಷ: ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ಈ ದಿನ ನಿಮ್ಮ ಮೊದಲ ಆದ್ಯತೆ ನಿಮ್ಮ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ.

ವೃಷಭ: ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡುವುದು ಒಳಿತು. ಮಕ್ಕಳ ಒತ್ತಾಯಕ್ಕೆ ಮಣಿದು ವಾಹನ ಕೊಳ್ಳುವಿರಿ. ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆಯು ಈ ದಿನ ಬಾಳಲ್ಲಿ ನಡೆಯಲಿದೆ.

ಮಿಥುನ: ಕಂದಾಯ ಇಲಾಖೆಯ ನೌಕರರಿಗೆ ಹಣದ ಮುಗ್ಗಟ್ಟು ತೀವ್ರವಾಗುವುದು. ಲಾಭದಾಯಕ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ನೀವು ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು.

ಕರ್ಕಾಟಕ: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ, ನಿಮ್ಮ ಕಠಿಣ ಪರಿಶ್ರಮ, ಮತ್ತು ಆತ್ಮವಿಶ್ವಾಸ ಕೂಡ ಅಗತ್ಯವಿರುತ್ತದೆ. ಪರಿವಾರ ಸಮೇತನಾದ ಶ್ರೀರಾಮನ ಆರಾಧನೆ ಮಂಗಳವನ್ನು ಉಂಟುಮಾಡುತ್ತದೆ.

ಸಿಂಹ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ರಾಜಕೀಯ ವ್ಯಕ್ತಿಗಳಿಗೆ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ.

ಕನ್ಯಾ: ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ ನಂತರ ಗುರಿ ಸಾಧಿಸಬೇಕಿದ್ದಲ್ಲಿ ಜನರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ. ಸಿದ್ಧ ಉಡುಪು ಮಾರಾಟಗಾರರಿಗೆ ವಿಶೇಷ ಲಾಭ ಬರುವುದು.

ತುಲಾ: ಈ ದಿನ ನಡೆಯುವ ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿಯಾಗುವುದು. ಸಹಾಯಕ ದರ್ಜೆಯವರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ.

ವೃಶ್ಚಿಕ: ಕೆಲವೊಮ್ಮೆ ಕಾರ್ಯವೈಫಲ್ಯದ ಅನುಭವವನ್ನು ಅನುಭವಿಸಬೇಕಾದರೂ, ಪೂರ್ವ ನಿಯೋಜಿತ ಕಾರ್ಯದಿಂದ ಹಿಂಬರುವ ಯೋಚನೆಯನ್ನು ಮಾಡದಿರಿ. ವೃತ್ತಿಯಲ್ಲಿ ನಿರಂತರದ ಆದಾಯವಿದ್ದರೂ ಋಣಬಾಧೆ ತಪ್ಪದು.

ಧನು: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭವನ್ನು ಹೊಂದುವಿರಿ. ಮಡದಿ ಮಕ್ಕಳ ಆರೋಗ್ಯದಲ್ಲಿ ಹೆಚ್ಚಿನ ಗಮನವಿರಲಿ. ಪ್ರವಾಸಾದಿಗಳು ಸಂತಸ ತರಲಿದೆ.

ಮಕರ: ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆ ಹೊಂದಿರುವಿರಿ. ದುಃಖ ತೀವ್ರತೆಯು ದಿನದಿಂದ ದಿನಕ್ಕೆ ಕಡಿಮೆಯಾಗುವುದು. ನಿಮ್ಮ ಚಟುವಟಿಕೆಯ ಜೀವನ ಕಾರ್ಯಕ್ಷೇತ್ರದಲ್ಲಿ ಸದವಕಾಶ ತಂದುಕೊಡಲಿದೆ.

ಕುಂಭ: ಅಪೇಕ್ಷಿಸಿದ ಸಹಕಾರವನ್ನು ನಿಮ್ಮ ಮೇಲಧಿಕಾರಿಗಳಿಂದ ಪಡೆಯುವಲ್ಲಿ ಯಶಸ್ವಿಯಾಗುವಿರಿ. ಅದರಿಂದಾಗಿ ನಿಮ್ಮ ಹಳೆಯ ಯೋಜನೆಗಳಿಗೆ ಮರು ಜೀವ ಬಂದಂತಾಗಲಿದೆ.

ಮೀನ: ಕಮಿಷನ್ ಏಜೆಂಟ್‌ಗಳಿಗೆ ಅಧಿಕ ಆದಾಯ . ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ. ವಿದ್ಯಾರ್ಥಿಗಳು ಓದು ಮುಂದುವರೆಸುವುದನ್ನು ನಿರ್ಧರಿಸಿ. ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿದರೆ ಉತ್ತಮ.

ಪದಬಂಧ 5169

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈ ಕೊನೆಗಿಟ್ಟರೆ ಹೆದರಿಕೆಯೇ? (4)
3.ಮೃಗಜಲ ಇಲ್ಲಿ ಗೋಚರಿಸುತ್ತಿದೆ (4)
5.ಮೃತ್ಯುದೇವತೆ ಕೊನೆಗಿದ್ದಾಗಿನ ಸೂತ್ರ (3)
7.ತರ್ಕ ಮಾಡುತ್ತಿರುವ ವ್ಯಾಪಾರಿ (3)
9.ನಾವೆಯನ್ನು ನಡೆಸುವವನು (3)
10.ಈತ ವಿಲಾಸಪ್ರಿಯ (3)
11.ವಾಲಿಯ ಮಗನಿವನು (3)
15.ಅತಿಶಯವಾದ ಪ್ರೀತಿ (4)
16.ವನದಲ್ಲಿ ಸಿಕ್ಕಿರುವ ಆದಾಯ (4)

ಮೇಲಿಂದ ಕೆಳಕ್ಕೆ
1.ಈಕೆ ಒಡಹುಟ್ಟಿದವಳು (3)
2.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವ ವಸ್ತು (2)
3.ಈತ ಲಗ್ನವಾಗುತ್ತಿರುವವ (5)
4.ಧೈರ್ಯ ಹೀಗೆ ಬಂದಿದೆಯಲ್ಲಾ? (2)
6.ಎಂದಿನಂತೆ ಎಂದು ಹೀಗೆ ಹೇಳಿ (5)
8.ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ (5)
9.ಒಳಜಗಳವಿದು (5)
12.ದಶಮಾನದ ಹಲ್ಲು! (3)
13.ಸಂಕಟದಿಂದ ಕಟ್ಟಿರುವ ತೆರ (2)
14.ಅಭಾವದಲ್ಲಿ ಬಂದಿಳಿದ ಅಕ್ಕನ ಗಂಡ (2)



5168ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮಾಸ 3.ಅರಸ 6.ದಯಾಳು 7.ರಮಣಿ 8.ಗಟಾರ 10.ಮದ್ದು 11.ಕನ್ನಡಿ 13.ಹೆಣ 14.ಕದನ 15.ವಿಜಯ 16.ಹಾರವ 17.ಕೆಡವು 18.ನವೀನ

ಮೇಲಿಂದ ಕೆಳಕ್ಕೆ:
1.ಸವಿಗನಸು 2.ಸದರ 3.ಅಳು 4.ಸರಹದ್ದು 5.ಋಣಿ 9.ಕಂಕಣ 10.ಮಡಿಲು 12.ವಿಮಾನಯಾನ 13.ಹೆಬ್ಬಯಕೆ 14.ಕವನ 15.ವಿಷ್ಣ 16.ಹಾವು

ಸುಡೊಕು 5555

3					8	2	7	
	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5554 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ. ವಿ ಸೋಮಶೇಖರ ರೆಡ್ಡಿ ರವರು
(ಲೇಟ್ ಶ್ರೀ. ವೀರಪ್ಪರೆಡ್ಡಿಯವರು ಮಗ)
(ಜನನ: 31.07.1961 -ಮರಣ: 04.12.2022)
ಇವರು ದಿನಾಂಕ : 04.12.2022ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರಕ್ರಿಯಾದಿಗಳು ದಿನಾಂಕ: 15.12.22ನೇ ಗುರುವಾರ ಬೆಳಿಗ್ಗೆ 10.00 ಗಂಟೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 12.30 ಗಂಟೆಗೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು
ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
9916415161 / 9886857821

ಉತ್ತರ ಕ್ರಿಯಾದಿ ಭೂಶಾಂತಿ

ಶ್ರೀಮತಿ ಎಂ.ಆರ್. ಅನುಸೂಯರವರು
(ಲೇ॥ ಶ್ರೀ ಹೆಚ್.ಬಿ. ಅಪ್ಪಾಜಿ BE,MIE, ನಿವೃತ್ತ ಮುಖ್ಯ ಅಭಿಯಂತರರು, ಕೆ.ಐ.ಎ.ಡಿ.ಬಿ. ಇವರ ಧರ್ಮಪತ್ನಿ)
ತಾ॥ 05-12-2022ನೇ ಸೋಮವಾರದಂದು ನಮ್ಮ ಪೂಜ್ಯ ತಾಯಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತಾ॥ 16-12-2022ನೇ ಶುಕ್ರವಾರ ಮಧ್ಯಾಹ್ನ 12 ಘಂಟೆಗೆ ಉತ್ತರ ಕ್ರಿಯಾದಿ ಭೂಶಾಂತಿಯನ್ನು ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಸ್ಥಳ : ಹನಕೆರೆ ಗ್ರಾಮ, ಕಸಬಾ ಹೋಬಳಿ ಬೆಂಗಳೂರು-ಮೈಸೂರು ಹೆದ್ದಾರಿ, ಮಂಡ್ಯ ತಾಲ್ಲೂಕು
ಇಂತಿ ದುಃಖತಪ್ತರು : ಮೃತರ ಮಕ್ಕಳು
ಡಾ॥ ಹೆಚ್.ಎ. ಶ್ರೀನಿವಾಸ್ ಮತ್ತು ಶ್ರೀ ಹೆಚ್.ಎ. ರಕ್ಷಿತ್ ಕುಟುಂಬದವರು ಹಾಗೂ ಬಂಧು-ಮಿತ್ರರು

12ನೇ ಪುಣ್ಯಸ್ಮರಣೆ

ಪಿ.ವಿ. ಕೃಷ್ಣಪ್ಪನವರು
ತಾಲ್ಲೂಕು ಬೋರ್ಡ್ ಮಾಜಿ ಅಧ್ಯಕ್ಷರು
(ಪಟೇಲ್ ವೀರಪ್ಪನವರ ಮಗ ಅಮೃತಹಳ್ಳಿ, ಬೆಂಗಳೂರು-92)
ನೀವು ನಮ್ಮನ್ನಗಲಿ ಇಂದಿಗೆ 12ವರ್ಷಗಳು ಗತಿಸಿದವು. ನಿಮ್ಮ ಸರಳ ಸಜ್ಜನಿಕೆ, ನೇರ ನಡೆನುಡಿ, ನಿಮ್ಮ ಆದರ್ಶ ಜೀವನ ನಮಗೆಲ್ಲ ಮಾರ್ಗದರ್ಶಕವಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ.
ಪಟೇಲ್ ವಂಶಸ್ಥರು ಮತ್ತು ಕುಟುಂಬದವರು

ಸಂಸತ್ತಿನಲ್ಲಿ ಮತ್ತೆ ಪ್ರತಿಧ್ವನಿಸಿದ ಭಾರತ–ಚೀನಾ ಸೇನಾ ಸಂಘರ್ಷ: ಚರ್ಚೆಗೆ ಬಿಗಿ ಪಟ್ಟು

ಸರ್ಕಾರದ ಮೇಲೆ ಮುಗಿಬೀಳಲು ತಂತ್ರ

ನವದೆಹಲಿ (ಪಿಟಿಐ): ಅರುಣಾಚಲ-ಪ್ರದೇಶದ ಗಡಿಯಲ್ಲಿ ಉಂಟಾಗಿರುವ ಭಾರತ ಮತ್ತು ಚೀನಾ ಸೇನಾ ಸಂಘರ್ಷದ ವಿಚಾರವು ಸಂಸತ್ತಿನ ಉಭಯ ಸದನಗಳಲ್ಲಿ ಬುಧವಾರವೂ ಪ್ರತಿಧ್ವನಿಸಿತು.

ಈ ವಿಚಾರ ಮುಂದಿಟ್ಟುಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಿರ್ಧರಿಸಿರುವ ವಿರೋಧ ಪಕ್ಷಗಳು ಇದಕ್ಕಾಗಿ ಒಗ್ಗಟ್ಟಿನ ತಂತ್ರ ರೂಪಿಸಿವೆ.

ಕಾಂಗ್ರೆಸ್, ಆರ್‌ಜೆಡಿ, ಡಿಎಂಕೆ, ಸಿಪಿಐ, ಸಿಪಿಐ (ಎಂ), ಆಮ್ ಆದ್ಮಿ ಪಕ್ಷ (ಎಎಪಿ), ಸಮಾಜವಾದಿ ಪಕ್ಷ (ಎಸ್‌ಪಿ), ಜೆಡಿಯು, ಎನ್‌ಸಿಪಿ, ಶಿವಸೇನಾ (ಉದ್ಧವ್ ಬಣ), ಕೇರಳ ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್, ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಎಐಯುಡಿಎಫ್), ಆರ್‌ಎಲ್‌ಡಿ, ಎಂಡಿಎಂಕೆ, ವಿಕೆಸಿ ಪಕ್ಷಗಳ ಸಂಸದರು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಕಚೇರಿಯಲ್ಲಿ ಬುಧವಾರ ಸಭೆ ನಡೆಸಿದ್ದಾರೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದರು ಈ ಸಭೆಯಲ್ಲಿ ಭಾಗವಹಿಸಿರಲಿಲ್ಲ.

> ಸರ್ಕಾರವು ಭಾರತ-ಚೀನಾ ಗಡಿ ಸಂಘರ್ಷ ಹಾಗೂ ಚೀನಾ ನಡೆಸುತ್ತಿರುವ ಅತಿಕ್ರಮಣದ ಕುರಿತ ಮಾಹಿತಿ ಒದಗಿಸಬೇಕು. ಹೀಗಾಗಿ ಚರ್ಚೆಗೆ ಅವಕಾಶ ಕೇಳುತ್ತಿದ್ದೇವೆ.
> **ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ

‘ಟಿಎಂಸಿ ಸಂಸದ ಸುದೀಪ್ ಬಂಡೋಪಾಧ್ಯಾಯ ಅವರು ಸಭೆಯಲ್ಲಿ ಪಾಲ್ಗೊಳ್ಳಬೇಕಿತ್ತು. ಅನಾರೋಗ್ಯದ ಕಾರಣ ಸಭೆಗೆ ಹಾಜರಾಗಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಸಭೆಯಲ್ಲಿ ಕೈಗೊಳ್ಳುವ ತೀರ್ಮಾನಕ್ಕೆ ನಮ್ಮ ಸಂಸದರು ಬದ್ಧರಾಗಿರಲಿದ್ದಾರೆ’ ಎಂದು ಟಿಎಂಸಿ ಮೂಲಗಳು ತಿಳಿಸಿವೆ.

ಭಾರತ-ಚೀನಾ ಸೇನಾ ಸಂಘರ್ಷದ ಕುರಿತು ತುರ್ತು ಚರ್ಚೆಗೆ ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸಬೇಕು. ಒಂದೊಮ್ಮೆ ಈ ಬೇಡಿಕೆಗೆ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಉಭಯ ಸದನಗಳ ಸದಸ್ಯರೂ ಸಭಾತ್ಯಾಗ ಮಾಡಬೇಕು ಎಂಬ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಚೀನಾ ಅತಿಕ್ರಮಣ ವಿಚಾರದ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಬೇಕು. ಭಾರತೀಯ ಯೋಧರ ಮನೋಬಲ ಕುಗ್ಗಿಸುವಂತಹ ಯಾವ ಅಂಶವೂ ಈ ಹೇಳಿಕೆಯಲ್ಲಿ ಇರದಂತೆ ಎಚ್ಚರ ವಹಿಸಬೇಕು ಎಂಬ ನಿರ್ಣಯವನ್ನೂ ತೆಗೆದುಕೊಳ್ಳಲಾಗಿದೆ.

ಸಂಸತ್ ಭವನದ ಸಂಕೀರ್ಣದಲ್ಲಿ ಗುರುವಾರ ಮತ್ತೊಮ್ಮೆ ಸಭೆ ಸೇರಲಿರುವ ವಿರೋಧ ಪಕ್ಷಗಳ ಸಂಸದರು ತಮ್ಮ ಕಾರ್ಯತಂತ್ರದ ಕುರಿತು ಮತ್ತೊಮ್ಮೆ ಚರ್ಚಿಸಲಿದ್ದಾರೆ ಎಂದು ಹೇಳಲಾಗಿದೆ.

ರಾಜ್ಯಸಭೆಯಿಂದ ಹೊರನಡೆದ ಸಂಸದರು

ಭಾರತ-ಚೀನಾ ಗಡಿ ಸಂಘರ್ಷದ ವಿಚಾರ ರಾಜ್ಯಸಭೆಯಲ್ಲೂ ಪ್ರಸ್ತಾಪವಾಯಿತು. ಈ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷಗಳ ಸಂಸದರು ಪಟ್ಟು ಹಿಡಿದರು.

ಈ ಕುರಿತು ಮುಂಚಿತವಾಗಿ ಯಾರೂ ನೋಟಿಸ್ ನೀಡಿಲ್ಲ. ಹೀಗಾಗಿ ಚರ್ಚೆಗೆ ಅವಕಾಶ ನೀಡಲಾಗುವುದಿಲ್ಲ ಎಂದು ಉಪ ಸಭಾಪತಿ ಹರಿವಂಶ್ ಹೇಳಿದರು.

ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡುವಾಗ ಅವರ ಮೈಕ್‌ನ ಸ್ವಿಚ್ ಆಫ್ ಮಾಡಲಾಯಿತು. ಇದರಿಂದ ಕೆರಳಿದ ಸಂಸದರು ಸರ್ಕಾರದ ವಿರುದ್ಧ ಕೆಲ ಕಾಲ ಘೋಷಣೆಗಳನ್ನು ಕೂಗಿದರು. ಬಳಿಕ ಸದನದಿಂದ ಹೊರ ಹೋದರು.

ಕಾಂಗ್ರೆಸ್, ಟಿಎಂಸಿ ಸಂಸದರಿಂದ ಸಭಾತ್ಯಾಗ

ಭಾರತ-ಚೀನಾ ಗಡಿ ಸಂಘರ್ಷದ ಕುರಿತ ಚರ್ಚೆಗೆ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿ ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ ಸಂಸದರು ಲೋಕಸಭೆಯಲ್ಲಿ ಬುಧವಾರ ಸಭಾತ್ಯಾಗ ಮಾಡಿದರು.

ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರು ಭಾರತ-ಚೀನಾ ಗಡಿ ಬಿಕ್ಕಟ್ಟಿನ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಒತ್ತಾಯಿಸಿದರು. 1962ರಲ್ಲಿ ನಡೆದಿದ್ದ ಭಾರತ-ಚೀನಾ ಯುದ್ಧದ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಸಲು ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಅವಕಾಶ ಕೊಟ್ಟಿದ್ದನ್ನು ಪ್ರಸ್ತಾಪಿಸಿದರು. ಆಗ 165 ಸಂಸದರು ಮಾತನಾಡಿದ್ದಾಗಿಯೂ ಹೇಳಿದರು.

ಕಲಾಪ ಸಲಹಾ ಸಮಿತಿಯಲ್ಲಿ ಚರ್ಚಿಸಿ ಈ ಕುರಿತು ನಿರ್ಣಯ ಕೈಗೊಳ್ಳುವುದಾಗಿ ಹೇಳಿದ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪ ಮುಂದುವರಿಸಲು ಮುಂದಾದರು. ಆಗ ಕಾಂಗ್ರೆಸ್ ಮತ್ತು ಟಿಎಂಸಿ ಸಂಸದರು ಸ್ಪೀಕರ್ ನಿಲುವನ್ನು ಖಂಡಿಸಿ ಸದನದಿಂದ ಹೊರನಡೆದರು.

ಸುದ್ದಿ 2 ನಿಮಿಷ

ಈಶಾ ಫೌಂಡೇಷನ್ ವಿರುದ್ಧದ ಶೋಕಾಸ್ ನೋಟಿಸ್ ರದ್ದು

ಚೆನ್ನೈ: ಅಧ್ಯಾತ್ಮ ಗುರು ಜಗ್ಗಿ ವಾಸುದೇವ್ ಮುಖ್ಯಸ್ಥರಾಗಿರುವ ಈಶಾ ಫೌಂಡೇಷನ್‌ಗೆ ತಮಿಳುನಾಡು ಸರ್ಕಾರ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಅನ್ನು ಮದ್ರಾಸ್ ಹೈಕೋರ್ಟ್ ಬುಧವಾರ ರದ್ದುಗೊಳಿಸಿತು.

‘ಈಶಾ ಫೌಂಡೇಷನ್, ಶೈಕ್ಷಣಿಕ ಸಂಸ್ಥೆಯಾಗಿದೆ. ಹೀಗಾಗಿ, ಫೌಂಡೇಷನ್ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳಲು ಪರಿಸರ ಇಲಾಖೆಯಿಂದ ಪೂರ್ವಾನುಮತಿ ಪಡೆದುಕೊಳ್ಳುವ ಅಗತ್ಯ ಇಲ್ಲ’ ಎಂದು ಮುಖ್ಯನ್ಯಾಯಮೂರ್ತಿ ಟಿ.ರಾಜಾ ಹಾಗೂ ನ್ಯಾಯಮೂರ್ತಿ ಡಿ.ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ಪೀಠ ಹೇಳಿತು.

ಕೊಯಮತ್ತೂರು ಬಳಿಯ ವೆಳ್ಳಿಯಂಗಿರಿ ಹಿಲ್ಸ್ ಎಂಬಲ್ಲಿ ಯೋಗ ಕೇಂದ್ರ ಸ್ಥಾಪಿಸುವ ಕಾಮಗಾರಿಯನ್ನು 2006ರಲ್ಲಿ ಈಶಾ ಫೌಂಡೇಷನ್ ಕೈಗೆತ್ತಿಕೊಂಡಿತ್ತು. ಈ ಕಾಮಗಾರಿಗೆ ಪೂರ್ವಾನುಮತಿ ಪಡೆದಿಲ್ಲ ಎಂದಿದ್ದ ತಮಿಳುನಾಡು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು (ಟಿಎನ್‌ಪಿಸಿಬಿ) ಫೌಂಡೇಷನ್‌ಗೆ ಶೋಕಾಸ್ ನೋಟಿಸ್ ಜಾರಿ ಮಾಡಿತ್ತು.

ಮಂಡಳಿ ನೀಡಿರುವ ಶೋಕಾಸ್ ನೋಟಿಸ್‌ಅನ್ನು ರದ್ದುಗೊಳಿಸುವಂತೆ ಕೋರಿ ಫೌಂಡೇಷನ್ ಹೈಕೋರ್ಟ್ ಮೊರೆ ಹೋಗಿತ್ತು.

ಮೇಘಾಲಯದ 4 ಶಾಸಕರು ಬಿಜೆಪಿಗೆ

ನವದೆಹಲಿ (ಪಿಟಿಐ): ಮೇಘಾಲಯದ ಆಡಳಿತರೂಢ ನ್ಯಾಷನಲ್ ಪೀಪಲ್ಸ್ ಪಾರ್ಟಿಯ (ಎನ್‌ಪಿಪಿ) ಇಬ್ಬರು ಶಾಸಕರು ಸಹಿತ ನಾಲ್ವರು ಶಾಸಕರು ಬುಧವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಪಕ್ಷದ ಇಲ್ಲಿನ ಪ್ರಧಾನ ಕಚೇರಿಯಲ್ಲಿ ಎನ್‌ಪಿಪಿಯ ಶಾಸಕರಾದ ಬೆನೆಡಿಕ್ ಮರಾಕ್ ಮತ್ತು ಫೆರ್ಲಿನ್ ಸಾಂಗ್ಮಾ, ತೃಣಮೂಲ ಕಾಂಗ್ರೆಸ್ ಶಾಸಕ ಹಿಮಾಲಯ ಮುಕ್ತನ್ ಶಾಂಗ್‌ಪ್ಲಿಯಾಂಗ್ ಹಾಗೂ ಪಕ್ಷೇತರ ಶಾಸಕ ಸ್ಯಾಮ್ಯುಯೆಲ್ ಎಂ. ಸಂಗ್ಮಾ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆಪಿ.ನಡ್ಡಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಮೇಘಾಲಯ ವಿಧಾನಸಭೆಗೆ ಚುನಾವಣೆ ಹತ್ತಿರವಿರುವಾಗ ಪಕ್ಷ ಸಂಘಟನೆಗೆ ಒತ್ತು ನೀಡಿದ್ದ ಬಿಜೆಪಿಗೆ ನಾಲ್ವರು ಶಾಸಕರ ಸೇರ್ಪಡೆ ಬಲ ನೀಡಿದೆ. 60 ಸದಸ್ಯ ಬಲದ ಮೇಘಾಲಯ ವಿಧಾನಸಭೆಯಲ್ಲಿ 2018ರ ಚುನಾವಣೆಯಲ್ಲಿ ಬಿಜೆಪಿ ಕೇವಲ ಎರಡು ಸ್ಥಾನಗಳಲ್ಲಿ ಮಾತ್ರ ಗೆಲುವು ಕಂಡಿತ್ತು.

ಆಡಳಿತರೂಢ ಎನ್‌ಪಿಪಿಯು, ಬಿಜೆಪಿ ನೇತೃತ್ವದ ನ್ಯಾಷನಲ್ ಡೆಮಾಕ್ರಟಿಕ್ ಪಾರ್ಟಿಯ (ಎನ್‌ಡಿಪಿ)ಯ ಭಾಗವಾಗಿದ್ದರೂ ಸಂಬಂಧಗಳು ಹಳಸಿವೆ. ಎನ್‌ಪಿಪಿಯ ಇಬ್ಬರು ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಬಿಜೆಪಿಯ ನಿರ್ಧಾರ, ಫೆಬ್ರುವರಿಯಲ್ಲಿ ನಡೆಯುವ ಚುನಾವಣೆಗೂ ಮೊದಲು ಎನ್‌ಪಿಪಿ ಮೂಲೆಗುಂಪಾಗಿಸಿ, ರಾಜ್ಯದಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಲು ನಿರ್ಧರಿಸಿರುವುದನ್ನು ಒತ್ತಿಹೇಳಿದಂತಿದೆ.

ನಾಲ್ವರು ಅನುಭವಿಗಳು ಮತ್ತು ಗೌರವಾನ್ವಿತ ರಾಜಕಾರಣಿಗಳ ಸೇರ್ಪಡೆಯು ರಾಜ್ಯದಲ್ಲಿ ಪಕ್ಷದ ಹೊಸ ಆರಂಭ ಎಂದು ಮೇಘಾಲಯ ರಾಜ್ಯಕ್ಕೆ ಪಕ್ಷದ ಉಸ್ತುವಾರಿಯಾಗಿರುವ ಹಿಮಂತ್ ಬಿಸ್ವಾ ಶರ್ಮಾ ಬಣ್ಣಿಸಿದ್ದಾರೆ.

ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ

ಸಾಂಕೇತಿಕ ಬದಲಾವಣೆ: ವಸಾಹತುಶಾಹಿಯಿಂದ ದೇಶ ಹೊರಬರುತ್ತಿರುವುದರ ದ್ಯೋತಕ

ಭೋಪಾಲ್ (ಪಿಟಿಐ): ‘ರಾಜಪಥವನ್ನು ಕರ್ತವ್ಯಪಥ ಎಂದು ಮರುನಾಮಕರಣ ಮಾಡಿರುವುದೂ ಸೇರಿದಂತೆ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಹಲವು ಸಾಂಕೇತಿಕ ಬದಲಾವಣೆಗಳು ಆಗಿವೆ. ಇದು ದೇಶ ವಸಾಹತುಶಾಹಿಯಿಂದ ಹೊರಬರುತ್ತಿರುವುದರ ದ್ಯೋತಕ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಹೇಳಿದ್ದಾರೆ.

ಭಾರತೀಯ ವಿಚಾರ ಸಂಸ್ಥಾನ ನ್ಯಾಸ ಹಮ್ಮಿಕೊಂಡಿರುವ ಮೂರು ದಿನಗಳ ಉಪನ್ಯಾಸ ಕಾರ್ಯಕ್ರಮದಲ್ಲಿ ಮಂಗಳವಾರ ‘ಶ್ರೇಷ್ಠ ಭಾರತದ ನಿರ್ಮಾಣದಲ್ಲಿ ಪ್ರಬುದ್ಧ ಜನರ ಪಾತ್ರ’ ಎಂಬ ವಿಷಯದ ಕುರಿತು ಮಾತನಾಡಿದ ಅವರು, ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಈ ದಿಸೆಯಲ್ಲಿನ ಒಂದು ಹೆಜ್ಜೆ’ ಎಂದರು.



ದತ್ತಾತ್ರೇಯ ಹೊಸಬಾಳೆ

ಬ್ರಿಟಿಷರು ಸ್ಥಾಪಿಸಿದ್ದ ಆಡಳಿತಾತ್ಮಕ ಯಂತ್ರವನ್ನು ಭಾರತೀಯರು ನಡೆಸುತ್ತಿದ್ದಾರೆ. ತಮ್ಮ ಅಗತ್ಯಕ್ಕೆ ಅನುಗುಣವಾಗಿ ಆಡಳಿತ ಯಂತ್ರ ಸ್ಥಾಪಿಸುವ ಜರೂರತ್ತು ಅವರಿಗೆ ಇದೆ ಎಂದು ಬ್ರಿಟನ್‌ನ ಪತ್ರಕರ್ತ ಮಾರ್ಕ್ ಟುಲ್ಲಿ ಈ ಹಿಂದೆ ಹೇಳಿದ್ದನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

‘ಭಾರತಕ್ಕೆ ಈಗ ಅಪಾರ ಮನ್ನಣೆ ದೊರೆಯುತ್ತಿದೆ. ಜನರಲ್ಲಿ ‘ಸ್ವಯಂ’ ಭಾವನೆ ಮೂಡಿಸುವುದಕ್ಕೆ ಇದು ಅಮೃತ ಕಾಲ. ಇದರ ಆಧಾರದಲ್ಲೇ ಶ್ರೇಷ್ಠ ಭಾರತದ ಅಭಿವೃದ್ಧಿ ಸಾಧ್ಯ’ ಎಂದು ಹೇಳಿದ್ದಾರೆ.

‘ಭಾರತದ ನಾಗರಿಕರು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ರೀತಿಯು ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಭಾರತವು ಜಗತ್ತಿನ ಐದನೇ ಆರ್ಥಿಕತೆಯಾಗಿ ರೂಪುಗೊಂಡಿದ್ದು, ವಿಶ್ವದ ವಿವಿಧ ದೇಶಗಳ ಆರ್ಥಿಕ ತಜ್ಞರು ಭಾರತವು ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವುದನ್ನು ಸ್ವೀಕರಿಸುತ್ತಿದ್ದಾರೆ’ ಎಂದೂ ಅವರು ತಿಳಿಸಿದ್ದಾರೆ.

ಸಿಬಿಐ ಮಾಜಿ ನಿರ್ದೇಶಕ ರಿಷಿಕುಮಾರ್ ಶುಕ್ಲಾ ಅವರು, ‘ಭಾರತವು ಜಿ-20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿದ್ದು, ಜಗತ್ತಿಗೆ ತನ್ನ ಸಂಸ್ಕೃತಿ ಪರಿಚಯಿಸಲು ಇದು ಉತ್ತಮ ಅವಕಾಶ’ ಎಂದು ಹೇಳಿದ್ದಾರೆ.

ಬೈಕ್‌ನಲ್ಲಿ ಬಂದು ವಿದ್ಯಾರ್ಥಿನಿ ಮೇಲೆ ಆಸಿಡ್ ದಾಳಿ

ನವದೆಹಲಿ (ಪಿಟಿಐ): ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ವಿದ್ಯಾರ್ಥಿನಿ ಮೇಲೆ ಆಸಿಡ್ ಮಾದರಿಯ ರಾಸಾಯನಿಕ ದ್ರವ ಎರಚಿದ್ದಾರೆ. ಪಶ್ಚಿಮ ದೆಹಲಿಯ ಉತ್ತಮ್ ನಗರದ ಮೋಹನ್ ಗಾರ್ಡನ್ ಪ್ರದೇಶದಲ್ಲಿ ಬುಧವಾರ ಬೆಳಿಗ್ಗೆ ಘಟನೆ ನಡೆದಿದೆ.

‘ವಿದ್ಯಾರ್ಥಿನಿಯನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಮುಖದ ಮೇಲೆ ಶೇ 7 ರಿಂದ 8ರಷ್ಟು ಸುಟ್ಟ ಗಾಯಗಳಾಗಿವೆ. ಆಕೆಯ ಕಣ್ಣುಗಳಿಗೂ ಹಾನಿಯಾಗಿದೆ. ತೀವ್ರ ನಿಗಾ ಘಟಕದಲ್ಲಿ (ಐಸಿಯು) ಆಕೆಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯ ಸ್ಥಿರವಾಗಿದೆ’ ಎಂದು ವೈದ್ಯರು ಹೇಳಿದ್ದಾರೆ. ಈ ಸಂಬಂಧ ವಿದ್ಯಾರ್ಥಿನಿಯ ಸ್ನೇಹಿತ ಸೇರಿ ಮೂವರನ್ನು ಬಂಧಿಸಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಡಿ.20ರಂದು ರೋಹಿಣಿ ನಯ್ಯರ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಅಭಿವೃದ್ಧಿಗಾಗಿ ದುಡಿದವರನ್ನು ಗುರುತಿಸಿ, ಅವರನ್ನು ಪ್ರಶಂಸಿಸಲು ‘ನಯ್ಯರ್ ಪ್ರತಿಷ್ಠಾನ’ ಮುಂದಾಗಿದೆ. ಇದಕ್ಕಾಗಿ ಪ್ರತಿಷ್ಠಾನವು ‘ರೋಹಿಣಿ ನಯ್ಯರ್ ಪ್ರಶಸ್ತಿ’ಯನ್ನು ಆರಂಭಿಸಿದೆ. ಮೊದಲ ಪ್ರಶಸ್ತಿಯನ್ನು ಇದೇ ಡಿಸೆಂಬರ್ 20ರಂದು ಪ್ರದಾನ ಮಾಡಲಾಗುತ್ತದೆ.

‘ರೋಹಿಣಿ ನಯ್ಯರ್ ಅವರು ಯೋಜನಾ ಆಯೋಗದ ಮೂಲಕ ಗ್ರಾಮೀಣ ಅಭಿವೃದ್ಧಿಗಾಗಿ 20 ವರ್ಷ ಸೇವೆ ಸಲ್ಲಿಸಿದ್ದಾರೆ. ಅವರ ಮೊದಲ ವರ್ಷದ ಸ್ಮರಣಾರ್ಥ ‘ರೋಹಿಣಿ ನಯ್ಯರ್ ಪ್ರಶಸ್ತಿ’ಯನ್ನು ಸ್ಥಾಪಿಸಲಾಗಿದೆ. ನಾಗಾಲ್ಯಾಂಡ್‌ನ ರೈತರ ಅಭಿವೃದ್ಧಿಗಾಗಿ ಶ್ರಮಿಸಿದ ವ್ಯಕ್ತಿಯೊಬ್ಬರು ಮೊದಲ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ’ ಎಂದು ನಯ್ಯರ್ ಪ್ರತಿಷ್ಠಾನದ ಸಂಸ್ಥಾಪಕರಲ್ಲಿ ಒಬ್ಬರಾದ ಮತ್ತು ರೋಹಿಣಿ ನಯ್ಯರ್ ಅವರ ಪತಿ ದೀಪಕ್ ನಯ್ಯರ್ ಮಾಹಿತಿ ನೀಡಿದ್ದಾರೆ.

ಪ್ರಶಸ್ತಿಯು ₹ 10 ಲಕ್ಷ ಬಹುಮಾನವನ್ನು ಹೊಂದಿದೆ. ದೆಹಲಿಯ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಹಿಂದೂ ಮಹಾಸಾಗರ ತೊರೆದ ಚೀನಿ ಗೂಢಚರ್ಯೆ ಹಡಗು

ನವದೆಹಲಿ (ಪಿಟಿಐ): ವಾರದಿಂದ ಹಿಂದೂ ಮಹಾಸಾಗರದಲ್ಲಿ ಬೀಡುಬಿಟ್ಟಿದ್ದ ಚೀನಾದ ಅತ್ಯಾಧುನಿಕ ಗೂಢಚರ್ಯೆ ಹಡಗು ‘ಯುವಾನ್ ವಾಂಗ್ ವಿ’ ಬುಧವಾರ ನಿರ್ಗಮಿಸಿರುವುದು ವರದಿಯಾಗಿದೆ.

ಭಾರತವು ಬಂಗಾಳ ಕೊಲ್ಲಿಯಲ್ಲಿ ದೀರ್ಘ ವ್ಯಾಪ್ತಿಯ ಖಂಡಾಂತರ ಕ್ಷಿಪಣಿ ಪರೀಕ್ಷೆ ನಡೆಸುವ ಸಾಧ್ಯತೆಯ ಹಿನ್ನೆಲೆಯಲ್ಲಿ ಚೀನಾದ ಈ ಹಡುಗು ಹಿಂದೂ ಮಹಾ ಸಾಗರಕ್ಕೆ ಡಿ.5ರಂದು ಪ್ರವೇಶಿಸಿತ್ತು. ಕ್ಷಿಪಣಿಯ ಪರೀಕ್ಷೆಗಳು ಮತ್ತು ರಾಕೆಟ್‌ಗಳ ಉಡಾವಣೆಯ ಮೇಲೆ ಗೂಢಚರ್ಯೆ ನಡೆಸುವ ಅತ್ಯಾಧುನಿಕ ಉಪಕರಣಗಳು ಈ ಹಡಗಿನಲ್ಲಿವೆ.

ಈ ಹಡಗಿನ ಮೇಲೆ ಭಾರತೀಯ ನೌಕೆ ಪಡೆಯು ತೀವ್ರ ನಿಗಾ ಇರಿಸಿತ್ತು. ಆಗಸ್ಟ್ ತಿಂಗಳಲ್ಲಿ ಶ್ರೀಲಂಕಾದ ಹಂಬಂಟೋಟ ಬಂದರಿನಲ್ಲಿ ಈ ಹಡಗು ಮೊದಲು ಲಂಗರು ಹಾಕಿದಾಗ ಭಾರತ ಭದ್ರತಾ ದೃಷ್ಟಿಯಿಂದ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಇದರಿಂದ ಶ್ರೀಲಂಕಾ ಮತ್ತು ಚೀನಾ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಉದ್ಭವಿಸಿತ್ತು.

ಏಮ್ಸ್ ಮೇಲಿನ ಸೈಬರ್ ದಾಳಿ ಮೂಲ ಚೀನಾ: ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಏಮ್ಸ್) ವೆಬ್‌ಸೈಟ್ ಮೇಲೆ ನಡೆದಿದ್ದ ಸೈಬರ್‌ದಾಳಿ ಹಿಂದೆಯ ಚೀನಾ ಮತ್ತು ಹಾಂಕ್‌ಕಾಂಗ್ ಕೈವಾಡ ಇದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಹುಲ್ ಜತೆ ಹೆಜ್ಜೆ ಹಾಕಿದ ರಘುರಾಮ್ ರಾಜನ್

ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡ ಆರ್‌ಬಿಐನ ಮಾಜಿ ಗವರ್ನರ್

ಜೈಪುರ (ಪಿಟಿಐ): ಕಾಂಗ್ರೆಸ್ ನಡೆಸುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರು ಬುಧವಾರ ಪಾಲ್ಗೊಂಡು, ರಾಹುಲ್ ಗಾಂಧಿ ಅವರೊಂದಿಗೆ ಹೆಜ್ಜೆ ಹಾಕಿದರು.

ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಸೆಪ್ಟೆಂಬರ್ 7ರಂದು ಆರಂಭವಾದ ಭಾರತ್ ಜೋಡೊ ಯಾತ್ರೆ ಪ್ರಸ್ತುತ ರಾಜಸ್ಥಾನದಲ್ಲಿ ಸಾಗುತ್ತಿದ್ದು, ಶುಕ್ರವಾರ 100 ದಿನಗಳನ್ನು ಪೂರೈಸಲಿದೆ.

ಸವಾಯಿ ಮಧೋಪುರ್ ಜಿಲ್ಲೆಯ ಭಡೋತಿ ಗ್ರಾಮದಿಂದ ಯಾತ್ರೆಯು ಬುಧವಾರ ಆರಂಭವಾಯಿತು. ಈ ವೇಳೆ ರಾಜನ್ ಅವರು ಪಾದಯಾತ್ರೆಯಲ್ಲಿ ಪಾಲ್ಗೊಂಡರು.

ರಾಜಸ್ಥಾನದ ಸವಾಯಿ ಮಧೋಪುರ್ ಜಿಲ್ಲೆಯಲ್ಲಿ ಬುಧವಾರ ನಡೆದ ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್ ಗಾಂಧಿ ಜತೆಗೆ ಆರ್‌ಬಿಐನ ಮಾಜಿ ಗವರ್ನರ್ ರಘುರಾಮ್ ರಾಜನ್ ಹೆಜ್ಜೆ ಹಾಕಿದರು – ಪಿಟಿಐ ಚಿತ್ರ

‘ಆರ್‌ಬಿಐನ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರು ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡು ರಾಹುಲ್ ಗಾಂಧಿ ಅವರೊಂದಿಗೆ ಹೆಜ್ಜೆ ಹಾಕಿದ್ದಾರೆ. ದ್ವೇಷಕಾರುವವರ ವಿರುದ್ಧ ದೇಶದಲ್ಲಿ ಒಗ್ಗೂಡುತ್ತಿರುವ ಜನರ ಸಂಖ್ಯೆ ಹೆಚ್ಚುತ್ತಿದ್ದು, ಇದು ಯಶಸ್ವಿಯಾಗಲಿದೆ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಡಾ. ರಘುರಾಮ್ ರಾಜನ್ ಅವರು ಆರ್‌ಬಿಐನ 23ನೇ ಗವರ್ನರ್ ಆಗಿ 2013ರ ಸೆಪ್ಟೆಂಬರ್‌ನಿಂದ 2016ರ ಸೆಪ್ಟೆಂಬರ್‌ವರೆಗೂ ಕಾರ್ಯ ನಿರ್ವಹಿಸಿದ್ದರು. 2003ರಿಂದ 2006ರವರೆಗೆ ಅವರು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞ ಮತ್ತು ಸಂಶೋಧನಾ ನಿರ್ದೇಶಕರಾಗಿದ್ದರು.

ಸಂಗೀತ ಕಛೇರಿ: ಜೋಡೊ ಯಾತ್ರೆಯ 100 ದಿನದ ಪ್ರಯುಕ್ತ ಶುಕ್ರವಾರ ಜೈಪುರದಲ್ಲಿ ಸಂಗೀತ ಕಛೇರಿಯನ್ನು ಕಾಂಗ್ರೆಸ್ ಆಯೋಜಿಸಿದೆ.

ಪ್ರಸಿದ್ಧ ಗಾಯಕಿ ಸುನಿಧಿ ಚೌಹಾಣ್ ಅವರು ಗಾಯನ ಪ್ರಸ್ತುತಪಡಿಸಲಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ತಿಳಿಸಿದ್ದಾರೆ.

ಇದೇ 19ರಂದು ಆಳ್ವಾರ್‌ನಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ತಂದೆಯ ಸಂಪುಟ ಸೇರಿದ ಉದಯನಿಧಿ

ಚೆನ್ನೈ (ಪಿಟಿಐ): ಡಿಎಂಕೆ ಶಾಸಕ ಮತ್ತು ಪಕ್ಷದ ಯುವ ಘಟಕದ ಕಾರ್ಯದರ್ಶಿ ಉದಯನಿಧಿ ಸ್ಟಾಲಿನ್ ಬುಧವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಉದಯನಿಧಿ ಅವರು ತಮ್ಮ ತಂದೆ ಎಂ.ಕೆ.ಸ್ಟಾಲಿನ್ ಸಂಪುಟ ಸೇರಿದರು. ರಾಜ್ಯಪಾಲ ಆರ್.ಎನ್.ರವಿ ಅವರು ಅಧಿಕಾರದ ಗೋಪ್ಯತೆಯನ್ನು ಬೋಧಿಸಿದರು.

ಮುಖ್ಯಮಂತ್ರಿ ಸ್ಟಾಲಿನ್ ಸೇರಿದಂತೆ ಸಂಪುಟದ ಇತರ ಸದಸ್ಯರು, ಪಕ್ಷದ ಹಿರಿಯ ನಾಯಕರು ಪಾಲ್ಗೊಂಡಿದ್ದರು.

ಪರ- ವಿರುದ್ಧ ಚರ್ಚೆ: ಉದಯನಿಧಿ ಸ್ಟಾಲಿನ್ ಅವರು ಸಂಪುಟ ಸೇರುತ್ತಿದ್ದಂತೆ ತಮಿಳುನಾಡಿನಲ್ಲಿ ಅವರ ಪರ ಮತ್ತು ವಿರುದ್ಧ ಚರ್ಚೆಗಳು ಆರಂಭವಾಗಿವೆ.

ಉದಯನಿಧಿ ಅವರ ಆಗಮವನ್ನು ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಡಿಎಂಕೆ ಚಿಹ್ನೆಯಾದ ‘ಉದಯಿಸುತ್ತಿರುವ ಸೂರ್ಯ’ನಿಗೆ (ರೈಸಿಂಗ್ ಸನ್) ಹೋಲಿಸಿ ಸ್ವಾಗತಿಸಿದ್ದರೆ, ಕೆಲ ವಿಮರ್ಶಕರು ಮತ್ತು ವಿರೋಧ ಪಕ್ಷದವರು ದ್ರಾವಿಡ ಪಕ್ಷದ ಇತಿಹಾಸದಲ್ಲಿ ಮತ್ತೊಬ್ಬ ‘ಪುತ್ರನ ಉದಯ’ವಾಗಿದೆ (ಸನ್‌ರೈಸ್) ಎಂದು ಟೀಕಿಸಿದ್ದಾರೆ.

ಉದಯನಿಧಿ ಸ್ಟಾಲಿನ್ ಅವರಿಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೂಗುಚ್ಛ ನೀಡಿ ಅಭಿನಂದಿಸಿದರು – ಪಿಟಿಐ ಚಿತ್ರ

‘ಪ್ರಮುಖ ಹುದ್ದೆಗಳಿಗೆ ತಮ್ಮ ಮಗ ಮತ್ತು ಮಗಳನ್ನು ನೇಮಿಸುವ ಬಗ್ಗೆ ಪಕ್ಷಕ್ಕೆ ಯಾವುದೇ ರೀತಿಯ ಮುಜುಗರ ಇದ್ದಂತಿಲ್ಲ’ ಎಂದು ರಾಜಕೀಯ ವಿಶ್ಲೇಷಕ ಸುಮಂತ್ ಸಿ ರಾಮನ್ ಅಭಿಪ್ರಾಯಪಟ್ಟಿದ್ದಾರೆ.

ನಟ, ನಿರ್ಮಾಪಕರೂ ಆಗಿರುವ 45 ವರ್ಷದ ಉದಯನಿಧಿ ಅವರು ಸಚಿವರಾಗಿದ್ದಕ್ಕೆ ಡಿಎಂಕೆ ಕಾರ್ಯಕರ್ತರು ಶ್ಲಾಘಿಸಿ, ಹರ್ಷ ವ್ಯಕ್ತಪಡಿಸಿದ್ದಾರೆ.

ಲೋಕಸಭಾ ಸದಸ್ಯ ಟಿ.ಆರ್. ಬಾಲು ಅವರ ಮಗ ಹಾಗೂ ಮೂರು ಬಾರಿಯ ಶಾಸಕ ಟಿ.ಆರ್.ಬಿ. ರಾಜಾ ಅವರು, ‘ಕತ್ತಲೆಯನ್ನು ಓಡಿಸುವ ಶಕ್ತಿ ಇರುವುದು ಸೂರ್ಯನಿಗೆ ಮಾತ್ರ. ಉದಯನಿಧಿ ಸ್ಟಾಲಿನ್ ತಮಿಳುನಾಡು ಸರ್ಕಾರದಲ್ಲಿ ಹೊಸ ಸೂರ್ಯನಂತೆ ಬೆಳಗಲಿದ್ದಾರೆ’ ಎಂದು ಟ್ವೀಟ್ ಮಾಡಿದ್ದಾರೆ.

ಸಿಬಿಐ ಅಧಿಕಾರಿಗಳ ವಿರುದ್ಧ ಸಿಐಡಿ ಪ್ರಕರಣ

ಕೋಲ್ಕತ್ತಾ (ಪಿಟಿಐ): ಸಿಬಿಐ ವಶದಲ್ಲಿ ಇರುವಾಗಲೇ ಮೃತಪಟ್ಟ ಲಲನ್ ಶೇಖ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಪೊಲೀಸ್ ಮಹಾ ನಿರ್ದೇಶಕ, ಎಸ್‌ಪಿ ಸೇರಿದಂತೆ ಏಳು ಮಂದಿ ಸಿಬಿಐ ಅಧಿಕಾರಿಗಳ ಮೇಲೆ ಪಶ್ಚಿಮ ಬಂಗಾಳದ ಅಪರಾಧ ತನಿಖಾ ವಿಭಾಗವು (ಸಿಐಡಿ) ಬುಧವಾರ ಪ್ರಕರಣ ದಾಖಲಿಸಿದೆ.

ಆದರೆ ಸಿಬಿಐ ಅಧಿಕಾರಿಗಳ ವಿರುದ್ಧ ತನ್ನ ಮುಂದಿನ ಆದೇಶದ ವರೆಗೂ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಕಲ್ಕತ್ತಾ ಹೈಕೋರ್ಟ್ ಸಿಐಡಿಗೆ ಬುಧವಾರ ನಿರ್ದೇಶನ ನೀಡಿದೆ. ಪ್ರಕರಣ ತನಿಖೆ ಮುಂದುವರಿಸಲು ಅವಕಾಶ ನೀಡಿರುವ ನ್ಯಾಯಮೂರ್ತಿ ಜಯ್ ಸೇನ್‌ಗುಪ್ತಾ ಅವರು, ತನಿಖೆಯ ಪ್ರತಿ ಪ್ರಕ್ರಿಯೆಯನ್ನು ವಿಡಿಯೊ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Wanted

1)ಉತ್ತಮ ಅನುಭವವುಳ್ಳ ಇಸ್ತ್ರೀ ಮಾಡುವ ಕೆಲಸಗಾರರು ಬೇಕಾಗಿದ್ದಾರೆ ಸಂಬಳ23000-26000/-. ಕೆಲಸ ಬೆಳಿಗ್ಗೆ 10.00ರಿಂದ ರಾತ್ರಿ 8.00.+ ವಸತಿಯಿರುತ್ತದೆ. 2)ಪುರುಷ ಆಫೀಸ್ ಸಹಾಯಕರುಬೆಳಿಗ್ಗೆ 9.30 ರಿಂದರಾತ್ರಿ 9.00.ಸಂಬಳ 14000/- ವಸತಿಯಿದೆ. 3)ಮ್ಯಾನೇಜರ್ (ಡ್ರೈ ಕ್ಲೀನಿಂಗ್ನಲ್ಲಿ ಉತ್ತಮ ಅನುಭವವಿರಬೇಕು) ಸಂಬಳ20,000/- ದಿಂದ 25,000/- +ವಸತಿಯಿದೆ. ಸಂಪರ್ಕಿಸಿ: ಜಯನಗರ, ಬೆಂಗಳೂರು. 9880266007, 9663668007

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 8792156697, 8792155097

REPUTED PVT LTD COMPANY looking for Electrician for lighting projects division. Contact: 9845054158

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

24.12.2022 ರಿಂದ 14 ದಿನಗಳ ಆಂಧ್ರಪ್ರವಾಸ. 23.02.2023 ರಿಂದ 11 ದಿನಗಳ ಕಾಶಿ.ಗಯಾ ನೈಮಿಶಾರಣ್ಯ.ಚಿತ್ರಕೂಟ. 23.02.2023 ರಿಂದ 15 ದಿನಗಳ ಮಲ್ಟಿ ಎಕ್ಸಲ್ ಸೆಮಿ ಸ್ಲಿಪರ್ ಕೋಚ್ ಬಸ್ಸು/ ವಿಮಾನದಲ್ಲಿ ಅಷ್ಟಜ್ಯೋತಿರ್ಲಿಂಗ ಪ್ರವಾಸ. 23.03.2023 ರಿಂದ 10/18 ದಿನಗಳ ನೇಪಾಳ ಮುಕ್ತಿನಾಥ ಕಾಶಿ,ಗಯಾ ಕೊಲ್ಕತ್ತಾ,ಪುರಿ ಕೋನಾರ್ಕ್ ಭುವನೇಶ್ವರ್. 27.04.2023 ರಿಂದ 14 ದಿನಗಳ ಚಾರ್‌ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ಟ್ರಾವಲ್ಸ್ ತ್ಯಾಗರಾಜನಗರ ಬೆಂಗಳೂರು-70. 9342287551 8050629305

02.02.2023 ರಿಂದ 11 ದಿನಗಳು (ವಿಮಾನ/ A/C ಬಸ್ಸಿನಲ್ಲಿ) ಉಜ್ಜಯಿನಿ,ಸೋಮನಾಥ್ ದ್ವಾರಕಾ ಸರ್ದಾರ್ ವಲ್ಲಭ ಬಾಯಿ ಪಟೇಲರ ಪ್ರತಿಮೆ ನಿಷ್ಕಳಂಕ ಮಹಾದೇವ ಸಂಪರ್ಕಿಸಿ: ಅನಿತಾ ಟ್ರಾವಲ್ಸ್, ಶೇಷಾದ್ರಿಪುರ ಬೆಂಗಳೂರು-20. 9448602641 9900589030

28.12.2022 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ ದ್ವಾರಕ ಓಂಕಾರೇಶ್ವರ್ ಮಂಹಾಕಾಳೇಶ್ವರ್ 24.12.2022 9 ದಿನಗಳ ರಾಮೇಶ್ವರ,ಮದುರೈ ಕನ್ಯಾಕುಮಾರಿ ನವಗ್ರಹ ಸಮೇತ 25.12.2022 8 ದಿನಗಳ ಬುದ್ಧಗಯಾ ಅಲಹಾಬಾದ್ ನೈಮಿಶಾರಣ್ಯ 11.02.2023 ಮಹಾ ಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708 9686708171

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

ಜನವರಿ 21 ರಿಂದ ವಿಮಾನದಲ್ಲಿ ಕಾಶಿ ಗಯಾ, ಬುದ್ಧಗಯಾ, ಅಯೋಧ್ಯ ಪ್ರಯೋಗ ನೈಮಿಷಾರಣ್ಯ 29000/ ಮತ್ತು 23/2/23 ರಿಂದ ನೇಪಾಳ 45000/ ಶ್ರೀರಾಮ್ ಟೂರ್ 9108933383, 9606600383

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಷೇರುಪೇಟೆ ವಹಿವಾಟು 144



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,608
ಇಂದಿನ ಅಂತ್ಯ	18,660
	52
ದಿನದ ಗರಿಷ್ಠ	18,696

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1530)
ಸೋಯಾ (ರಿಫೈನ್ಡ್)	₹1230 (1210)
ಸೂರ್ಯಕಾಂತಿ (ರಿಫೈನ್ಡ್)	₹1320 (1330)
ಪಾಮೋಲಿನ್	₹940(925)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ಅಡುಗೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ನವೆಂಬರ್‌ನಲ್ಲಿ ದೇಶಕ್ಕೆ ಆಮದಾಗಿರುವ ಅಡುಗೆ ಎಣ್ಣೆ ಪ್ರಮಾಣದಲ್ಲಿ ಶೇಕಡ 34ರಷ್ಟು ಏರಿಕೆ ಕಂಡುಬಂದಿದೆ. ಕಚ್ಚಾ ಹಾಗೂ ಸಂಸ್ಕರಿತ ತಾಳೆ ಎಣ್ಣೆ ಆಮದು ತೀವ್ರವಾಗಿ ಹೆಚ್ಚಾಗಿದ್ದು ಒಟ್ಟಾರೆ ಏರಿಕೆಗೆ ಕಾರಣ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಹೇಳಿದೆ.

ಎಸ್‌ಇಎ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ನವೆಂಬರ್‌ನಲ್ಲಿ ಒಟ್ಟು 15.28 ಲಕ್ಷ ಟನ್ ಅಡುಗೆ ಎಣ್ಣೆ ಆಮದು ಆಗಿದೆ. ಇದು ಹಿಂದಿನ ವರ್ಷದ ನವೆಂಬರ್‌ನಲ್ಲಿ 11.38 ಲಕ್ಷ ಟನ್ ಆಗಿತ್ತು.

ನವೆಂಬರ್‌ನಲ್ಲಿ ಆಮದಾಗಿರುವ ಕಚ್ಚಾ ತಾಳೆ ಎಣ್ಣೆ ಪ್ರಮಾಣವು ಒಂದು ತಿಂಗಳಲ್ಲಿ ಆಗಿರುವ ಅತಿಹೆಚ್ಚಿನ ಆಮದು. ನವೆಂಬರ್‌ನಲ್ಲಿ ಒಟ್ಟು 9.31 ಲಕ್ಷ ಟನ್ ಕಚ್ಚಾ ತಾಳೆ ಎಣ್ಣೆಯನ್ನು ಆಮದು ಮಾಡಿಕೊಂಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 4.77 ಲಕ್ಷ ಟನ್ ಕಚ್ಚಾ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗಿತ್ತು.

ಸಗಟು ಹಣದುಬ್ಬರ ಶೇ 5.85

ತಗ್ಗಿದ ಆಹಾರ ವಸ್ತುಗಳ ದರ: 21 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದ ಡಬ್ಲ್ಯುಪಿಐ

ನವದೆಹಲಿ (ಪಿಟಿಐ): ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ನವೆಂಬರ್‌ನಲ್ಲಿ 21 ತಿಂಗಳ ಕನಿಷ್ಠ ಮಟ್ಟವಾದ ಶೇಕಡ 5.85ಕ್ಕೆ ಇಳಿಕೆ ಕಂಡಿದೆ. ಆಹಾರ, ಇಂಧನ ಮತ್ತು ತಯಾರಿಕಾ ವಸ್ತುಗಳ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬುಧವಾರ ತಿಳಿಸಿದೆ.

ಸಗಟು ಹಣದುಬ್ಬರವು ಮೇ ತಿಂಗಳಿನಿಂದಲೂ ಇಳಿಕೆಯ ಹಾದಿಯಲ್ಲಿ ಇದೆ. ಅಕ್ಟೋಬರ್‌ನಲ್ಲಿ ಒಂದಂಕಿ ಮಟ್ಟವಾದ ಶೇ 8.39ಕ್ಕೆ ಇಳಿಕೆ ಕಂಡಿತ್ತು. ಕಳೆದ ವರ್ಷದ ನವೆಂಬರ್‌ನಲ್ಲಿ ಸಗಟು ಹಣದುಬ್ಬರವು ಶೇ 14.87ರಷ್ಟು ಇತ್ತು. ಆಹಾರ ವಸ್ತುಗಳ ದರ ತುಸು ಇಳಿಕೆ ಆಗಿರುವುದರಿಂದ 2022ರ ನವೆಂಬರ್‌ನಲ್ಲಿ ಸಗಟು ದರ ಸೂಚ್ಯಂಕವು 21 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಈ ಹಿಂದೆ 2021ರ ಫೆಬ್ರುವರಿಯಲ್ಲಿ ಸಗಟು ಹಣದುಬ್ಬರವು ಶೇ 4.83ರಷ್ಟು ಇತ್ತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಖ್ಯಾಂಶಗಳು

- ಮೇ ತಿಂಗಳಿನಿಂದ ಇಳಿಮುಖ ಹಾದಿಯಲ್ಲಿ ಸಗಟು ಹಣದುಬ್ಬರ
- ಹಣದುಬ್ಬರ ಇನ್ನಷ್ಟು ತಗ್ಗಿಸಲು ಕ್ರಮ: ಹಣಕಾಸು ಸಚಿವಾಲಯ

ಕೇಂದ್ರ ಸರ್ಕಾರವು ಜನಸಾಮಾನ್ಯರಿಗಾಗಿ ಕೆಲಸ ಮಾಡಲಿದ್ದು, ಹಣದುಬ್ಬರವನ್ನು ಇನ್ನಷ್ಟು ತಗ್ಗಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಹೇಳಿದ್ದಾರೆ.

ಆಹಾರ ವಸ್ತುಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 8.33ರಷ್ಟು ಇದ್ದದ್ದು ನವೆಂಬರ್‌ನಲ್ಲಿ ಶೇ 1.07ಕ್ಕೆ ಇಳಿಕೆ ಕಂಡಿದೆ. ತರಕಾರಿಗಳ ಹಣದುಬ್ಬರವು ಶೇ 17.61ರಷ್ಟು ಇದ್ದದ್ದು ಶೇ (–) 20.08ಕ್ಕೆ ತಲುಪಿದೆ. ಇಂಧನ ಮತ್ತು ವಿದ್ಯುತ್ ವಲಯದ ಹಣದುಬ್ಬರವು ಶೇ 17.35ರಷ್ಟು ಮತ್ತು ತಯಾರಿಕಾ ವಲಯದ ಹಣದುಬ್ಬರವು ಶೇ 3.59ರಷ್ಟು ಆಗಿದೆ.

ಗ್ರಾಹಕ ದರ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರವು ನವೆಂಬರ್‌ನಲ್ಲಿ ಶೇ 5.88ಕ್ಕೆ ಇಳಿಕೆ ಕಂಡಿದೆ. ಹೀಗಿದ್ದರೂ ಫೆಬ್ರುವರಿಯಲ್ಲಿ ನಡೆಯಲಿರುವ ಹಣಕಾಸು ನೀತಿ ಪರಾಮರ್ಶೆಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 0.25ರಷ್ಟು ಹೆಚ್ಚಿಸಲಿದೆ ಎಂದು ತಜ್ಞರು ನಿರೀಕ್ಷೆ ಮಾಡಿದ್ದಾರೆ.

ಕೀವ್ ಮೇಲೆ ಡ್ರೋನ್ ದಾಳಿ

ಕೀವ್ (ರಾಯಿಟರ್ಸ್/ಎಪಿ/ಎಎಫ್‌ಪಿ): ರಷ್ಯಾ ಒಂದು ವಾರದ ನಂತರ ಉಕ್ರೇನ್ ರಾಜಧಾನಿ ಕೀವ್ ನಗರದ ಮೇಲೆ ದೊಡ್ಡ ಪ್ರಮಾಣದಲ್ಲಿ ಬುಧವಾರ ಡ್ರೋನ್ ದಾಳಿ ಆರಂಭಿಸಿದೆ.

ಕಟ್ಟಡಗಳನ್ನು ಗುರಿಯಾಗಿಸಿ ಇರಾನ್ ನಿರ್ಮಿತ 'ಶಾಹಿದ್' ಡ್ರೋನ್‌ಗಳಿಂದ ದಾಳಿ ಮಾಡಲಾಗಿದೆ. ಕನಿಷ್ಠ ಐದು ಕಟ್ಟಡಗಳಿಗೆ ಹಾನಿ ಆಗಿದೆ. ನಾಗರಿಕರು ಸುರಕ್ಷಿತ ತಾಣಗಳಲ್ಲಿ ಆಶ್ರಯ ಪಡೆದಿದ್ದು, ಸಾವು, ನೋವು ಸಂಭವಿಸಿಲ್ಲ.

ರಕ್ಷಣಾತ್ಮಕ ಕ್ರಮವಾಗಿ ಉಕ್ರೇನ್‌ನ ಪ್ರತಿ ದಾಳಿ ನಡೆಸಿ 13 ಡ್ರೋನ್‌ಗಳನ್ನು ಹೊಡೆದುರುಳಿಸಲು ಯಶಸ್ವಿಯಾಗಿದೆ. ಈ ಮೂಲಕ ದೊಡ್ಡ ಹಾನಿ ಸಾಧ್ಯತೆಯನ್ನು ತಡೆಯಲಾಗಿದೆ ಎಂದು ಉಕ್ರೇನ್‌ನ ಅಧಿಕಾರಿಗಳು ಹೇಳಿದ್ದಾರೆ.

ಈ ಹೊಡೆದುರುಳಿಸಿದ ಡ್ರೋನ್‌ಗಳ ಪೈಕಿ ಒಂದರ ಅವಶೇಷದಲ್ಲಿ 'ರಿಜಾನ್ಗಾಗಿ' ಎಂಬ ಪ್ರತೀಕಾರ ಸಂದೇಶವಿದೆ. ಕಳೆದವಾರ ಉಕ್ರೇನ್ ಪಡೆಗಳು ಡ್ರೋನ್ ದಾಳಿಯಲ್ಲಿ ಹಾನಿಗೀಡಾದ ರಷ್ಯಾದ ಎರಡು ವಾಯುನೆಲೆಗಳಲ್ಲಿ ರಿಜಾನ್ ಕೂಡಾ ಇತ್ತು.

'ಬುಧವಾರ ಬೆಳಿಗ್ಗೆ ಉಗ್ರರು ದಾಳಿಗೆ ಬಳಸಿದ 13 ಶಾಹಿದ್ ಡ್ರೋನ್ ಗಳನ್ನೂ ನಮ್ಮ ವಾಯು ರಕ್ಷಣಾ ಪಡೆ

ಉಕ್ರೇನ್‌ನ ಇಜಿಯುಂ ಪಟ್ಟಣದಲ್ಲಿದ್ದ ರಷ್ಯಾದ ಶಸ್ತ್ರಾಗಾರವು ಉಕ್ರೇನ್ ಕ್ಷಿಪಣಿ ದಾಳಿಗೆ ಧ್ವಂಸವಾಗಿದೆ– ಎಎಫ್‌ಪಿ ಚಿತ್ರ

ಹೊಡೆದುರುಳಿಸಿದೆ. ನಮ್ಮ ಸೇನೆಯ ಸಾಮರ್ಥ್ಯಕ್ಕೆ ನಾನು ಹೆಮ್ಮೆಪಡುವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಕೆರ್ಸಾನ್‌ನ ಆಡಳಿತ ಕಚೇರಿ ಮೇಲೂ ರಷ್ಯಾ ದಾಳಿ ನಡೆಸಿದ್ದು, ಆರು ಜನರು ಗಾಯ ಗೊಂಡಿದ್ದಾರೆ ಸ್ಥಳೀಯ ಆಡಳಿತ ತಿಳಿಸಿದೆ.

ಕ್ಷಿಪಣಿ ಪೂರೈಸಲು ನಿರ್ಧಾರ: ಅಮೆರಿಕ ತನ್ನಲ್ಲಿನ ಅತ್ಯಾಧುನಿಕ 'ಪೆಟ್ರಿಯಾಟ್' ವಾಯುರಕ್ಷಣಾ ಕ್ಷಿಪಣಿಗಳನ್ನು ಉಕ್ರೇನ್‌ಗೆ ಪೂರೈಸಲು ತೀರ್ಮಾನಿಸಿದೆ.

ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮೊದಲ ಸ್ಥಾನಕ್ಕೆ ರಷ್ಯಾ

ನವದೆಹಲಿ (ರಾಯಿಟರ್ಸ್): ರಷ್ಯಾ ದೇಶವು ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ಇದೇ ಮೊದಲ ಬಾರಿಗೆ ಮೊದಲ ಸ್ಥಾನಕ್ಕೆ ಬಂದಿದೆ. ಭಾರತವು ನವೆಂಬರ್‌ನಲ್ಲಿ ರಷ್ಯಾದಿಂದ ಪ್ರತಿದಿನ 9.08 ಲಕ್ಷ ಬ್ಯಾರಲ್ ಕಚ್ಚಾ ತೈಲ ತರಿಸಿಕೊಂಡಿದೆ.

ಅಕ್ಟೋಬರ್‌ನಲ್ಲಿ ರಷ್ಯಾದಿಂದ ತರಿಸಿಕೊಂಡಿದ್ದ ಕಚ್ಚಾ ತೈಲದ ಪ್ರಮಾಣಕ್ಕೆ ಹೋಲಿಸಿದರೆ ಇದು ಶೇಕಡ 4ರಷ್ಟು ಹೆಚ್ಚು.

ಜಿ7 ದೇಶಗಳು, ಆಸ್ಟ್ರೇಲಿಯಾ ಮತ್ತು ಐರೋಪ್ಯ ಒಕ್ಕೂಟದ 27 ದೇಶಗಳು ರಷ್ಯಾದ ಕಚ್ಚಾ ತೈಲದ ಮೇಲೆ ಡಿಸೆಂಬರ್ 5ರಿಂದ ಅನ್ವಯವಾಗುವಂತೆ ಬೆಲೆ ಮಿತಿ ಹೇರಿವೆ. ಪ್ರತಿ ಬ್ಯಾರಲ್‌ಗೆ 60 ಡಾಲರ್ ಮಿತಿ ಹಾಕಿವೆ. ಈ ಮಿತಿಗಿಂತ ಹೆಚ್ಚಿನ ಬೆಲೆಗೆ ರಷ್ಯಾ ಕಚ್ಚಾ ತೈಲ ಮಾರಲು ಮುಂದಾದರೆ, ಅದಕ್ಕೆ ವಿಮೆ, ಹಣಕಾಸು ಮತ್ತು ಇತರ ಸೇವೆಗಳನ್ನು ಕೊಡಬಾರದು ಎಂದು ಹೇಳಿವೆ.

ನವೆಂಬರ್‌ನಲ್ಲಿ ಭಾರತ ಆಮದು ಮಾಡಿಕೊಂಡ ಕಚ್ಚಾ ತೈಲದಲ್ಲಿ ಶೇ 23ರಷ್ಟು ಪಾಲು ರಷ್ಯಾದ್ದು.

ಭಾರಿ ರಿಯಾಯಿತಿ: ಭಾರತವು ಡಿಸೆಂಬರ್‌ನಲ್ಲಿ ರಷ್ಯಾದ ಕಚ್ಚಾ ತೈಲವನ್ನು ಪ್ರತಿ ಬ್ಯಾರಲ್‌ಗೆ 60 ಡಾಲರ್‌ಗಿಂತ ಕಡಿಮೆ ಬೆಲೆಗೆ ಖರೀದಿಸಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಡ್ಯಾಳ		ಪ್ರಾಕ್ಸರ	11019-19829	ಬಿಳಿಗೋಟು	18786-34629
ಕೋಲ	12500-25000	ಹಳೆಯದು	36099-40099	ಚಾಲಿ	30199-40600
ಹೊಸತು	27500-38000	ಹೊಸತು	31019-32899	ಕೆಂಪುಗೋಟು	26799-27499
ಹಳತು	48000-54500	ಶಿವಮೊಗ್ಗ		ರಾಶಿ	38199-42800
ಕಾರ್ಕಳ		ಬೆಟ್ಟೆ	44899-50010	ತೆಂಗಿನಕಾಯಿ ಕೊಬ್ಬರಿ	
ಹೊಸತು	25000-37500	ಗೊರಬಲು	17069-31659	ಸಣ್ಣ	12100
ಹಳತು	40000-54500	ರಾಶಿ	39500-42599	ಗಡ್ಡ	12100
ಕುಮಟಾ		ಸರಕು	55699-80496	ಮಧ್ಯಮ	12100
ಚಿಪ್ಪು	25089-31089	ಶಿರಸಿ		ಒಟ್ಟು ಆವಕ (ಚೀಲ)	950
ಕೋಕ	20169-28089	ಬೆಟ್ಟೆ	32809-42800		

ಭಾರತದ ಪ್ರಸ್ತಾವಗಳಿಗೆ ವ್ಯಾಪಕ ಬೆಂಬಲ: ಅಜಯ್ ಸೇಠ್

ಬೆಂಗಳೂರು (ಪಿಟಿಐ): ಜಿ20 ದೇಶಗಳ ಹಣಕಾಸು ಮತ್ತು ಕೇಂದ್ರೀಯ ಬ್ಯಾಂಕ್ ಪ್ರತಿನಿಧಿಗಳ ಸಭೆಯಲ್ಲಿ 'ಹಣಕಾಸು ಕಾರ್ಯಸೂಚಿಯ ಕುರಿತ ವಿಚಾರವಾಗಿ ಭಾರತ ಪ್ರಸ್ತಾಪಿಸಿರುವ ಆದ್ಯತೆಗಳಿಗೆ ವಿಸ್ತೃತ ಬೆಂಬಲ ದೊರೆತಿದೆ' ಎಂದು ಕೇಂದ್ರ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ತಿಳಿಸಿದ್ದಾರೆ. ಸಭೆಯಲ್ಲಿ 160ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸೇಠ್ ಮತ್ತು ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯು ಭಾರತದ ಅಧ್ಯಕ್ಷತೆಯಲ್ಲಿ ಜಿ20 ದೇಶಗಳ ಹಣಕಾಸು ಕಾರ್ಯಸೂಚಿ ವಹಿಗಳ ಆರಂಭವನ್ನು ಸೂಚಿಸುತ್ತದೆ. ಭಾರತವು ಪ್ರಸ್ತಾಪಿಸಿರುವ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆದ್ಯತೆಗಳ ಬಗ್ಗೆ ಜಿ20 ದೇಶಗಳ ಅಭಿಮತ ಸಂಗ್ರಹಿಸುವ ಉದ್ದೇಶದಿಂದ ಸಭೆಯನ್ನು ಆಯೋಜಿಸಲಾಗಿತ್ತು.

ಜಾಗತಿಕ ಆರ್ಥಿಕ ವ್ಯವಸ್ಥೆ ಹಾಗೂ ಅದಕ್ಕೆ ಎದುರಾಗಿರುವ ಅಪಾಯಗಳು, ಜಾಗತಿಕ ಸಾಲವನ್ನು ನಿಭಾಯಿಸುವುದು, ಹವಾಮಾನ ಬದಲಾವಣೆಗೆ ಸಂಬಂಧಿಸಿದ

ಮುಖ್ಯಾಂಶಗಳು

- ಕ್ರಿಪ್ಟೊಕರೆನ್ಸಿ ನಿಯಂತ್ರಣಕ್ಕೆ ಜಾಗತಿಕವಾಗಿ ಒಮ್ಮತ ಅಗತ್ಯ: ಸೇಠ್
- ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಕುರಿತು ಚರ್ಚೆ

ಕೆಲಸಗಳಿಗೆ ಹಣಕಾಸಿನ ನೆರವು ಒದಗಿಸುವುದು ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಯಿತು.

ಕ್ರಿಪ್ಟೊಕರೆನ್ಸಿಗಳನ್ನು ನಿಯಂತ್ರಿಸುವ ಕುರಿತು ಕೇಳಿದ ಪ್ರಶ್ನೆಗೆ ಸೇಠ್ ಅವರು, 'ಹಲವು ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ವಿಚಾರವಾಗಿ ಜಾಗತಿಕವಾಗಿ ಒಮ್ಮತ ಮೂಡಬೇಕು. ಆಗ ಇವುಗಳನ್ನು ಉತ್ತಮ ರೀತಿಯಲ್ಲಿ ನಿಯಂತ್ರಿಸಬಹುದು' ಎಂದು ಉತ್ತರಿಸಿದರು.

ಬೆಂಗಳೂರಿನ ನವೋದ್ಯಮ ವ್ಯವಸ್ಥೆಯನ್ನು ಪರಿಚಯಿಸುವ ಉದ್ದೇಶದಿಂದ, ಜಿ20 ಸಭೆಯಲ್ಲಿ ಪಾಲ್ಗೊಂಡಿರುವ ಪ್ರತಿನಿಧಿಗಳನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ ಕರೆದೊಯ್ಯಲಾಗುವುದು. ಅಲ್ಲಿ ಹಲವು ನವೋದ್ಯಮಗಳು ಪ್ರತಿನಿಧಿಗಳಿಗೆ ತಮ್ಮ ಬಗ್ಗೆ ವಿವರ ನೀಡಲಿವೆ ಎಂದು ಸೇಠ್ ಹೇಳಿದ್ದಾರೆ.

₹10 ಸಾವಿರ ಕೋಟಿ ಹೂಡಿಕೆ ಮಾಡಲಿದೆ ಮಹೀಂದ್ರ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಗೆ ಹಾಗೂ ಅಭಿವೃದ್ಧಿಗೆ ಪುಣೆಯಲ್ಲಿ ಮುಂದಿನ 7–8 ವರ್ಷಗಳಲ್ಲಿ ₹10 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಬುಧವಾರ ತಿಳಿಸಿದೆ.

ಮಹಾರಾಷ್ಟ್ರ ಸರ್ಕಾರದ, ವಿದ್ಯುತ್ ಚಾಲಿತ ವಾಹನಗಳಿಗೆ ಕೈಗಾರಿಕಾ ಉತ್ತೇಜನ ಯೋಜನೆ ಅಡಿಯಲ್ಲಿ ಈ ಹೂಡಿಕೆಗೆ ಒಪ್ಪಿಗೆ ದೊರೆತಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

'ಉದ್ವಿಗ್ನ ಸ್ಥಿತಿ ಶಮನಕ್ಕೆ ಆದ್ಯತೆ ಸಿಗಲಿ'

ವಿಶ್ವಸಂಸ್ಥೆ (ಪಿಟಿಐ): 'ಗಡಿಯಲ್ಲಿ ಸಂಘರ್ಷದ ತೀವ್ರತೆಯನ್ನು ತಗ್ಗಿಸಲು ಭಾರತ ಮತ್ತು ಚೀನಾ ಕ್ರಮವಹಿಸಬೇಕು ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರು ಕರೆ ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಗುಟೆರಸ್ ಅವರ ವಕ್ತಾರ, 'ಸಂಘರ್ಷ ಕುರಿತ ವರದಿಗಳನ್ನು ನಾವು ಗಮನಿಸಿದ್ದೇವೆ. ಉದ್ವಿಗ್ನ ಪರಿಸ್ಥಿತಿ ತಗ್ಗಿಸಲು ಒತ್ತು ನೀಡಬೇಕು. ಸಂಘರ್ಷ ಉಲ್ಬಣಗೊಳ್ಳದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಲು ಬಯಸುತ್ತೇವೆ' ಎಂದರು. ಈ ಬಗ್ಗೆ ಬೀಜಿಂಗ್‌ನಲ್ಲಿ ಪ್ರತಿಕ್ರಿಯಿಸಿರುವ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ, ಗಡಿ ಸಂಬಂಧಿಸಿ ಉಭಯ ದೇಶಗಳ ನಡುವೆ ರಾಜತಾಂತ್ರಿಕ ಮತ್ತು ಸೇನಾ ಹಂತದಲ್ಲಿ ಮಾತುಕತೆ ನಡೆದಿದೆ ಎಂದರು.

ಚರ್ಚೆ ಮೂಲಕವೇ ಪರಿಹಾರ –ಅಮೆರಿಕ

ವಾಷಿಂಗ್ಟನ್ (ಪಿಟಿಐ): ಗಡಿ ವಿವಾದಕ್ಕೆ ಭಾರತ ಮತ್ತು ಚೀನಾ ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಬೇಕು ಎಂದು ಅಮೆರಿಕ ಬಯಸುತ್ತದೆ ಎಂದು ಶ್ವೇತಭವನ ಹೇಳಿದೆ. 'ನಾವು ಭಾರತದ ಜೊತೆಗಿದ್ದೇವೆ. ಅಮೆರಿಕದ ರಕ್ಷಣಾ ಇಲಾಖೆ ಮತ್ತು ಭಾರತದಲ್ಲಿನ ಅಮೆರಿಕ ರಾಯಭಾರಿಯ ಮೂಲಕ ಭಾರತದ ಜೊತೆಗೆ ಸತತ ಸಂಪರ್ಕದಲ್ಲಿದ್ದೇವೆ ಎಂದು ರಕ್ಷಣಾ ಇಲಾಖೆಯ ವಕ್ತಾರ ಪ್ಯಾಟ್ ರೈಡರ್ ಪ್ರೆಸ್ ಹೇಳಿದರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ) ₹415-701
ದ್ವಿತಳಿ (ಪ್ರ.ಕೆ) ₹355-808

ಮುಂಬೈ ಧಾರಣೆ

ಶೇಂಗಾ 14–12–2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆಗೆದ ಬಿಟ್ಟ)	1570 (1540)
ಒಂದು ವಾರದ ಡೆಲಿವರಿ	1565 (1535)
ಸೋಯಾ ಕಚ್ಚಾ	1140 (1125)
ಹಾಮ್ ವಾರದ ಡೆಲಿವರಿ	938 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಆಪರಂಜಿ ಚಿನ್ನ 10ಗ್ರಾಂ 54,250 (54,000)
ಬೆಳ್ಳಿ ಕೆ.ಜಿ 67,650 (67,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಮರುಭೂಮಿಯಲ್ಲಿ 27 ಶವಗಳು ಪತ್ತೆ

ಡಾಕರ್ (ಎಪಿ): ಪಶ್ಚಿಮ ಆಫ್ರಿಕಾದ ಚಾಡಿಯನ್ ಮರುಭೂಮಿಯಲ್ಲಿ ನಾಲ್ಕು ಮಕ್ಕಳು ಸೇರಿದಂತೆ 27 ಮಂದಿ ವಲಸಿಗರ ಶವಗಳು ಪತ್ತೆಯಾಗಿವೆ ಎಂದು ವಲಸಿಗರ ಅಂತರರಾಷ್ಟ್ರೀಯ ಸಂಸ್ಥೆ (ಐಒಎಂ) ಮಂಗಳವಾರ ತಿಳಿಸಿದೆ.

ಒಂದೂವರೆ ವರ್ಷದ ಹಿಂದೆ ಮುರುರೋ ನಗರದಿಂದ ಟ್ರಕ್‌ನಲ್ಲಿ ಹೊರಟಿದ್ದ ವಲಸಿಗರು ದಾರಿತಪ್ಪಿರುವ ಸಾಧ್ಯತೆ ಇದ್ದು, ಬಾಯಾರಿಕೆ, ಹಸಿವಿನಿಂದ ಸತ್ತಿರಬಹುದು. ಇದು ಅಪಘಾತಕಾರಿ, ದುಃಖಕರ ಸಂಗತಿ ಎಂದು ವಿಶ್ವಸಂಸ್ಥೆಯ ಸಂಯೋಜಿತ ವಲಸಿಗರ ನಿಯೋಗ ಸಂಸ್ಥೆ ಹೇಳಿದೆ.

ಮೃತಪಟ್ಟವರು, ಉಳಿದ ಇಬ್ಬರು ಆಸ್ಪತ್ರೆ ಸಾಗಿಸುವ ಹಾದಿಯಲ್ಲಿ ಸಾವನ್ನಪ್ಪಿದ್ದಾರೆ.

ಕಾರ್ಯಾಚರಣೆ ಮುಗಿಸಿ ಗ್ರಾಮಕ್ಕೆ ಮರಳುವಾಗ ಅಪಘಾತ ಸಂಭವಿಸಿದೆ. ಪೊಲೀಸ್ ಮತ್ತು ಸೇನೆಯ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನೇಪಾಳ: ಬಸ್ ಅಪಘಾತ, 17 ಸಾವು

ಕಠ್ಮಂಡು (ಪಿಟಿಐ): ಇಲ್ಲಿನ ಬೆಜಾನ್‌ಚೌಕ್ ಗ್ರಾಮದ ಸಮೀಪ ಬಸ್ ಅಪಘಾತದಲ್ಲಿ ಕನಿಷ್ಠ 17 ಮಂದಿ ಮೃತಪಟ್ಟಿದ್ದಾರೆ. ಸ್ಥಳದಲ್ಲಿಯೇ 15 ಮಂದಿ

ಕೋವಿಡ್: ಎಲ್ಲಾ ಪ್ರಕರಣಗಳ ವರದಿ ಬೇಡ

ಬೀಜಿಂಗ್ (ಎಪಿ): ಕೋವಿಡ್ ಪ್ರಕರಣಗಳು ಏರುತ್ತಿದ್ದರೂ ರೋಗಲಕ್ಷಣವಿಲ್ಲದ ಪ್ರಕರಣಗಳನ್ನು ದಾಖಲಿಸಿಕೊಳ್ಳುವುದನ್ನು ಕೈಬಿಡಲು ಚೀನಾ ನಿರ್ಧರಿಸಿದೆ.

'ಸಾಮೂಹಿಕ ಪರೀಕ್ಷೆಯಲ್ಲಿ ಇಂಥ ಪ್ರಕರಣಗಳನ್ನು ಗುರುತಿಸುವುದು ಅಸಾಧ್ಯ' ಎಂದು ಇದಕ್ಕೆ ಕಾರಣವನ್ನು ನೀಡಿದೆ.

ರೋಗಲಕ್ಷಣಗಳಿಲ್ಲದ ಪ್ರಕರಣಗಳನ್ನು ಇನ್ನು ನಿತ್ಯ ವರದಿ ಮಾಡುವುದಿಲ್ಲ. ಸಾರ್ವಜನಿಕ ತಪಾಸಣೆ ವೇಳೆ ದೃಢೀಕೃತವಾದ ಪ್ರಕರಣಗಳನ್ನು ಮಾತ್ರವೇ ವರದಿ ಮಾಡಲಾಗುವುದು ಎಂದು ರಾಷ್ಟ್ರೀಯ ಆರೋಗ್ಯ ಆಯೋಗವು ತಿಳಿಸಿದೆ.

ರಣಜಿ ಕ್ರಿಕೆಟ್: ಗೌತಮ್ ಚೆಂದದ ಬ್ಯಾಟಿಂಗ್; ಕರ್ನಾಟಕದ ಬಿಗಿ ಹಿಡಿತ

ಶರತ್–ವಿದ್ವತ್ ಆಟ; ಸರ್ವಿಸಸ್‌ಗೆ ಸಂಕಷ್ಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಪ್ರಖರಬಿಸಿಲ ಬಿಳಿಲಿನ ಕಿರಣಗಳಲ್ಲಿ ಕರ್ನಾಟಕದ ಆಟಗಾರರು ಬೆಳಗಿದರು.

ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಎರಡನೇ ದಿನ ಬಿ.ಆರ್. ಶರತ್, ಕೃಷ್ಣಪ್ಪ ಗೌತಮ್ ಮತ್ತು ಮಧ್ಯಮವೇಗಿ ವಿದ್ವತ್ ಕಾವೇರಪ್ಪ ಅವರ ಆಟದ ಬಲದಿಂದ ಆತಿಥೇಯ ತಂಡವು ಸರ್ವಿಸಸ್ ಎದುರು ಉತ್ತಮ ಸ್ಥಿತಿ ತಲುಪಿದೆ.

ಶರತ್ (77; 115ಎ, 4X10) ಮತ್ತು ಆಫ್‌ಸ್ಪಿನ್ ಆಲ್‌ರೌಂಡರ್ ಗೌತಮ್ (48; 52ಎ, 4X8) ಏಳನೇ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿದರು. ಇದರಿಂದಾಗಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 74.4 ಓವರ್‌ಗಳಲ್ಲಿ 304 ರನ್ ಗಳಿಸಲು ಸಾಧ್ಯವಾಯಿತು. ಮಂಗಳವಾರ ತಡರಾತ್ರಿ ನಗರದಲ್ಲಿ ಮಳೆ ಸುರಿದಿದ್ದರಿಂದ ಬುಧವಾರ ಬೆಳಿಗ್ಗೆ ಕ್ರೀಡಾಂಗಣದ ತೇವ ಆರಲಿಲ್ಲ. ಆದ್ದರಿಂದ ಸುಮಾರು ಅರ್ಧತಾಸು ವಿಳಂಬವಾಗಿ ಆಟ ಆರಂಭವಾಯಿತು.

ಮೊದಲ ದಿನದಾಟದಲ್ಲಿ ಕರ್ನಾಟಕ ತಂಡವು 40 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 148 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಗೌತಮ್ ಮತ್ತು ಶರತ್ ಎರಡನೇ ದಿನ ಬೆಳಿಗ್ಗೆ ವಿಶ್ವಾಸಭರಿತ ಆಟವಾಡಿದರು. ಸರ್ವಿಸಸ್ ಫೀಲ್ಡಿಂಗ್ ತಂತ್ರಗಾರಿಕೆಯನ್ನು ವಿಫಲಗೊಳಿಸಿದ ಇಬ್ಬರೂ ಸರಾಗವಾಗಿ ರನ್ ಗಳಿಸಿದರು.

ಮೂರು ವಿಕೆಟ್ ಗಳಿಸಿದ ಕರ್ನಾಟಕದ ಮಧ್ಯಮವೇಗಿ ವಿದ್ವತ್ ಕಾವೇರಪ್ಪ ಹಾಗೂ ಅರ್ಧಶತಕ ಗಳಿಸಿದ ಬಿ.ಆರ್ ಶರತ್ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ದಿನದಾಟದ 19ನೇ ಓವರ್‌ನಲ್ಲಿ ಗೌತಮ್ ಪುಲ್ಕಿತ್ ನಾರಂಗ್ ಎಸೆತದಲ್ಲಿ ದಿವೇಶ್‌ಗೆ ಕ್ಯಾಚಿತ್ತರು. ಎದುರು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಕ್ರೀಸ್‌ನಲ್ಲಿದ್ದ ಶರತ್ ಹೊಣೆಯನ್ನು ತಮ್ಮ ಮೇಲೆ ಎಳೆದುಕೊಂಡು ತಂಡದ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದರು. ರೋನಿತ್ ಮೋರೆ ಜೊತೆಗೆ 58 ರನ್ ಸೇರಿಸಿದರು. ಆದರೆ ಮೊತ್ತವು ಮುನ್ನೂರು ದಾಟುವ ಮುನ್ನವೇ ಇಬ್ಬರೂ ಔಟಾದರು. ಈ ಹಂತದಲ್ಲಿ ಜೊತೆಗೂಡಿದ ವೈಶಾಖ (10; 15ಎ) ಮತ್ತು ವಿದ್ವತ್ (ಔಟಾಗದೆ 13) ಮಿಂಚಿದರು. ಇನಿಂಗ್ಸ್ ಏಕೈಕ ಸಿಕ್ಸರ್ ಸಿಡಿಸಿದ ವಿದ್ವತ್ ತಂಡದ '3–ಶತಕ'ಕ್ಕೆ ಕಾಣಿಕೆ ನೀಡಿದರು. ನಂತರ ಬೌಲಿಂಗ್‌ನಲ್ಲಿಯೂ ಮಿಂಚಿದ ವಿದ್ವತ್ ಸರ್ವಿಸಸ್ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಪೆಟ್ಟು ಕೊಟ್ಟರು.

ಮೂರನೇ ಎಸೆತದಲ್ಲಿ ಶುಭಂ ರೋಹಿಲ್ಲಾ ಹಾಗೂ ಐದನೇ ಎಸೆತದಲ್ಲಿ ರಾಹುಲ್ ಸಿಂಗ್ ವಿಕೆಟ್‌ಗಳನ್ನು ಕಬಳಿಸಿದರು. ಮೂರನೇ ಸ್ಲಿಪ್‌ನಲ್ಲಿದ್ದ 'ಪರ್ಮನೆಂಟ್ ಆಟಗಾರ' ನಿಕಿನ್ ಜೋಸ್ ಅತ್ಯುತ್ತಮ ರೀತಿಯಲ್ಲಿ ಪಡೆದ ಕ್ಯಾಚ್‌ಗೆ ರೋಹಿಲ್ಲಾ ಔಟಾದರು. ಮತ್ತು ಎರಡನೇ ಓವರ್‌ನಲ್ಲಿ ಅನ್ಷುಲ್ ಗುಪ್ತಾ ವಿಕೆಟ್ ಕೂಡ ತಮ್ಮದಾಗಿಸಿಕೊಂಡರು. ಇನ್ನೊಂದೆಡೆ ತಾಳ್ಮೆಯಿಂದ ಆಡುತ್ತಿದ್ದ ರವಿ ಚೌಹಾಣ್ (ಬ್ಯಾಟಿಂಗ್ 39) ಅವರೊಂದಿಗೆ ಸೇರಿದ ನಾಯಕ ರಜತ್ ಪಲೀವಾಲ (ಬ್ಯಾಟಿಂಗ್ 42) ವಿಕೆಟ್ ಪತನ ತಡೆದರು. ಆದರೆ, ಮಧ್ಯದಲ್ಲಿ ಗಾಯಗೊಂಡ ರಜತ್ ಕೆಲಹೊತ್ತು ಚಿಕಿತ್ಸೆ ತೆಗೆದುಕೊಂಡರು. ಈ ಸಂದರ್ಭದಲ್ಲಿ ಬ್ಯಾಟಿಂಗ್‌ಗೆ ಬಂದ ದೇವೇಂದ್ರ ಅವರು ವಿಕೆಟ್ ಗಳಿಸುವಲ್ಲಿ ವಿಜಯಕುಮಾರ್ ವೈಶಾಖ ಯಶಸ್ವಿಯಾದರು. ಮತ್ತೆ ಕ್ರೀಸ್‌ಗೆ ಮರಳಿದ ರಜತ್ ಬ್ಯಾಟಿಂಗ್ ಮುಂದುವರಿಸಿದರು. ಪಂದ್ಯದಲ್ಲಿ ಇನ್ನೂ ಅರ್ಧ ಗಂಟೆಯ ಆಟ ಬಾಕಿಯಿದ್ದಾಗಲೇ ಮಂದಬೆಳಕಿನ ಕಾರಣಕ್ಕೆ ಸ್ಥಗಿತಗೊಳಿಸಲಾಯಿತು.

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 304 (74.4 ಓವರ್) (ಮಂಗಳವಾರ 40 ಓವರ್‌ಗಳಲ್ಲಿ 6ಕ್ಕೆ148)

ಶರತ್ ಸಿ ಪಲೀವಾಲ ಬಿ ನಾರಂಗ್ 77 (115ಎ, 4X10), ಗೌತಮ್ ಸಿ ದಿವೇಶ್ ಬಿ ನಾರಂಗ್ 48 (52ಎ, 4X8), ರೋನಿತ್ ಬಿ ರಾಹುಲ್ 26 (41ಎ, 4X4), ವೈಶಾಖ ಸಿ ಪಲೀವಾಲ ಬಿ ನಾರಂಗ್ 10 (15ಎ), ವಿದ್ವತ್ ಔಟಾಗದೆ 13 (15ಎ, 4X1, 6X1)

ಇತರೆ 9 (ಲೆಗ್‌ಬೈ 3, ವೈಡ್ 2, ನೋಬಾಲ್ 4))

ವಿಕೆಟ್ ಪತನ: 7–223 (ಗೌತಮ್; 58.1), 8–281 (ರೋನಿತ್ ಮೋರೆ; 69.1), 9–281(ಬಿ.ಆರ್. ಶರತ್; 70.3), 10–304 (ವಿಜಯಕುಮಾರ್ ವೈಶಾಖ; 74.4)

ಬೌಲಿಂಗ್: ದಿವೇಶ್ ಪಠಾನಿಯ 20–3–86–5, ನಿತಿನ್ ಸಿಂಗ್ 17–3–66–0, ಅರ್ಪಿತ್ ಗುಲೇರಿಯಾ 16–1–70–1, ರಾಹುಲ್ ಸಿಂಗ್ 11–3–19–1, ಪುಲ್ಕಿತ್ ನಾರಂಗ್ 10.4–1–40–3

ಸರ್ವಿಸಸ್ ಮೊದಲ ಇನಿಂಗ್ಸ್ 4ಕ್ಕೆ96 (28 ಓವರ್)

ಶುಭಂ ಸಿ ನಿಕಿನ್ ಬಿ ವಿದ್ವತ್ 8 (3ಎ, 4X2), ರವಿ ಚೌಹಾಣ್ ಬ್ಯಾಟಿಂಗ್ 39 (78ಎ, 4X5), ರಾಹುಲ್ ಸಿಂಗ್ ಬಿ ವಿದ್ವತ್ 0 (2ಎ), ಅನ್ಷುಲ್ ಸಿ ಶರತ್ ಬಿ ವಿದ್ವತ್ 0 (3ಎ), ರಜತ್ ಪಲೀವಾಲ ಬ್ಯಾಟಿಂಗ್ 42 (69ಎ, 4X7) ದೇವೇಂದ್ರ ಸಿ ಶ್ರೇಯಸ್ ಬಿ ವೈಶಾಖ 6 (13ಎ, 4X1)

ಇತರೆ 1 (ಲೆಗ್‌ಬೈ 1)

ವಿಕೆಟ್ ಪತನ: 1–8 (ಶುಭಂ ರೋಹಿಲ್ಲಾ; 0.3), 2–8 (ರಾಹುಲ್ ಸಿಂಗ್ ಗಹ್ಲೋಟ್; 0.5), 3–12 (ಅನ್ಷುಲ್ ಗುಪ್ತಾ; 2.2), 4–78 (ದೇವೇಂದ್ರ ಲೋಹಚಾಬ್ 22.6)

ಬೌಲಿಂಗ್: ವಿದ್ವತ್ ಕಾವೇರಪ್ಪ 10–2–29–3, ವಿಜಯಕುಮಾರ್ ವೈಶಾಖ 10–0–38–1, ರೋನಿತ್ ಮೋರೆ 6–2–19–0, ಕೃಷ್ಣಪ್ಪ ಗೌತಮ್ 2–0–9–0.

ಮಹಿಳಾ ಕ್ರಿಕೆಟ್: ಭಾರತಕ್ಕೆ ಸೋಲು

ಮುಂಬೈ (ಪಿಟಿಐ): ಆಸ್ಟ್ರೇಲಿಯಾ ಮಹಿಳಾ ತಂಡವು ಭಾರತ ಎದುರಿನ 3ನೇ ಟಿ20 ಪಂದ್ಯದಲ್ಲಿ 21 ರನ್‌ಗಳಿಂದ ಗೆದ್ದಿತು. ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುನ್ನಡೆ ಸಾಧಿಸಿತು.

ಬುಧವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಎಲಿಸ್ ಪೆರಿ (75) ಹಾಗೂ ಗ್ರೇಸ್ ಹ್ಯಾರಿಸ್ (41) ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 172 ರನ್ ಗಳಿಸಿತು.

ಭಾರತದ ಬೌಲರ್ ದೀಪ್ತಿ ಶರ್ಮಾ ಹಾಗೂ ದೇವಿಕಾ ವೈದ್ಯ ಅವರು ತಲಾ ಎರಡು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ಭಾರತದ ಪರ ಶಫಾಲಿ ವರ್ಮಾ (52) ಮತ್ತು ಜೆಮಿಮಾ ರಾಡ್ರಿಗಸ್ (37) ಉತ್ತಮವಾಗಿ ಆಡಿದರೂ ಉಳಿದವರಿಂದ ಹೆಚ್ಚಿನ ಬೆಂಬಲ ಸಿಗಲಿಲ್ಲ. ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 151 ರನ್ ಮಾತ್ರ ಗಳಿಸಿತು. ಆಸ್ಟ್ರೇಲಿಯಾ ಪರ ಡಾರ್ಸಿ ಬ್ರೌನ್ ಮತ್ತು ಆ್ಯಶ್ ಗಾರ್ಡನರ್ ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 172 (ಬೆತ್ ಮೂನಿ 30, ಎಲಿಸ ಪೆರಿ 75, ಗ್ರೇಸ್ ಹ್ಯಾರಿಸ್ 41, ರೇಣುಕಾ ಸಿಂಗ್ 24ಕ್ಕೆ2, ಅಂಜಲಿ ಸರವಣಿ 34ಕ್ಕೆ2, ದೀಪ್ತಿ ಶರ್ಮಾ 40ಕ್ಕೆ2, ದೇವಿಕಾ ವೈದ್ಯ 22ಕ್ಕೆ2). ಭಾರತ: 20 ಓವರ್‌ಗಳಲ್ಲಿ 7ಕ್ಕೆ 151 (ಶಫಾಲಿ ವರ್ಮಾ 52, ಹರ್ಮನ್‌ಪ್ರೀತ್ ಕೌರ್ 37, ದೀಪ್ತಿ ಶರ್ಮಾ 25; ಡಾರ್ಸಿ ಬ್ರೌನ್ 19ಕ್ಕೆ 2, ಆ್ಯಶ್ ಗಾರ್ಡನರ್ 21ಕ್ಕೆ 2). ಫಲಿತಾಂಶ: ಆಸ್ಟ್ರೇಲಿಯಾಕ್ಕೆ 21 ರನ್‌ಗಳ ಗೆಲುವು.

ಅಂಧರ ವಿಶ್ವಕಪ್: ಸೆಮಿಗೆ ಭಾರತ

ಪಣಜಿ: ಜಯದ ಓಟ ಮುಂದುವರಿಸಿದ ಭಾರತ ತಂಡದವರು ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ತಲುಪಿದರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ಐದು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿತು. ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 137 ರನ್ ಗಳಿಸಿತು. ಭಾರತ ತಂಡವು 11.5 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ 20 ಓವರ್‌ಗಳಲ್ಲಿ 8ಕ್ಕೆ 137 (ರುವಾನ್ ವಸಂತ 40, ದಮಿತ್ ಸನ್ನುವಾನ್ 18; ಅಜಯ್ ಕುಮಾರ್ ರೆಡ್ಡಿ 18ಕ್ಕೆ 2, ಸುನಿಲ್ ರಮೇಶ್ 15ಕ್ಕೆ 2). ಭಾರತ: 11.5 ಓವರ್‌ಗಳಲ್ಲಿ 3ಕ್ಕೆ 139 (ಪ್ರಕಾಶ್ ಜಯರಾಮಯ್ಯ 81, ಅಜಯ್‌ಕುಮಾರ್ ರೆಡ್ಡಿ ಔಟಾಗದೆ 20). ಭಾರತ– ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶ– ಶ್ರೀಲಂಕಾ ತಂಡಗಳ ನಾಲ್ಕರ ಘಟ್ಟದಲ್ಲಿ ಮುಖಾಮುಖಿಯಾಗಲಿವೆ. ಬೆಂಗಳೂರಿನ ಘಟಕದಲ್ಲಿ ಸೆಮಿಫೈನಲ್ ಪಂದ್ಯಗಳು ಕ್ರೀಡಾಂಗಣದಲ್ಲಿ ಈ ಪಂದ್ಯಗಳು ನಡೆಯಲಿವೆ.

ಅರ್ಜುನ್ ತೆಂಡೂಲ್ಕರ್ ಚೊಚ್ಚಲ ಶತಕ: ಸುಯಶ್ ದ್ವಿಶತಕ

ಪೊರ್ವೊರಿಮ್: ಅರ್ಜುನ್ ತೆಂಡೂಲ್ಕರ್ ತಮ್ಮ ಚೊಚ್ಚಲ ರಣಜಿ ಟ್ರೋಫಿ ಪಂದ್ಯದಲ್ಲಿ ಶತಕ ಸಾಧನೆ ಮಾಡಿದರು.

ಗೋವಾ ತಂಡದಲ್ಲಿ ಆಡುತ್ತಿರುವ ಸಚಿನ್ ಪುತ್ರ ಅರ್ಜುನ್ ಬುಧವಾರ ರಾಜಸ್ಥಾನ ಎದುರಿನ ಪಂದ್ಯದಲ್ಲಿ ಅರ್ಜುನ್ (120; 207ಎಸೆತ, 4X16, 6X2) ಶತಕ ಗಳಿಸಿದರು. ಅವರ ತಂದೆ, ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರೂ ಮುಂಬೈ ತಂಡದ ಪರವಾಗಿ ಪದಾರ್ಪಣೆ ಮಾಡಿದ ಪಂದ್ಯದಲ್ಲಿ ಶತಕ ಗಳಿಸಿದ್ದರು.

ದ್ವಿಶತಕ ದಾಖಲಿಸಿದ ಸುಯಶ್ ಪ್ರಭುದೇಸಾಯಿ (212; 416ಎ, 4X29) ಅವರೊಂದಿಗೆ ಅರ್ಜುನ್ 6ನೇ ವಿಕೆಟ್ ಜೊತೆಯಾಟದಲ್ಲಿ 221 ರನ್ ಸೇರಿಸಿದರು. ತಂಡವು ದಿನದಾಟದ ಕೊನೆಗೆ 163.2 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 493 ರನ್ ಗಳಿಸಿದೆ.

7ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಎಡಗೈ ಬ್ಯಾಟರ್ ಅರ್ಜುನ್ ಚೆಂದದ ಡ್ರೈವ್ ಮತ್ತು ಸ್ಕೀಪ್ ಶಾಟ್ ಆಡಿದರು. ಎರಡು ಸಿಕ್ಸರ್ ಕೂಡ ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗೋವಾ 163.2

ಅರ್ಜುನ್

ಓವರ್‌ಗಳಲ್ಲಿ 8ಕ್ಕೆ 493 (ಅಮೋಘ ಸುನಿಲ್ ದೇಸಾಯಿ 27, ಸುಯಶ್ ಪ್ರಭುದೇಸಾಯಿ 212, ಸ್ನೇಹಲ್ ಸುಹಾಸ್ ಕೌತಂಕರ್ 59, ಅರ್ಜುನ್ ತೆಂಡೂಲ್ಕರ್ 120, ದರ್ಶನ್ ಮಿಸಾಳ್ 33, ಅನಿಕೇತ್ ಚೌಧರಿ 87ಕ್ಕೆ2, ಅರಾಫತ್ ಖಾನ್ 70ಕ್ಕೆ2, ಕಮಲೇಶ್ ನಾಗರಕೋಟಿ 113ಕ್ಕೆ2, ಮಾನವ್ ಸುತಾರ್ 111ಕ್ಕೆ2)

16ರ ಪ್ರೋಟಾಗೆ 9 ವಿಕೆಟ್ (ಗ್ಯಾಂಗ್ಟಕ್ ವರದಿ): ಮಣಿಪುರ ತಂಡದ 16 ವರ್ಷದ ಮಧ್ಯಮವೇಗಿ ಫಿರೋಯಿಜಾಮ್ ಸಿಂಗ್ ರಣಜಿ ಟ್ರೋಫಿ ಪ್ಲೇಟ್ ಗುಂಪಿನಲ್ಲಿ ನಡೆದ ಸಿಕ್ಕಿಂ ಎದುರಿನ ಪಂದ್ಯದಲ್ಲಿ 9 ವಿಕೆಟ್ ಗಳಿಸಿದರು. ಸಿಂಗ್‌ಗೆ ಇದು ಪದಾರ್ಪಣೆ ಪಂದ್ಯವಾಗಿದೆ. ಈ ಸಾಧನೆ ಮಾಡಿದ ದೇಶದ ಐದನೇ ಬೌಲರ್ ಆಗಿದ್ದಾರೆ.

ಅವರು (22–5–69–9) ಅಮೋಘ ಬೌಲಿಂಗ್ ಮಾಡಿದರು. ಇದಕ್ಕೂ ಮುನ್ನ ವಸಂತ ರಂಜಾನೆ (1956–57), ಅಮರಜೀತ್ ಸಿಂಗ್ (1971–72) ಮತ್ತು ಸಂಜಯ್ ಯಾದವ್ (2019–20) ಅವರ ಸಾಲಿಗೆ ಸೇರಿದರು.

ಕಾರು ಅಪಘಾತ:ಫ್ಲಿಂಟಾಫ್‌ಗೆ ಗಾಯ

ಲಂಡನ್ (ಪಿಟಿಐ): ಇಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಆ್ಯಂಡ್ರ್ಯೂ ಫ್ಲಿಂಟಾಫ್ ಅವರು ಗಾಯಗೊಂಡಿದ್ದಾರೆ. ಅವರನ್ನು ಹೆಲಿಕಾಪ್ಟರ್ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ.

ಮಂಗಳವಾರ ಬಿಬಿಸಿ ಟಿವಿಯ ಕಾರ್ಯಕ್ರಮ 'ಟಾಪ್ ಗಿಯರ್' ಚಿತ್ರೀಕರಣದಲ್ಲಿ ಅವರು ಭಾಗವಹಿಸಿದ್ದರು.

'ಟಾಪ್ ಗೇರ್ ಟೆಸ್ಟ್ ಟ್ರ್ಯಾಕ್‌ನಲ್ಲಿ ಅಪಘಾತ ಸಂಭವಿಸಿತು. ವೈದ್ಯಕೀಯ ಸಿಬ್ಬಂದಿ ಕೂಡಲೇ ಧಾವಿಸಿ ಫ್ಲಿಂಟಾಫ್ ಅವರಿಗೆ ಚಿಕಿತ್ಸೆ ನೀಡಿದರು. ನಂತರ ಆಸ್ಪತ್ರೆಗೆ ಕರೆದೊಯ್ಯಲಾಯಿತು' ಎಂದು ಬಿಬಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಫಿಫಾ ವರ್ಲ್ಡ್‌ಕಪ್ 2022 ರ ಫೈನಲ್ ಪ್ರವೇಶಿಸುವ ಅವಕಾಶವನ್ನು ಅರ್ಜೆಂಟೈನಾವು ಕ್ರೊವೇಶಿಯಾದಿಂದ ಕಸಿದುಕೊಂಡಿದೆ!

ಅಲ್ವರೆಜ್ ಎರಡು ಗೋಲು; ಪ್ರಶಸ್ತಿ ಸುತ್ತಿಗೆ ಅರ್ಜೆಂಟೀನಾ: ಕ್ರೊವೇಷ್ಯಾಗೆ ಸೋಲು

ಲುಸೈಲ್‌ನಲ್ಲಿ ಮೆಸ್ಸಿ ಅಲೆ

ಲಯೊನೆಲ್ ಮೆಸ್ಸಿ ಮತ್ತು ಜೂಲಿಯನ್ ಅಲ್ವರೆಜ್ ಸಂಭ್ರಮ– ಎಎಫ್‌ಪಿ ಚಿತ್ರ

ಗೋಲು ವಿವರ
ಅರ್ಜೆಂಟೀನಾ 3
ಲಯೊನೆಲ್ ಮೆಸ್ಸಿ (34ನೇ ನಿ. ಪೆನಾಲ್ಟಿ)
ಜೂಲಿಯನ್ ಅಲ್ವರೆಜ್ (39 ಮತ್ತು 69ನೇ ನಿ.)
ಕ್ರೊವೇಷ್ಯಾ 0

ದೋಹಾ (ಎಎಫ್‌ಪಿ/ಎಪಿ/ರಾಯಿಟರ್ಸ್): ಲುಸೈಲ್ ಕ್ರೀಡಾಂಗಣದಲ್ಲಿ ಮಂಗಳವಾರ ತಡರಾತ್ರಿ ಮನಮೋಹಕ ಆಟದ ರಸದೌತಣ ಉಣಬಡಿಸಿದ ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು ವಿಶ್ವಕಪ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಜೂಲಿಯನ್ ಅಲ್ವರೆಜ್ ಅವರು ಗಳಿಸಿದ ಎರಡು ಫೀಲ್ಡ್ ಗೋಲು ಮತ್ತು ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ ಮೆಸ್ಸಿ ಸೆಮಿಫೈನಲ್‌ನಲ್ಲಿ ತಮ್ಮ ತಂಡವು 3–0ಯಿಂದ ಕ್ರೊವೇಷ್ಯಾವನ್ನು ಸೋಲಿಸಲು ಕಾರಣರಾದರು. ಅರ್ಜೆಂಟೀನಾ ಮೂರನೇ ಪ್ರಶಸ್ತಿ ಗೆಲುವಿನತ್ತ ದಾಪುಗಾಲಿಟ್ಟಿತು.

2014ರ ಫೈನಲ್‌ನಲ್ಲಿ ಜರ್ಮನಿ ಎದುರು ಎಡವಿದ್ದ ಮೆಸ್ಸಿ ಬಳಗ ಇಲ್ಲಿ ಕಿರೀಟ ಧರಿಸುವ ಮತ್ತೊಂದು ಉತ್ತಮ ಅವಕಾಶವನ್ನು ಸೃಷ್ಟಿಸಿಕೊಂಡಿತು. 35 ವರ್ಷದ ಮೆಸ್ಸಿ ಅವರು ಇಲ್ಲಿ ಮೊದಲ ವಿಶ್ವಕಪ್ ಟ್ರೋಫಿ ಜಯದ ಕನಸು ಕೈಗೂಡಿಸಿಕೊಳ್ಳುವ ತವಕದಲ್ಲಿದ್ದಾರೆ.

1978 ಮತ್ತು 1986ರಲ್ಲಿ ಅರ್ಜೆಂಟೀನಾ ಪ್ರಶಸ್ತಿಗೆ ಮುತ್ತಿಕ್ಕಿತ್ತು. ತಂಡವು ಒಟ್ಟು ಆರನೇ ಬಾರಿ ಫೈನಲ್ ಪ್ರವೇಶಿಸಿದೆ.

‘ವಿಶ್ವಕಪ್ ಟೂರ್ನಿಯಾದ್ಯಂತ ನಮ್ಮ ಈ ಕುಟುಂಬ, ಜನರನ್ನು ನೋಡುವುದೇ ಒಂದು ಅದ್ಭುತ ಅನುಭವ. ನಾವು ಬಯಸಿದ್ದ ಕೊನೆಯ ಪಂದ್ಯಕ್ಕೆ ತಯಾರಾಗಿದ್ದೇವೆ’ ಎಂದು ಮೆಸ್ಸಿ ಅವರು ಪ್ರವಾಹೋಪಾದಿಯಲ್ಲಿ ಸೇರಿದ್ದ ಅಭಿಮಾನಿಗಳನ್ನುದ್ದೇಶಿಸಿ ನುಡಿದರು.

2018ರ ರನ್ನರ್ಸ್ ಅಪ್ ಕ್ರೊವೇಷ್ಯಾ ಈ ಸೋಲಿನೊಂದಿಗೆ ಅಭಿಯಾನ ಕೊನೆಗೊಳಿಸಿತು. ಇಲ್ಲಿ ಕಳಪೆ ಡಿಫೆನ್ಸ್ ತಂತ್ರಕ್ಕೆ ದಂಡ ತೆತ್ತಿತು.

ಫ್ರಾನ್ಸ್ ಮತ್ತು ಮೊರೊಕ್ಕೊ ನಡುವೆ ನಡೆಯುವ ಎರಡನೇ ಸೆಮಿಫೈನಲ್ ಪಂದ್ಯದ ವಿಜೇತರನ್ನು ಮೆಸ್ಸಿ ಬಳಗ ಭಾನುವಾರ ಪ್ರಶಸ್ತಿ ಸುತ್ತಿನಲ್ಲಿ ಎದುರಿಸಲಿದೆ.

ಮೂರನೇ ಸ್ಥಾನಕ್ಕಾಗಿ ಇದೇ 17ರಂದು ನಡೆಯುವ ಪಂದ್ಯದಲ್ಲಿ ಕ್ರೊವೇಷ್ಯಾ ತಂಡವು ಮೊರೊಕ್ಕೊ – ಫ್ರಾನ್ಸ್ ನಡುವಣ ಪಂದ್ಯದಲ್ಲಿ ಸೋತ ತಂಡವನ್ನು ಎದುರಿಸಲಿದೆ.

ಲೂಕಾ ಮಾಡ್ರಿಚ್ ಕನಸು ಭಗ್ನ

ವಿಶ್ವ ಶ್ರೇಷ್ಠ ಮಿಡ್‌ಫೀಲ್ಡರ್‌ಗಳಲ್ಲಿ ಒಬ್ಬರಾದ ಕ್ರೊವೇಷ್ಯಾದ 37 ವರ್ಷದ ಲೂಕಾ ಮಾಡ್ರಿಚ್ ಅವರ ವಿಶ್ವಕಪ್ ಗೆಲುವಿನ ಕನಸು ನುಚ್ಚುನೂರಾಯಿತು. ಅರ್ಜೆಂಟೀನಾ ಎದುರಿನ ಪಂದ್ಯ ಮುಗಿಯಲು ಒಂಬತ್ತು ನಿಮಿಷಗಳು ಇರುವಾಗ ಮಾಡ್ರಿಚ್ ಅಂಗಣದಿಂದ ನಿರ್ಗಮಿಸಿದರು. ಈ ವೇಳೆ ಗ್ಯಾಲರಿಯಲ್ಲಿ ಸೇರಿದ್ದ 89 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಿಂದ ಭಾರೀ ಕರತಾಡನ ಕೇಳಿಬಂತು.

2006ರಲ್ಲಿ ಅಂತರರಾಷ್ಟ್ರೀಯ ಪಂದ್ಯಗಳಿಗೆ ಪದಾರ್ಪಣೆ ಮಾಡಿದ್ದ ಮಾಡ್ರಿಚ್ ಅವರಿಗೆ ಬಹುತೇಕ ಇದು ಕೊನೆಯ ವಿಶ್ವಕಪ್ ಆಗಿದೆ. ದೇಶದ ಪರ ಅವರು 161 ಪಂದ್ಯಗಳನ್ನು ಆಡಿದ್ದಾರೆ. 2018ರ ಆವೃತ್ತಿಯಲ್ಲಿ ತಂಡವನ್ನು ಫೈನಲ್ ತಲುಪಿಸಿದ್ದರು.

ಜಿದ್ದಾಜಿದ್ದಿ ಪೈಪೋಟಿ: ಆರಂಭದಿಂದ ತೀವ್ರ ಪೈಪೋಟಿ ಕಂಡುಬಂದ ಪಂದ್ಯಕ್ಕೆ 25ನೇ ನಿಮಿಷದಿಂದ ಮತ್ತಷ್ಟು ಜೀವಕಳೆ ಬಂದಿತು. ಅರ್ಜೆಂಟೀನಾದ ಎಂಜೊ ಫರ್ನಾಂಡೆಜ್ ಕೆಳಮಟ್ಟದಲ್ಲಿ ಒದ್ದ ಚೆಂಡನ್ನು ಕ್ರೊವೇಷ್ಯಾ ಗೋಲ್‌ಕೀಪರ್ ಡಾಮಿನಿಕ್ ಲಿವಕೊವಿಚ್ ಯಶಸ್ವಿಯಾಗಿ ತಡೆದರು. ಬಳಿಕ ಫರ್ನಾಂಡೆಜ್ ನೆರವಿನಲ್ಲಿ ಅಲ್ವರೆಜ್ ಚೆಂಡನ್ನು ಗೋಲ್‌ಪೋಸ್ಟ್‌ನತ್ತ ಸಾಗಿಸುವ ಹಂತದಲ್ಲಿ ಲಿವಕೊವಿಚ್‌ಗೆ ಡಿಕ್ಕಿ ಹೊಡೆದರು.

ಈ ಕುರಿತು ಪರಿಶೀಲಿಸಿದ ರೆಫರಿ ಡೇನಿಯಲ್ ಒರ್ಸಾಟೊ ಅರ್ಜಟೀನಾಗೆ ಪೆನಾಲ್ಟಿ ನೀಡಿದರು. ಕ್ರೊವೇಷ್ಯಾ ಆಟಗಾರರು ಪ್ರತಿಭಟಿಸಿದರು. ಈ ವೇಳೆ ಕ್ರೊವೇಷ್ಯಾದ ಸಹಾಯಕ ಕೋಚ್ ಮರಿಯೊ ಮ್ಯಾಂಡಜುಕಿಚ್ ಅವರಿಗೆ ರೆಫರಿ ರೆಡ್‌ಕಾರ್ಡ್ ನೀಡಿದರು. ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಪಡೆದ ಮೆಸ್ಸಿ ಅತಿ ವೇಗವಾಗಿ ಗೋಲ್ ಪೋಸ್ಟ್‌ನ ಎಡಭಾಗಕ್ಕೆ ಒದ್ದರು. ಲಿವಕೊವಿಚ್ ಎಡಭಾಗಕ್ಕೇ ಡ್ರೈವ್ ಮಾಡಿದರೂ ಚೆಂಡು ಅವರ ತಲೆಮೇಲಿಂದ ಹಾರಿ ಗುರಿ ಸೇರಿತು. ಇದು ಮೆಸ್ಸಿ ಅವರು ಟೂರ್ನಿಯಲ್ಲಿ ಗಳಿಸಿದ ಐದನೇ ಗೋಲು. ಇದರೊಂದಿಗೆ ಅತಿ ಹೆಚ್ಚು ಗೋಲು ದಾಖಲಿಸಿದವರ ಪಟ್ಟಿಯಲ್ಲಿ ಫ್ರಾನ್ಸ್‌ನ ಕಿಲಿಯನ್ ಎಂಬಾಪೆಯವರೊಂದಿಗೆ ಸಮಬಲ ಸಾಧಿಸಿದರು.

ವಿಶ್ವಕಪ್ ಟೂರ್ನಿಯ ತಮ್ಮ 25ನೇ ಪಂದ್ಯದಲ್ಲಿ ಮೆಸ್ಸಿ ಅವರ 11ನೇ ಗೋಲು ಇದು. ಇದರೊಂದಿಗೆ ಅವರು ಟೂರ್ನಿಯಲ್ಲಿ ತಮ್ಮ ದೇಶದ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎನಿಸಿಕೊಂಡರು. ಈ ಹಿಂದಿನ ದಾಖಲೆ ಗೇಬ್ರಿಯಲ್ ಬಟಿಸ್ಟುವಾ (10) ಹೆಸರಿನಲ್ಲಿತ್ತು.

39ನೇ ನಿಮಿಷದಲ್ಲಿ ಅರ್ಜೆಂಟೀನಾ ಮುನ್ನಡೆ 2–0ಗೆ ಹೆಚ್ಚಿತು. ಕ್ರೀಡಾಂಗಣದ ಅರ್ಧಭಾಗದಿಂದ ಚೆಂಡನ್ನು ಸೊಗಸಾಗಿ ಡ್ರಿಬಲ್ ಮಾಡುತ್ತಾ ಸಾಗಿದ ಅಲ್ವರೆಜ್ ಎದುರಾಳಿ ಡಿಫೆನ್ಸ್ ಆಟಗಾರರಾದ ಜೊಸಿಫ್ ಜುರಾನೊವಿಚ್ ಮತ್ತು ಬಾರ್ನಾ ಸೊಸಾ ಅವರನ್ನು ದಾಟಿ ಮುನ್ನುಗ್ಗಿ ಚೆಂಡನ್ನು ಗುರಿ ಸೇರಿಸಿದರು. ಈ ವೇಳೆ ಕ್ರೀಡಾಂಗಣದಲ್ಲಿ ಸಂಭ್ರಮದ ಅಲೆ ಎದ್ದಿತು.

ಬಳಿಕ ಕಾರ್ನರ್ ಕಿಕ್‌ನಲ್ಲಿ ಅಲೆಕ್ಸಿಸ್ ಮ್ಯಾಕ್ ಅಲಿಸ್ಟರ್ ಹೆಡರ್ ಮಾಡಿದ ಚೆಂಡನ್ನು ಲಿವಕೊವಿಚ್ ತಡೆದು ಅರ್ಜೆಂಟೀನಾದ ಮೂರನೇ ಗೋಲು ಅವಕಾಶವನ್ನು ವಿಫಲಗೊಳಿಸಿದರು. ಈ ಹಂತದಲ್ಲಿ ಕ್ರೊವೇಷ್ಯಾ ಪ್ರತಿದಾಳಿಗೆ ಪ್ರಯತ್ನಿಸುತ್ತಲೇ ಇತ್ತು. ಜುರಾನೊವಿಚ್ ಕ್ರಾಸ್‌ಶಾಟ್‌ನಲ್ಲಿ ಗೋಲು ಗಳಿಕೆಯ ಪ್ರಯತ್ನವನ್ನು ತಡೆಯುವಲ್ಲಿ ಅರ್ಜೆಂಟೀನಾ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಯಶಸ್ವಿಯಾದರು.

ಅರ್ಜೆಂಟೀನಾದ 3ನೇ ಗೋಲು ಮತ್ತಷ್ಟು ಚಿತ್ತಾಪಹಾರಿಯಾಗಿತ್ತು. 69ನೇ ನಿಮಿಷದಲ್ಲಿ ಗೋಲ್‌ಪೋಸ್ಟ್‌ನ ಎಡಭಾಗದಲ್ಲಿ ಚೆಂಡನ್ನು ಡ್ರಿಬಲ್ ಮಾಡುತ್ತಾ ಬಂದ ಮೆಸ್ಸಿ ಅವರು ಅಲ್ವರೆಜ್ ಅವರಿಗೆ ಸೊಗಸಾಗಿ ಪಾಸ್ ರವಾನಿಸಿದರು. ಈ ವೇಳೆ ಚುರುಕಾಗಿ ಪ್ರತಿಕ್ರಿಯಿಸಿದ ಅಲ್ವರೆಜ್ ಗೋಲು ದಾಖಲಿಸಿದರು. ಟೂರ್ನಿಯಲ್ಲಿ ಇದು ಅವರಿಗೆ 4ನೇ ಗೋಲು.

ಮುಗಿಲು ಮುಟ್ಟಿದ ಸಂಭ್ರಮ

ಬ್ಯೂನಸ್ ಐರಿಸ್ (ರಾಯಿಟರ್ಸ್): ಅರ್ಜೆಂಟೀನಾ ತಂಡವು ಗೆಲುವು ಸಾಧಿಸುತ್ತಿದ್ದಂತೆ ಅಲ್ಲಿಯ ಅಭಿಮಾನಿಗಳು ಬೀದಿಗಿಳಿದು, ಹಾಡು– ನೃತ್ಯದ ಮೂಲಕ ಸಂಭ್ರಮಿಸಿದರು. ರಾಜಧಾನಿಯ ಬೀದಿಗಳಲ್ಲಿ ರಾಷ್ಟ್ರಧ್ವಜ ಹಿಡಿದು ಸಂತಸದಲ್ಲಿ ನಲಿದಾಡಿದರು. ಕೆಫೆ, ರೆಸ್ಟೊರೆಂಟ್ ಮತ್ತಿತರ ತಾಣಗಳಲ್ಲಿ ದೊಡ್ಡ ಪರದೆಗಳ ಮೂಲಕ ಪಂದ್ಯ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು.

ನವದೆಹಲಿ (ಪಿಟಿಐ ವರದಿ): ಪಶ್ಚಿಮ ಬಂಗಾಳದ ಕೋಲ್ಕತ್ತಾ ಮತ್ತು ಕೇರಳದ ಕೊಚ್ಚಿಯಲ್ಲೂ ಅರ್ಜೆಂಟೀನಾ ಹಾಗೂ ಮೆಸ್ಸಿ ಅಭಿಮಾನಿಗಳು ಸಂಭ್ರಮ ಆಚರಿಸಿದರು.

2011ರಲ್ಲಿ ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರಿದ್ದ ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಜಯಿಸಿದಂತೆ ಮೆಸ್ಸಿ ಅವರೂ ಟ್ರೋಫಿ ಜಯಿಸಬೇಕು ಎಂದು ಅಭಿಮಾನಿಗಳು ಆಶಿಸಿದರು.

ದೋಹಾದ ಲುಸೈಲ್ ಕ್ರೀಡಾಂಗಣದಲ್ಲಿ ಅರ್ಜೆಂಟೀನಾ ಅಭಿಮಾನಿಗಳ ಸಂಭ್ರಮ– ಎಎಫ್‌ಪಿ ಚಿತ್ರ

ಇದು ನನ್ನ ಕೊನೆಯ ವಿಶ್ವಕಪ್: ಮೆಸ್ಸಿ

ಟೂರ್ನಿಯ ಫೈನಲ್ ಪಂದ್ಯವೇ ವಿಶ್ವಕಪ್‌ನಲ್ಲಿ ತಮ್ಮ ಕೊನೆಯ ಪಂದ್ಯವಾಗಲಿದೆ ಎಂದು ಮೆಸ್ಸಿ ಖಚಿತಪಡಿಸಿದ್ದಾರೆ. ಭಾನುವಾರ ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯು ಅವರಿಗೆ 172ನೇ ಅಂತರರಾಷ್ಟ್ರೀಯ ಪಂದ್ಯವಾಗಲಿದೆ.

‘ಫೈನಲ್‌ನಲ್ಲಿ ಕೊನೆಯ ಪಂದ್ಯ ಆಡುವ ಮೂಲಕ ನನ್ನ ವಿಶ್ವಕಪ್ ಪಯಣವನ್ನು ಮುಗಿಸುತ್ತಿರುವುದು ಅತ್ಯಂತ ಸಂತೋಷವಾಗಿದೆ. ಈ ಸಾಧನೆ ನನಗೆ ಖುಷಿ ತಂದಿದೆ’ಎಂದು ಮೆಸ್ಸಿ ಅರ್ಜೆಂಟೀನಾದ ಮಾಧ್ಯಮ ಡಿಯಾರಿಯೊ ಡೆಪೋರ್ಟಿವೊ ಓಲೆಗೆ ತಿಳಿಸಿದರು.

‘ಹಲವು ವರ್ಷಗಳ ಬಳಿಕ ಮುಂದಿನ ವಿಶ್ವಕಪ್ ನಡೆಯುತ್ತದೆ. ಅಲ್ಲಿ ಇಂತಹ ಸಾಧನೆ ಮಾಡಲಾಗುತ್ತದೆ ಎಂದು ನನಗೆ ಅನ್ನಿಸುತ್ತಿಲ್ಲ. ಈ ರೀತಿ ವಿದಾಯ ಹೇಳುವುದು ಅತ್ಯುತ್ತಮ ಎನಿಸುತ್ತದೆ’ ಎಂದು ಮೆಸ್ಸಿ ಹೇಳಿದ್ದಾರೆ.

ಮೆಸ್ಸಿ ಅವರಿಗೆ ಇದು ಒಟ್ಟು ಐದನೇ ವಿಶ್ವಕಪ್ ಟೂರ್ನಿ.

ಸಂಕ್ಷಿಪ್ತ ಸುದ್ದಿ

ಮಹಿಳಾ ಹಾಕಿ: ಭಾರತಕ್ಕೆ ಗೆಲುವು

ವೆಲೆನ್ಸಿಯಾ, ಸ್ಪೇನ್ (ಪಿಟಿಐ): ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಟೂರ್ನಿಯಲ್ಲಿ ಭಾರತ ಮಹಿಳಾ ತಂಡವು ಮತ್ತೊಂದು ಜಯ ಗಳಿಸಿತು. ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ 2–0ಯಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತು. ಭಾರತಕ್ಕಾಗಿ ದೀಪ್ ಗ್ರೇಸ್ ಎಕ್ಕಾ (14ನೇ ನಿಮಿಷ), ಗುರ್ಜಿತ್ ಕೌರ್ (59ನೇ ನಿ.) ಗೋಲು ಗಳಿಸಿದರು.

ಜೈನ್ ವಿವಿಗೆ ಜಯ

ಬೆಂಗಳೂರು: ಕರ್ನಾಟಕದ ಜೈನ್ ವಿವಿ ತಂಡವು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿದರು.

ಶಾಂತಿನಗರದ ಫೀಲ್ಡ್‌ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅರೆನಾದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಜೈನ್ ವಿವಿ 5–0ಯಿಂದ ಟಿಎನ್‌ಪಿಇಎಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ದೇಶ್ ಪೂವಯ್ಯ (5, 38, 39ನೇ ನಿ.) ಹ್ಯಾಟ್ರಿಕ್ ಸಾಧಿಸಿದರು. ಗೌತಮ್ ಎಂ.ಎ. (22 ಮತ್ತು 36ನೇ ನಿ.) ಕೂಡ ಮಿಂಚಿದರು.

ಪ್ರೊ ಕಬಡ್ಡಿ ಲೀಗ್: ಬುಲ್ಸ್– ಪ್ಯಾಂಥರ್ಸ್ ಮುಖಾಮುಖಿ

ಮುಂಬೈ: ಅಮೋಘ ಲಯದಲ್ಲಿರುವ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ.

ಗುರುವಾರ ಇಲ್ಲಿಯ ಎನ್‌ಎಸ್‌ಸಿಐ ಎಸ್‌ವಿಪಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯಗಳಿಗೆ ವೇದಿಕೆ ಸಜ್ಜುಗೊಂಡಿದೆ.

ಮಂಗಳವಾರ ನಡೆದ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಬೆಂಗಳೂರು ತಂಡವು ದಬಾಂಗ್ ಡೆಲ್ಲಿಗೆ ಸೋಲುಣಿಸಿ ನಾಲ್ಕರ ಘಟ್ಟ ಪ್ರವೇಶಿಸಿದೆ. ಭರತ್ (ಒಟ್ಟು 272 ರೇಡಿಂಗ್ ಪಾಯಿಂಟ್ಸ್) ವಿಕಾಶ್ ಖಂಡೋಲ (130) ರೇಡಿಂಗ್‌ನಲ್ಲಿ ಬುಲ್ಸ್ ತಂಡದ ಶಕ್ತಿಯಾಗಿದ್ದಾರೆ. ನೀರಜ್ ನರ್ವಾಲ್ ಮತ್ತು ಸಚಿನ್ ನರ್ವಾಲ್ ಕೂಡ ಮಿಂಚಬಲ್ಲರು. ಡಿಫೆನ್ಸ್ ಸೌರಭ್ ನಂದಾಲ್ ಮತ್ತು ಅಮನ್ ಉತ್ತಮ ಸಾಮರ್ಥ್ಯ ತೋರುತ್ತಿದ್ದಾರೆ.

ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಿರುವ ಜೈಪುರ ಕೂಡ ಗೆಲುವಿನ ವಿಶ್ವಾಸದಲ್ಲಿದೆ. ಅರ್ಜುನ್ ದೇಶ್ವಾಲ್ (286 ರೇಡ್ ಪಾಯಿಂಟ್ಸ್) ಅವರ ಮೇಲೆ ತಂಡ ನಿರೀಕ್ಷೆಯಿಟ್ಟುಕೊಂಡಿದೆ.

ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆಯುವ ಸಾಧ್ಯತೆಯಿದೆ.

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ತಮಿಳ್ ತಲೈವಾಸ್ ತಂಡಗಳು ಮುಖಾಮುಖಿಯಾಗಲಿವೆ.

ಸೆಮಿಫೈನಲ್

Vs	ಬೆಂಗಳೂರು ಬುಲ್ಸ್ - ಜೈಪುರ ಪಿಂಕ್ ಪ್ಯಾಂಥರ್ಸ್	ಆರಂಭ ರಾತ್ರಿ 7.30
Vs	ಪುಣೇರಿ ಪಲ್ಟನ್– ತಮಿಳ್ ತಲೈವಾಸ್	ಆರಂಭ ರಾತ್ರಿ 8.30
ಲೈವ್	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್	

ಭಾರತ– ಬಾಂಗ್ಲಾ ನಡುವಣ ಮೊದಲ ಟೆಸ್ಟ್: ರಾಹುಲ್, ವಿರಾಟ್ ವೈಫಲ್ಯ; ತೈಜುಲ್‌ಗೆ 3 ವಿಕೆಟ್

ಪೂಜಾರ, ಶ್ರೇಯಸ್ ಜೊತೆಯಾಟದ ಆಸರೆ

ಚತ್ತೋಗ್ರಾಮ್, ಬಾಂಗ್ಲಾದೇಶ (ಪಿಟಿಐ): ಟೆಸ್ಟ್ ಪರಿಣತ ಬ್ಯಾಟರ್ ಚೇತೇಶ್ವರ್ ಪೂಜಾರ ಮತ್ತು ಶತಕದತ್ತ ಚಿತ್ತ ನೆಟ್ಟಿರುವ ಶ್ರೇಯಸ್ ಅಯ್ಯರ್ ಬಾಂಗ್ಲಾದೇಶ ಎದುರಿನ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡಕ್ಕೆ ಆಸರೆಯಾದರು.

ಬುಧವಾರ ಟಾಸ್ ಗೆದ್ದ ಭಾರತ ತಂಡದ ನಾಯಕ ಕೆ.ಎಲ್. ರಾಹುಲ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಅವರು ಮತ್ತು ಶುಭಮನ್ ಗಿಲ್ ಉತ್ತಮ ಆರಂಭ ನೀಡುವಲ್ಲಿ ವಿಫಲರಾದರು. ವಿರಾಟ್ ಕೊಹ್ಲಿ ಕೂಡ 1 ರನ್ ಗಳಿಸಿ ನಿರ್ಗಮಿಸಿದರು. ಇದರಿಂದಾಗಿ ತಂಡವು 48 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಆದರೂ ದಿನದಾಟದ ಮುಕ್ತಾಯಕ್ಕೆ ಪ್ರವಾಸಿ ಬಳಗವು 90 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 278 ರನ್ ಗಳಿಸಲು ಪೂಜಾರ (90; 203ಎ, 4X11) ಬ್ಯಾಟಿಂಗ್ ಪ್ರಮುಖ ಕಾರಣವಾಯಿತು.

ಪೂಜಾರ ಎರಡು ಜೊತೆಯಾಟಗಳ ಮೂಲಕ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಅವರು ರಿಷಭ್ ಪಂತ್ ಜೊತೆಗೆ 4ನೇ ವಿಕೆಟ್‌ಗೆ 64 ರನ್ ಸೇರಿಸಿದರು. ಇದರಲ್ಲಿ ರಿಷಭ್ ಕಾಣಿಕೆಯೇ 46 ರನ್. 45 ಎಸೆತಗಳಲ್ಲಿ 2 ಭರ್ಜರಿ ಸಿಕ್ಸರ್ ಮತ್ತು 4 ಬೌಂಡರಿ ಬಾರಿಸಿದ ರಿಷಭ್ ಮಿಂಚಿದರು. ಊಟದ ವಿರಾಮದ ನಂತರ ಮೆಹದಿ ಹಸನ್ ಮಿರಾಜ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದ ರಿಷಭ್ 4 ರನ್‌ಗಳಿಂದ ಅರ್ಧಶತಕ ತಪ್ಪಿಸಿಕೊಂಡರು.

ಚೇತೇಶ್ವರ್ ಪೂಜಾರ ಮತ್ತು ಶ್ರೇಯಸ್ ಅಯ್ಯರ್ ಜೊತೆಯಾಟ –ಎಎಫ್‌ಪಿ ಚಿತ್ರ

ಈ ಹೊತ್ತಿನಲ್ಲಿ ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ (ಬ್ಯಾಟಿಂಗ್ 82; 169ಎ, 4X10), ಪೂಜಾರ ಜೊತೆಗೆ ಇನಿಂಗ್ಸ್‌ಗೆ ಬಲ ತುಂಬಿದರು.

ಚಹಾ ವಿರಾಮದವರೆಗೂ ಇಬ್ಬರೂ ಅಪಾರ ತಾಳ್ಮೆಯ ಆಟವಾಡಿದರು. ವಿರಾಮದ ನಂತರ ಪೂಜಾರ ಅರ್ಧಶತಕದ ಗಡಿ ದಾಟಿದರು. ಅದಕ್ಕಾಗಿ ಅವರು 125 ಎಸೆತಗಳನ್ನು ಎದುರಿಸಿದರು. ಸ್ವಲ್ಪ ಹೊತ್ತಿನ ನಂತರ ಶ್ರೇಯಸ್ ಕೂಡ 50 (93ಎಸೆತ) ರನ್ ಗಡಿ ಮುಟ್ಟಿದರು. ಮುಂಬೈ ಆಟಗಾರನಿಗೆ ಅದೃಷ್ಟವೂ ಜೊತೆಗಿತ್ತು.

ಇಬಾದತ್ ಹುಸೇನ್ ಹಾಕಿದ 84ನೇ ಓವರ್‌ನಲ್ಲಿ ಅವರು ಬೀಟ್ ಆಗಿದ್ದರಿಂದ ಚೆಂಡು ಸ್ಟಂಪ್‌ಗೆ ಬಡಿಯಿತು. ಆದರೆ ಬೇಲ್ಸ್ ಉರುಳಲಿಲ್ಲ. ಇದರಿಂದಾಗಿ ಶ್ರೇಯಸ್ ಔಟಾಗಲಿಲ್ಲ!

ಪೂಜಾರ ಹಾಗೂ ಶ್ರೇಯಸ್ ಐದನೇ ವಿಕೆಟ್ ಜೊತೆಯಾಟದಲ್ಲಿ 149 ರನ್ ಸೇರಿಸಿದರು. ಬೆಳಿಗ್ಗೆ ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ವಿಕೆಟ್ ಗಳಿಸಿ ಸಂಭ್ರಮಿಸಿದ್ದ ಎಡಗೈ ಸ್ಪಿನ್ನರ್ ತೈಜುಲ್ ಇಸ್ಲಾಂ (84ಕ್ಕೆ3) ಈ ಜೊತೆಯಾಟಕ್ಕೂ ತಡೆಯೊಡ್ಡಿದರು. ತೈಜುಲ್ ಎಸೆತದ ತಿರುವನ್ನು ಅಂದಾಜಿಸುವಲ್ಲಿ ವಿಫಲರಾದ ಪೂಜಾರ ಕ್ಲೀನ್‌ಬೌಲ್ಡ್ ಆದರು.

ಕೊನೆಯ ಎಸೆತದಲ್ಲಿ ವಿಕೆಟ್ ಶ್ರೇಯಸ್ ಜೊತೆ ಸೇರಿದ ಅಕ್ಷರ್ ಪಟೇಲ್ (14; 26ಎ) ಎರಡು ಬೌಂಡರಿ ಗಳಿಸಿ ಆತ್ಮವಿಶ್ವಾಸದಿಂದ ಬ್ಯಾಟಿಂಗ್ ಮಾಡಿದರು. ಆದರೆ ದಿನದಾಟದ ಕೊನೆ ಎಸೆತದಲ್ಲಿ ಮಿರಾಜ್ ಎಸೆತವು ಅವರ ಪ್ಯಾಡ್‌ಗೆ ಬಡಿಯಿತು. ಅಂಪೈರ್ ಔಟ್ ನೀಡಿದರು. ಅಕ್ಷರ್ ಯುಡಿಆರ್‌ಎಸ್ ಮನವಿ ಬಳಸಿಕೊಂಡರು. ಟಿವಿ ಅಂಪೈರ್ ಕ್ರಿಸ್ ಬ್ರೌನ್ ಔಟ್ ತೀರ್ಪು ನೀಡಿದರು. ಬಾಂಗ್ಲಾ ಆಟಗಾರರು ಸಂಭ್ರಮಿಸುತ್ತ ಪೆವಿಲಿಯನ್ ಸೇರಿದರು!

ಸಂಕ್ಷಿಪ್ತ ಸ್ಕೋರು: ಭಾರತ: 90 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 278 (ಕೆ.ಎಲ್. ರಾಹುಲ್ 22, ಶುಭಮನ್ ಗಿಲ್ 20, ಚೇತೇಶ್ವರ್ ಪೂಜಾರ 90, ರಿಷಭ್ ಪಂತ್ 46, ಶ್ರೇಯಸ್ ಅಯ್ಯರ್ ಬ್ಯಾಟಿಂಗ್ 82, ಅಕ್ಷರ್ ಪಟೇಲ್ 14, ತೈಜುಲ್ ಇಸ್ಲಾಂ 84ಕ್ಕೆ3, ಮೆಹದಿ ಹಸನ್ ಮಿರಾಜ್ 71ಕ್ಕೆ2)